

Raj Shriment Yeshwantrao Hindurao Ghorpade,
Mamalakatmadar Senapathi, Ruler of Sandur.

(Shri Mahavir Press, Belgaum.)

SANDUR: RAJA SHRIMANT YESHWANTRAO HINDURAO GHORPADE, MAMLAKATMADAR SENAPATHI, RULER OF SANDUR.

Born: 1908. Ascended the Gadi in 1928, Assumed the reins of Government in 1930.

Married: On 22nd December 1929 the eldest daughter of Umadat-Ul-Mulk, Raj Rajendra, Major Maloji Narsingh Rao Shitole Deshmukh, Rustamjung Bahadur of Gwalior.

Heir Apparent: Shrimant Yuvraj Morar Rao Raje Ghorpade, born 7th December 1931.

Second Prince: Rajkumar Shrimant Ranjit Sinh, born 16th February 1933.

Daughter: Princess Shrimant Nirmala Raje, born 8th February 1934.

Third Prince: Shrimant Vijaya Singh Raje, Ghorpade, born 18th October 1937.

SANDUR is the only Mahratta State in South India in direct political relations with the Government of India. It is bounded on all sides by the British District of Bellary except the south where its frontier touches that of Mysore. The

Ruling House of Sandur is known by the family name of "GOOTYKER GHORPADE." This State was conquered in early eighteenth century by Raj Siddoji Rao Ghorpade. His son Raja Morar Rao Ghorpade is renowned in history as the famous "CHIEF OF GOOTY," and held sway over the Mahratta possessions south of Coleroon. During the time of Raja Morar Rao Ghorpade, the state reached the zenith of its territorial expansion. In the Carnatic and Mysore wars in which the East India Company were engaged in the middle of the eighteenth century, Morar Rao, as the staunchest ally of the British, rendered valuable assistance to the British from time to time notably in the famous siege of Arcot and Trichinopoly and also against Hyder in 1769

This family was held in high esteem by the British and included in the Treaty of 1782 with Mysore, by which the British Government reserved to themselves the liberty to reinstate Morar Rao's family in the country of Gooty, which Hyder had seized during the time of Morar Rao who died in 1776. The present extent of the State is but a corner of the country of Gooty, which was reconquered in 1790 by Venkatrao on behalf of Siddoji, the grandson of Morar Rao from Tipu Sultan.

The Peshwa who had for long coveted very much the conquest of Sandur prevailed on the East India Company to demand the surrender of Sandur in 1817 on the pretence that the Ruler of Sandur was one of his refractory vassals, whom the East India Company were bound by the Treaty of Bassein (1817) to reduce. But, when it was noticed that the Ruler of Sandur was never a vassal of the Peshwa, but that he was an "independent Prince" before the Treaty of Bassein, his former territory was restored to him in 1818, on the only condition that there should be free passage to British troops and surrender of offenders from the British territory, and that there should be no interference whatever with the internal administration of the State. These relations continue to the present day. The State possesses powers of life and death and is unfettered in the exercise of its sovereignty. The State pays no tribute to the Crown and is free from all pecuniary demands.

The Ruler is the fountain-head of all authority, judicial, Administrative and Legislative. The Government of the State is conducted by an Executive Council. To help the Government a State Council has been constituted in 1931 with a predominant non-official majority possessing the

right to initiate legistation, to move Resolutions and ask questions. A Chief Court has been constituted under the Sandur Chief Court Act (II of 1932) and arrangements have been made with the Madras Government whereby the District and Sessions Judge Ex-Officio, Bellary is appointed by the Ruler as the Nyayadhish of the Sandur Chief Court.

EXECUTIVE COUNCIL.

President.

Shrimant Sardar **B. Y. Raje Ghorpade.**

Members.

Meherban. **V. Narasimharao,** M. A., (Political Secretary.)

" **G. B. Deshmukh** (Huzur Secretary.)

" **A. B. Punde,** (General Secretary to Government.)

STATE ADVISER.

Hon'ble Mr. **R. M. Deshmukh,** B. A., LL. B., Bar-at-Law.

ಮುನ್ನುಡಿ.

ಆಂಗ್ಲೇಯರಿಗೆ ಭರತಖಂಡದ ಚಕ್ರಾಧಿಪತ್ಯಕ್ಕಿಂತಲೂ ಕವಿವರ್ಯನಾದ ಶೇಕ್ಸಪಿಯರನೇ ಮಿಗಿಲೆಂದು ಆಂಗ್ಲವಿದ್ವಾಂಸನಾದ ಕಾರ್ಲಾಯಿಲ್ಲನ ಮತವು. ಸೃಷ್ಟಿಕರ್ತನಾದ ಬ್ರಹ್ಮನಿಗೂ ಕೂಡ ಸಾಧ್ಯವಿಲ್ಲದ ಸೃಷ್ಟಿಯನ್ನು ನಿರ್ಮಿಸುವುದರಲ್ಲಿ ಬಲ್ಲಿದರಾದವರು ಕವಿಗಳೆಂದು ನೇಮಿಚಂದ್ರನೆಂಬ ಕನ್ನಡ ಕವಿಯು ತನ್ನ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ಕವಿಗಳು ಬ್ರಹ್ಮನಿಗೂ ಮಿಗಿಲೆಂಬುದೇ ಆತನ ಅಭಿಪ್ರಾಯ. ಮಂತ್ರಗಳನ್ನು ಕಂಡುಕೊಂಡ ಋಷಿಗಳು ಕವಿಗಳೆಂದೇ ವೇದದಲ್ಲಿ ಹೇಳಿದೆ. ಸ್ವಲ್ಪದರಲ್ಲಿ ಹೇಳುವುದಾದರೆ ಕವಿಗಳು ಮಹಾಜ್ಞಾನಿಗಳೂ ಜನಾಂಗದ ಗುರುಗಳೂ ಜಗದ್ವಂದ್ಯರೂ ಲೋಗರಿಗೆ ಮಾರ್ಗದರ್ಶಕರೂ ಎಂದು ಹೇಳಬಹುದು. ಇಂಥ ಕವಿಗಳ ಜನ್ಮದಿಂದ ನಾಡು ಪುನೀತವಾಗುವುದು. ಅಂಥ ಭಾಗ್ಯವು ಹಿಂದುಸ್ತಾನಕ್ಕೆ ಅನೇಕಸಾರೆ ಬಂದಿರುವುದು. ಭರತಖಂಡವು ಮಹಾವಿಭೂತಿಗಳ ಆಗರವೆಂದು ಅಭಿಮಾನದಿಂದ ಹೇಳಬಹುದು.

ಹಿಂದುಸ್ತಾನದ ಪ್ರಸಿದ್ಧ ಕವಿಗಳಲ್ಲಿ ಶ್ರೇಷ್ಠನಾದವನು ಕವಿಕುಲಗುರು ಕಾಲಿದಾಸನು. ಕಾಲಿದಾಸನನ್ನು ಭರತಖಂಡದ ಮಹಾಕವಿಗಳು ಮನದಣಿಯುವಂತೆ ಬಣ್ಣಿಸಿರುವರು. ಸಂಸ್ಕೃತ ಸುಭಾಷಿತವು ಕಾಲಿದಾಸನ ಯೋಗ್ಯತೆಯನ್ನು ಬಣ್ಣಿಸುವ ಪ್ರಕಾರವು ಹೀಗಿದೆ:—

> पुरा कवीनां गणनाप्रसंगे
> कनिष्ठिकाधिष्ठितकालिदासा
> अद्यापितत्तुल्य कवेरभावा
> दनामिका सार्थवती बभूव ॥

ಇದರ ಆಶಯವು ಕಾಲಿದಾಸನು ಅದ್ವಿತೀಯನೆಂಬುದು. ಯುರೋಪದ ಅನೇಕ ಘನವಿದ್ವಾಂಸರು ಕಾಲಿದಾಸನನ್ನು ಮುಕ್ತಕಂಠದಿಂದ ಪೊಗಳಿರು

ವರು. ಜರ್ಮನಿಯ ಅತಿ ಪ್ರಸಿದ್ಧ ಕವಿಯಾದ ಗೊಯ್ಥೆಯೆಂಬುವನು ನಮ್ಮ
ಕಾಲಿದಾಸನನ್ನು ಬಣ್ಣಿಸಿದ ಬಣಿತಿಯು ಆವ ಭಾರತೀಯನಿಗೆ ಅಭಿಮಾನ
ವನ್ನುಂಟು ಮಾಡಲಿಕ್ಕಿಲ್ಲ. ಇವು ಆತನ ವಾಕ್ಯಗಳು:—

Wouldst thou the young year's blossoms and the fruits of its decline, And all by which the soul is charmed, enraptured, feasted, fed? Wouldst thou the earth and heaven itself in one sole name combine? I Name thee, O sakuntala, and all at once is said.

ಇಂಥ ಅದ್ವಿತೀಯನಾದ ಕಾಲಿದಾಸನ ಬಗ್ಗೆ ಸಾಕಷ್ಟು ಸಂಗತಿಗಳು
ದೊರೆಯದೇ ಇರುವುದು ನಮ್ಮೆಲ್ಲರ ದುರ್ದೈವವೆಂದು ಹೇಳಬಹುದು.
ಕಾಲಿದಾಸನು ಹಿಂದುಸ್ತಾನದ ಆವ ಭಾಗದಲ್ಲಿ ಹುಟ್ಟಿದನು, ಈತನ ತಾಯಿ
ತಂದೆಗಳಾರು, ಇವೇ ಮೊದಲಾದ ವಿಷಯಗಳನ್ನು ತೃಪ್ತಿಪೂರ್ವಕವಾಗಿ
ಹೇಳಲು ಈಗಂತೂ ಸಾಧ್ಯವಿಲ್ಲ. ಈತನು ವಿಂಧ್ಯಾದ್ರಿಯಿಂದಾಚೆಗಿರುವ
ಹಿಂದುಸ್ತಾನದ ಪ್ರದೇಶವನ್ನು ಚೆನ್ನಾಗಿ ಬಲ್ಲವನಾಗಿರಬೇಕೆಂದೂ, ಮಾಳವ
ದೇಶದಲ್ಲಿ ಕೆಲಕಾಲವಾದರೂ ಇದ್ದಿರಬೇಕೆಂದೂ ಈತನ ಗ್ರಂಥಗಳಿಂದ
ಊಹಿಸಲವಕಾಶವಿದೆ. ಈತನ ಕಾಲವನ್ನು ಅನುಮಾನಿಸಲು ಕೆಲವು ಸಾಧನ
ಗಳಿವೆ.

ಮಾಲವಿಕಾಗ್ನಿಮಿತ್ರದಲ್ಲಿ ಅಗ್ನಿಮಿತ್ರನ ತಂದೆಯಾದ ಸೇನಾಪತಿ
ಪುಷ್ಯಮಿತ್ರನು ಯಾಗವನ್ನಾರಂಭಿಸಿದಂತೆಯೂ ಅಗ್ನಿಮಿತ್ರನ ಮಗನಾದ
ವಸುಮಿತ್ರನು ಯಜ್ಞದ ಕುದುರೆಯನ್ನು ಹಿಂಬಾಲಿಸಿದಂತೆಯೂ ಉಲ್ಲೇಖ
ವಿದೆ. ಈ ಸೇನಾಪತಿ ಪುಷ್ಯಮಿತ್ರನು ಕ್ರಿ. ಶ. ಪೂ. ೧೮೫ ರಿಂದ ೧೪೯ ರ
ವರೆಗೆ ಪಾಟಲಿಪುತ್ರದಲ್ಲಿ ಆಳಿದನು. ಉತ್ತರಹಿಂದುಸ್ತಾನವನ್ನೆಲ್ಲಾ ಪಾದಾ
ಕ್ರಾಂತಮಾಡಬೇಕೆಂದು ಹವಣಿಸುತ್ತಿದ್ದ ಪ್ರಸಿದ್ಧ ಗ್ರೀಕ ಅರಸನಾದ
ಮಿನಾಂಡರ (ಪಾಲಿ-ಮಿಳಿಂದ) ನ ಸಮಕಾಲದವನೂ, ಮಿನಾಂಡರನ

ಮಹತ್ವಾಕಾಂಕ್ಷೆಗೆ ನೀರೆರೆದವನೂ, ಆದುದರಿಂದ ಕಾಲಿದಾಸನು ಪುಷ್ಯಮಿತ್ರನಿಗಿಂತ ಪೂರ್ವದಲ್ಲಿ ಇರಲಾರನು. ಬಾಣನು:—

निर्गतासु नवा कस्य कालिदासस्य सूक्तिषु ।
प्रीतिर्मधुरसार्द्रासु मञ्जरीष्विव जायते ॥

ಎಂಬ ಪದ್ಯದಲ್ಲಿ ಕಾಲಿದಾಸನನ್ನು ಹೊಗಳಿರುವನು. ಕ್ರಿ. ಶ. ೬೩೪ ರಲ್ಲಿ ಹುಟ್ಟಿದ ಚಾಲುಕ್ಯವಂಶದ ಎರಡನೆಯ ಪುಲಕೇಶಿಯ ಐಹೊಳೆಯ ಶಾಸನದಲ್ಲಿ '**रविकीर्तिः कविताश्रित कालिदासभारवेः कीर्तिः।**' ಎಂದು ಶಿಲಾಶಾಸನವನ್ನು ರಚಿಸಿದ ಕವಿಯಾದ ರವಿಕೀರ್ತಿಯ ಕೀರ್ತಿಯು ಕವಿತ್ವರಚನೆಯಲ್ಲಿ ಕಾಲಿದಾಸ ಮತ್ತು ಭಾರವಿ ಕೀರ್ತಿಗೆ ಸರಿಯಾದುದೆಂದು ಹೇಳಿದೆ. ಆದುದರಿಂದ ಕಾಲಿದಾಸನು ಬಾಣನಿಗಿಂತ ಮೊದಲಿನವನು. ಮತ್ತು ಕ್ರಿ. ಶ. ೬೩೪ ಕ್ಕೂ ಪೂರ್ವದಲ್ಲಿ ಇದ್ದವನು ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುವುದು. ಇದರಿಂದ ಕಾಲಿದಾಸನು ಕ್ರಿ. ಶ. ಪೂರ್ವ ೨೦೦ ರಿಂದ ಕ್ರಿ. ಶ. ೬೦೦ ರ ಮಧ್ಯದಲ್ಲಿದ್ದನೆಂದು ಊಹಿಸಬಹುದಾಗಿದೆ. ಕಾಲಿದಾಸನ ಗ್ರಂಥಗಳಲ್ಲಿ 'ವಿಕ್ರಮೋರ್ವಶೀಯ' ವೆಂಬುದೊಂದು ನಾಟಕವು. ಇದರಲ್ಲಿಯ 'ವಿಕ್ರಮ ಪದವೂ' ಈ ನಾಟಕದಲ್ಲಿ ದೊರೆಯುವ 'ವಿಕ್ರಮ' ಪದಪ್ರಯೋಗವೂ ತನ್ನ ಪೋಷಕನಾದ "ವಿಕ್ರಮಾದಿತ್ಯ" ನಿಗೆ ಸಂಬಂಧಿಸಿ ಕವಿಯಿಂದ ಪ್ರಯೋಗಿಸಲ್ಪಟ್ಟಿರಬೇಕೆಂದೂ, ಈ ವಿಕ್ರಮಾದಿತ್ಯನು ಕ್ರಿ. ಶ. ಪೂ. ೫೭ರಲ್ಲಿ ವಿಕ್ರಮಸಂವತ್ಸರವನ್ನು ಪ್ರಾರಂಭಿಸಿದ ವಿಕ್ರಮಾದಿತ್ಯನಿರಬೇಕೆಂದೂ ಕೆಲವರ ಗ್ರಹಿಕೆ. ಪ್ರಸಿದ್ಧ ಕನ್ನಡಕವಿಯಾದ ರನ್ನನು ತನ್ನ ಪೋಷಕನಾದ ಇರಿವಬೆಡಂಗನನ್ನು ಪರ್ಯಾಯದಿಂದ ಗದಾಯುದ್ಧ (ಸಾಹಸಭೀಮವಿಜಯ) ದಲ್ಲಿ ವರ್ಣಿಸಿದಂತೆ ಕಾಲಿದಾಸನೂ ತನ್ನ ಪೋಷಕನನ್ನು ಪರ್ಯಾಯದಿಂದ ಉಲ್ಲೇಖಿಸುವುದಾದರೂ ಅಸಮಂಜಸವಲ್ಲ. ಆದರೆ, ಪಾಶ್ಚಾತ್ಯ ಪಂಡಿತರಲ್ಲಿ ಅನೇಕರು ಕಾಲಿದಾಸನು ಇಷ್ಟು ಪೂರ್ವದಲ್ಲಿ ಇದ್ದಿರಲಾರನೆಂದು ನಂಬುವರು. ಅವರು ಆತನು ಸುಮಾರು ಕ್ರಿ. ಶ, ನಾಲ್ಕನೆಯ ಶತಕದ ಅಂತ್ಯದಲ್ಲಿ ಅಥವಾ ಕ್ರಿ. ಶ. ೫ನೆಯ ಶತಕದ ಪೂರ್ವಾರ್ಧದಲ್ಲಿ ಇದ್ದಿರಬೇಕೆಂಬ ಅನುಮಾನಿಸುವರು. ಅದು ಸರಿಯೆಂದು ಊಹಿಸಲು ಬಲವಾದ

ಕಾರಣಗಳಾದರೂ ಉಂಟು. ಕಾಲಿದಾಸನ ಪೋಷಕನು ವಿಕ್ರಮಾದಿತ್ಯನಿದ್ದನೆಂದು ಇಟ್ಟುಕೊಂಡರೆ ವಿಕ್ರಮ ಸಂವತ್ಸರ ಸ್ಥಾಪಕನಾದ ವಿಕ್ರಮಾದಿತ್ಯನಷ್ಟೇ ಬಲಾಢ್ಯನಾದ ಮತ್ತೊರ್ವ ವಿಕ್ರಮಾದಿತ್ಯನನ್ನು ನಾವು ಇತಿಹಾಸದಲ್ಲಿ ಕಾಣಬಹುದು. ಆತನು ಗುಪ್ತವಂಶದ ಪ್ರಸಿದ್ಧ ಪುರುಷನು. ಈತನ ಹೆಸರು ೨ನೆಯ ಚಂದ್ರಗುಪ್ತವಿಕ್ರಮಾದಿತ್ಯನೆಂಬುದು ಈತನು ಮಾಲವ ದೇಶಕ್ಕೆ ಅಧಿಪತಿಯಾಗಿದ್ದನು, ಅತಿಪ್ರಸಿದ್ಧನೂ ವಿದ್ಯಾಪಕ್ಷಪಾತಿಯೂ ಆಗಿದ್ದನು. ರಘುವಂಶದಲ್ಲಿ ಬರುವ ರಘುವಿನ ದಿಗ್ವಿಜಯ ಮತ್ತು ದಿಗ್ವಿಜಯಾನಂತರ ಮಾಡಿದ ಯಜ್ಞ ಇವು ಚಂದ್ರಗುಪ್ತ ಮಹಾರಾಜನ ತಂದೆಯಾದ ಸಮುದ್ರಗುಪ್ತಮಹಾರಾಜನ ದಿಗ್ವಿಜಯ ಮತ್ತು ಯಜ್ಞಗಳನ್ನು ಪರ್ಯಾಯದಿಂದ ಸೂಚಿಸಬಹುದು. ಚಂದ್ರಗುಪ್ತನ ಮಗನು ಕುಮಾರಗುಪ್ತನೆಂಬುವವನು. ಆತನ ಮಗನು ಸ್ಕಂದಗುಪ್ತನೆಂಬುವವನು. ಕುಮಾರಸಂಭವವನ್ನು ಕವಿಯು ಕುಮಾರಗುಪ್ತನ ಜನ್ಮಕಾಲದಲ್ಲಿ ಬರೆದು ತನ್ನ ಪೋಷಕನನ್ನು ತಣಿಸಿರಬಾರದೇಕೆ? ಇವುಗಳನ್ನು ಸೂಕ್ಷ್ಮವಾಗಿ ವಿಮರ್ಶಾತ್ಮಕದೃಷ್ಟಿಯಿಂದ ವಿಚಾರಿಸಿದಲ್ಲಿ ಕಾಲಿದಾಸನು ಚಂದ್ರಗುಪ್ತ ಮಹಾರಾಜನ ಕಾಲದಲ್ಲಿ ಇರುವ ಸಂಭವವು ಹೆಚ್ಚಾಗಿದೆಯೆಂದು ಅನ್ನಿಸುವುದು. ಗುಪ್ತರು ಹಿಂದೂಧರ್ಮ ಪ್ರವರ್ತಕರೂ ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಸಂಸ್ಕೃತಭಾಷೆಯು ಗುಪ್ತರ ಕಾಲದಲ್ಲಿ ರಾಜಾಶ್ರಯವನ್ನು ಹೊಂದಿ ಬೆಳೆಯತೊಡಗಿತೆಂಬುದು ಗುಪ್ತರ ಶಿಲಾಶಾಸನವನ್ನು ಓದಿದವರಿಗೆ ಮನವರಿಕೆಯಾಗಬಹುದು.

ಇನ್ನು ಕಾಲಿದಾಸನು ಹಿಂದುಸ್ಥಾನದ ಆವ ಭಾಗದಲ್ಲಿ ಜನ್ಮವೆತ್ತಿರಬಹುದೆಂದು ನಿರ್ಣಯಿಸುವುದಾದರೂ ಇಷ್ಟೇ ಕಠಿಣವಾಗಿರುವುದು. ಮಹಾರಾಷ್ಟ್ರೀಯರು ತಮ್ಮವನೆಂದೂ, ಬಂಗಾಲಿಗಳು ತಮ್ಮವನೆಂದೂ, ಇನ್ನೂ ಕೆಲವರು ಈತನು ಕಾಶ್ಮೀರದವನೆಂದೂ ಹೇಳುವರು ಇವರೆಲ್ಲರಿಗೂ ತಮ್ಮ ತಮ್ಮ ಹೇಳಿಕೆಯನ್ನು ಸಮರ್ಥಿಸಲು ಕಾಲಿದಾಸನ ಗ್ರಂಥಗಳಿಂದ ಸ್ವಲ್ಪ ಸ್ವಲ್ಪಾದರೂ ಆಧಾರಗಳು ದೊರೆಯುತ್ತವೆ. ಈತನ ನಾಟಕಗಳಲ್ಲಿ ಉಪಯೋಗಿಸಲ್ಪಟ್ಟ ಪ್ರಾಕೃತವೂ ಮೇಘದೂತದಲ್ಲಿ ಹೇಳಿದ ರಾಮಗಿರಿ ಮತ್ತು ಜನಸ್ಥಾನಗಳೂ ಮಹಾರಾಷ್ಟ್ರದವರ ಹೇಳಿಕೆಗೆ ಅನುಕೂಲವಾದುವು. ಕಾಲಿ

ದಾಸ ಎಂಬುದೇ ಈತನು ಕಾಲಿಯ ಭಕ್ತನೆಂಬುದಕ್ಕೆ ಆಧಾರ. ಶಾಕ್ತರಿಗೆ ಈಗಲೂ ಬಂಗಾಲವು ಮುಖ್ಯಸ್ಥಾನವಾಗಿದೆ. ಈತನು ಹಿಮಾಲಯಪರ್ವತದ ವರ್ಣನೆಯನ್ನು ಪ್ರತ್ಯಕ್ಷನೋಡಿದವರಂತೆ ಬಣ್ಣಿಸುವದರಿಂದ ಈತನು ಹಿಮಾಲಯದಲ್ಲಿ ಸಂಚರಿಸಿರಬೇಕೆಂದು ಕೆಲವರ ಗ್ರಹಿಕೆ. ಆದುದರಿಂದ ಈತನು ಹಿಮಾಲಯದ ಸಮೀಪದ ಕಾಶ್ಮೀರದವನಿರಬೇಕೆಂದು ಕೆಲವರ ಮತವು. ಇವುಗಳಲ್ಲಿ ಯಾವುದು ಸತ್ಯವಾದುದೆಂದು ಸರಿಯಾಗಿ ನಿರ್ಧರಿಸುವದು ಈಗ ಸುಲಭವಲ್ಲ.

ಕಾಲಿದಾಸನು ಆಗಮಿಕಶೈವನೆಂಬುದು ಆತನ ಶಬ್ದಗಳಿಂದಲೇ ಸಿದ್ಧವಾಗುವುದು. ಆತನ ಮೂರೂ ನಾಟಕಗಳ ನಾಂದೀಪದ್ಯದಲ್ಲಿರುವ ಶಿವಸ್ತುತಿಯೂ ರಘುವಂಶದ ಆರಂಭದ ಮಂಗಲಪದ್ಯವಾದ

वागर्थाविवसंपृक्तौ वागर्थप्रतिपत्तये ।
जगतः पितरौ वंदे पार्वतीपरमेश्वरौ ।

ಎಂಬ ಪದ್ಯವೂ ಸಾಕ್ಷಿಯಾಗಿವೆ. ಆಗಮಿಕಶೈವರು ಶಿವನೇ ಶ್ರೇಷ್ಠದೈವವೆಂದು ನಂಬಿದಾಗ್ಯೂ ಅನ್ಯದೇವತೆಗಳನ್ನು ಮನ್ನಿಸುವರು.

ಕುಮಾರಸಂಭವವು ಸಂಸ್ಕೃತ ಸಾಹಿತ್ಯದಲ್ಲಿಯ ಮಹಾಕಾವ್ಯಗಳಲ್ಲಿ ಒಂದು. ಸಾಹಿತ್ಯದಲ್ಲಿ ಅದರ ಸ್ಥಾನವು ಉನ್ನತವಾದುದು. ಇಂಥ ಆದರಣೀಯವಾದ ಗ್ರಂಥದ ರಸಾಸ್ವಾದನೆಯನ್ನು ಅನುಭವಿಸುವುದು ಸಂಸ್ಕೃತವನ್ನರಿಯದ ಕನ್ನಡಿಗರಿಗೆ ಶಕ್ಯವಿದ್ದಿಲ್ಲ. ಪಂಡಿತ ವೈ. ನಾಗೇಶಶಾಸ್ತ್ರಿಗಳು ಇದನ್ನು ಕನ್ನಡಿಸಿ ಈ ಕೊರತೆಯನ್ನು ಬಹುಪಟ್ಟಿಗೆ ದೂರ ಮಾಡಿರುವುದು ಹೆಮ್ಮೆಪಡತಕ್ಕ ವಿಷಯ. ಮಹಾಕವಿ ಕಾಲಿದಾಸನ ಎಲ್ಲ ಗ್ರಂಥಗಳನ್ನು ಗದ್ಯ ಮತ್ತು ಪದ್ಯಗಳಲ್ಲಿ ಕನ್ನಡಿಸುವುದು ಕನ್ನಡ ಸಾಹಿತ್ಯದ ಬೆಳವಣಿಗೆಯ

ದೃಷ್ಟಿಯಿಂದ ಬಹಳ ಮಹತ್ವವಾದುದು, ಪಂ. ವೈ. ನಾಗೇಶಶಾಸ್ತ್ರಿಗಳು ಈಗಾಗಲೇ ರಘುವಂಶವನ್ನು ಸಂಪೂರ್ಣವಾಗಿ ಷಟ್ಪದಿಯಲ್ಲಿ ಪರಿವರ್ತಿಸಿ ಕನ್ನಡಿಗರಿಗೆ ಪರಿಚಿತರಾಗಿರುವರು. ಇವರು ಇನ್ನುಳಿದ ಕಾಲಿದಾಸನ ಗ್ರಂಥಗಳನ್ನು ಕನ್ನಡಕ್ಕೆ ಇಳಿಸಿ ಇದಕ್ಕೂ ಹೆಚ್ಚಾಗಿ ಕನ್ನಡ ಸಾಹಿತ್ಯ ಸೇವೆಯಲ್ಲಿ ಮುಂದುವರಿಯಲೆಂದೂ, ಕನ್ನಡಿಗರೆಲ್ಲರು ಇವರಿಗೆ ತುಂಬಾ ಪ್ರೋತ್ಸಾಹಿಸಲೆಂದೂ ಹಾರೈಸುವ

ಬೆಳಗಾವಿ
ತಾ. ೧೮-೨-೩೮.

ತಮ್ಮ,
ಶಿ. ಚ. ನಂದೀಮಠ,
(ಪ್ರಿನ್ಸಿಪಾಲ, ಲಿಂಗರಾಜಕಾಲೇಜು.)

ವಿಜ್ಞಾಪನೆ.

೧೯೩೨ ನೆಯ ವರ್ಷದಲ್ಲಿ ಪ್ರಕಟವಾಗಿರುವ ನನ್ನ ಕರ್ಣಾಟಕ ರಘುವಂಶದ ಮುನ್ನುಡಿಯಲ್ಲಿ—"ನನ್ನ ಸನ್ಮಿತ್ರರಾದ ಶ್ರೀಮಾನ್ ವೈ. ಮಹಾಬಲೇಶ್ವರಪ್ಪನವರು, ಡಿ. ಬೋ. ಪ್ರೆಸಿಡೆಂಟ ಬಳ್ಳಾರಿ. ಇವರು:-- ಕನ್ನಡ ಕವಿಗಳು ಸಂಸ್ಕೃತ ಪ್ರಸಿದ್ಧ ನಾಟಕಗಳನ್ನೆಲ್ಲಾ ಕನ್ನಡಕ್ಕೆ ಪರಿವರ್ತಿಸಿರುವರು. ಆದರೆ, ಅವರು ಸಂಸ್ಕೃತದ ಪ್ರಸಿದ್ಧ ಕಾವ್ಯಗಳ ಕಡೆಗೆ ಹೆಚ್ಚು ಗಮನಕೊಟ್ಟಿರುವಂತೆ ಕಾಣಲಿಲ್ಲ. ನೀವು ಶ್ರೀಕಾಳಿದಾಸನ ರಘುವಂಶ ಕುಮಾರಸಂಭವ ಕಾವ್ಯಗಳನ್ನು ಹೈಸ್ಕೂಲು ಕಾಲೇಜುಗಳ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿಡುವಂತೆ ಪದ್ಯರೂಪದಿಂದ ಪರಿವರ್ತಿಸುವುದು ಯೋಗ್ಯವೆಂದು ಸೂಚಿಸುವುದಲ್ಲದೆ, ತುಂಬಾ ಪ್ರೋತ್ಸಾಹವನ್ನಿತ್ತು ಪರಿವರ್ತನವನ್ನು ಪ್ರಾರಂಭಿಸುವಂತೆ ಮಾಡಿದರು ಎಂದು" ಬರೆದಿದ್ದೆನು. ಅವರ ಪ್ರೋತ್ಸಾಹದಿಂದ ಮೊದಲು ಪರಿವರ್ತಿಸಿ ಪ್ರಕಟಿಸಿದ ಕರ್ಣಾಟಕರಘುವಂಶವು ಕನ್ನಡಿಗರ ಪ್ರೀತ್ಯಾದರಗಳನ್ನು ಸಂಪಾದಿಸಿತು. ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀ. ಮೈಸೂರು ಮಹಾರಾಜರ ಸನ್ನಿಧಿಯಿಂದ ಆಸ್ಥಾನ ವಿದ್ವಾಂಸನ ಸ್ಥಾನವನ್ನು ಪಡೆದುಕೊಟ್ಟುದಲ್ಲದೆ ಮುಂಬಯಿ ಮದ್ರಾಸು ವಿಶ್ವವಿದ್ಯಾನಿಲಯಗಳ ಪಠ್ಯಪುಸ್ತಕವಾಗಿಡಲ್ಪಟ್ಟು ಪರಿವರ್ತನಶ್ರಮವು ಸಾರ್ಥಕವಾಗುವಂತೆ ಮಾಡಿತು. ಎಂದು ನನ್ನ ಕನ್ನಡ ಬಂಧುಗಳಲ್ಲಿ ಅತ್ಯಾನಂದದಿಂದ ವಿಜ್ಞಾಪಿಸಿಕೊಳ್ಳುವೆನು.

ಮೇಗಣ ಸೂಚನೆಯಂತೆ ಒಂದೆರಡು ವರ್ಷಗಳಲ್ಲಿಯೇ ಶ್ರೀಕಾಳಿದಾಸನ ಕುಮಾರಸಂಭವವನ್ನೂ ಪರಿವರ್ತಿಸಬೇಕೆಂದಿದ್ದೆನು. ಆದರೆ, ಕೀರ್ತಿ

ಕ್ಷೇಷರಾದ ರಾಜಕವಿಭೂಷಣ, ಶ್ರೀಲಿಂಗರಾಜ ಅರಸು ಮೈಸೂರು, ಇವರು ಶ್ರೀಮದ್ಭಗವದ್ಗೀತೆಯನ್ನು ಮೊದಲು ಪರಿವರ್ತಿಸುವುದಾಗಿ ಸೂಚಿಸಿದ್ದರಿಂದ ಮೊದಲು ಗೀತೆಯ ಪರಿವರ್ತನವನ್ನು ಮಾಡಿ ಪ್ರಕಟಪಡಿಸಬೇಕಾಯ್ತು. ಗೀತೆಯಾದರೂ ಮೈಸೂರು ಮಹಾರಾಜರಿಂದ ಪಾರಿತೋಷಿಕವನ್ನು ಪಡೆದುದಲ್ಲದೆ ಸರ್ವಕನ್ನಡಿಗರ ಪ್ರೀತಿಪಾತ್ರವಾದುದಕ್ಕೆ ಸಂತೋಷಿಸುವೆನು.

ಈ ವರ್ಷದಲ್ಲಿ ಶ್ರೀಕುಮಾರಸಂಭವದ ಎಂಟು ಸರ್ಗಗಳನ್ನು ಮಾತ್ರ ಕನ್ನಡಿಸಿ ಪ್ರಕಟಿಸಿರುವೆನು. ಇದರಿಂದಲೂ ಕನ್ನಡಿಗರಿಗೆ ಯತ್ಕಿಂಚಿತ್ ಪ್ರಯೋಜನವಾದರೆ ನನ್ನ ಶ್ರಮವು ಸಫಲವಾಗುವುದೆಂದು ಭಾವಿಸುವೆನು.

ಪರಿವರ್ತನ ಪದ್ಧತಿ:— ಶ್ರೀಕುಮಾರಸಂಭವಕ್ಕೆ ಸಂಸ್ಕೃತದಲ್ಲಿ ಅನೇಕ ವ್ಯಾಖ್ಯಾನಗಳಿರುವವು. ಅವುಗಳಲ್ಲಿ ಶ್ರೀಕೋಲಾಚಲ ಮಲ್ಲಿನಾಥನ ಸಂಜೀವಿನೀ ವ್ಯಾಖ್ಯಾನವೇ ಉತ್ತಮವಾದುದೆಂದು ಅನೇಕ ಪಂಡಿತರಭಿಪ್ರಾಯವಿರುವುದು. ಆದುದರಿಂದ ನಾನು ಮಲ್ಲಿನಾಥನ ವ್ಯಾಖ್ಯಾನಕ್ಕನುಸರಿಸಿ ಕುಮಾರಸಂಭವವನ್ನು ಕನ್ನಡಿಸಿರುವೆನು. ಕನ್ನಡಿಸಿದ ಪದ್ಯಗಳಲ್ಲಿ ಬಹಳವಾಗಿರುವುದು ಕಂದಪದ್ಯಗಳು. ಇತರ ವೃತ್ತಗಳು ಕೆಲವೇ ಇರುವವು, ಅಲ್ಲಲ್ಲಿ ಅವತರಣಿಕೆಯಂತಿರುವ ಗದ್ಯಭಾಗವು ಮಾತ್ರ ಸ್ವಕಲ್ಪಿತವು. ಪದ್ಯಗಳನ್ನು ಮೂಲಗ್ರಂಥದ ಅರ್ಥಕ್ಕೆ ನ್ಯೂನಾಧಿಕಭಾವವುಂಟಾಗದಂತೆ ನನ್ನ ಅಲ್ಪಮತಿಗೆ ತಿಳಿದ ಮಟ್ಟಿಗೆ ಪರಿವರ್ತಿಸಲು ಯತ್ನಿಸಿರುವೆನು. ಇದರ ಗುಣದೋಷ ವಿಮರ್ಶನವು ಪಂಡಿತರ ಭಾಗದ್ದಾಗಿರುವುದು.

ಅರ್ಪಣ:—ನನ್ನ ಕುಮಾರಸಂಭವದ ಹಸ್ತಲಿಖಿತ ಪ್ರತಿಯನ್ನು ಆದರಾತಿಶಯದಿಂದ ಓದಿ ನೋಡಿ—ಈ ವಿಧದ ಸಾಹಿತ್ಯಸೇವೆಯನ್ನು ಇನ್ನೂ ಅಧಿಕವಾಗಿ ಮಾಡುವುದಕ್ಕೆ ನನ್ನನ್ನು ತಮ್ಮ 'ಆಸ್ಥಾನವಿದ್ವಾಂಸ' ನನ್ನಾಗಿ

ಮಾಡಿಕೊಂಡಂತೆ ಅಪ್ಪಣೆಯಿತ್ತು, ಪ್ರೋತ್ಸಾಹಿಸಿದ್ದಲ್ಲದೆ, ಈ ಕಾವ್ಯವನ್ನು ತಮಗೆ ಅರ್ಪಣಮಾಡಲು ಒಪ್ಪಿಗೆಯನ್ನು ದಯಪಾಲಿಸಿ, ತಮ್ಮ ಮತ್ತು ತಮ್ಮ ರಾಜ್ಯಭಾರದ ಸಂಕ್ಷಿಪ್ತಚರಿತ್ರೆಯನ್ನು ಈ ಕಾವ್ಯದಲ್ಲಿ ಪ್ರಕಟಿಸಲು ಅನುಮತಿಯನ್ನಿತ್ತುದಕ್ಕಾಗಿ ಸಂಡೂರಿನ ಶ್ರೀಮಹಾರಾಜರಿಗೆ ನನ್ನ ಕೃತಜ್ಞತೆಯನ್ನು ನಮ್ರ ಭಾವದಿಂದ ಸಮರ್ಪಿಸುವೆನು.

ಅಭಿನಂದನ:—ಈ ಕಾವ್ಯಕ್ಕೊಪ್ಪುವಂತೆ ಮುನ್ನುಡಿಯನ್ನು ಬರೆದು ಪ್ರೋತ್ಸಾಹಿಸಿದ ಬೆಳಗಾವಿ ಲಿಂಗರಾಜಕಾಲೇಜಿನ ಪ್ರಿನ್ಸಿಪಾಲರೂ, ಮುಂಬಯಿ ವಿಶ್ವವಿದ್ಯಾಲಯದ ಕನ್ನಡಾಭ್ಯಾಸಮಂಡಲದ ಅಧ್ಯಕ್ಷರೂ, ಸಂಸ್ಕೃತಾಭ್ಯಾಸಮಂಡಲದ ಸಭಾಸದರೂ ಆದ ಶಿ. ಚ. ನಂದೀಮಠ, M. A, PH. D, M. R. A. S. ಇವರಿಗೆ ನನ್ನ ಅಭಿನಂದನವನ್ನರ್ಪಿಸುವೆನು. ಮತ್ತು ಕಾಲಿದಾಸನ ಕಾಲದೇಶಕವಿತಾದಿ ವಿಷಯಗಳು ವಾಚಕರಿಗೆ ಹೃದಯಂಗಮವಾಗುವರೀತಿಯಲ್ಲಿ ಒಂದು ವಿಸ್ತಾರವಾದ ಲೇಖನವನ್ನು ಬರೆದು ಕೊಟ್ಟು ಈ ಕಾವ್ಯದಲ್ಲಿ ಪ್ರಕಟಿಸಲು ಸಹಾಯ ಮಾಡಿದ್ದಕ್ಕಾಗಿ ನನ್ನ ಸನ್ಮಿತ್ರರೂ ಲಿಂಗರಾಜ ಕಾಲೇಜಿನ ಕನ್ನಡ ಪ್ರೋಫೇಸರರೂ ಆದ ವಿ. ಜಿ. ಕುಲಕರ್ಣಿ ಎಂ, ಎ, ಎಲ್, ಎಲ್, ಬಿ. ಇವರಿಗೂ, ಮತ್ತು ನನ್ನ ಸನ್ಮಿತ್ರರಾದ ಶಿ. ಶಿ. ಬಸವನಾಳು M, A, M, R, A, S, ಕನ್ನಡ ಪ್ರೊಫೇಸರ್, ಲಿಂಗರಾಜ ಕಾಲೇಜ ಇವರಿಗೂ, ಸಕಾಲಕ್ಕೆ ಅಂದವಾಗಿ ಈ ಗ್ರಂಥವನ್ನು ಮುದ್ರಿಸಿಕೊಟ್ಟು ಸಹಕರಿಸಿದ ಮಹಾವೀರ ಮುದ್ರಣಾಲಯದ ಚಾಲಕರಿಗೂ ನನ್ನ ಅಭಿನಂದನವನ್ನು ಸಮರ್ಪಿಸುವೆನು.

ವಾಙ್ಮಯ ಸೇವಾಭಿಲಾಷಿ

ವೈ. ನಾಗೇಶಶಾಸ್ತ್ರಿ.

ಅಭಿಪ್ರಾಯ.

ವಿದ್ವಾನ್ ವೈ. ನಾಗೇಶಶಾಸ್ತ್ರಿಗಳು ರಘುವಂಶ, ಭಗವದ್ಗೀತೆ ಮೊದಲಾದುವುಗಳನ್ನು ಕನ್ನಡಕ್ಕೆ ಪರಿವರ್ತಿಸಿ ಕನ್ನಡಿಗರಿಗೆ ಈಗಾಗಲೆ ಚಿರಪರಿಚಿತರಾಗಿದ್ದಾರೆ. ಇದೀಗ ಕುಮಾರಸಂಭವ ಮಹಾಕಾವ್ಯವನ್ನೂ ಲಲಿತವಾಗಿ ಕನ್ನಡಿಸಿ ಕರ್ಣಾಟಕಕ್ಕೆಲ್ಲ ಮಹದುಪಕಾರ ಮಾಡಿದ್ದಾರೆ. ಇವರು ಮೈಸೂರ ಮತ್ತು ಸಂಡೂರ ಸಂಸ್ಥಾನಗಳ ಆಸ್ಥಾನ ಪಂಡಿತರಾಗಿರುವುದು ಇವರ ವಿದ್ವತ್ತೆಯ ದ್ಯೋತಕವಾಗಿದೆಯೆಂದು ಬೇರೆಯಾಗಿ ಹೇಳಬೇಕಾಗಿಲ್ಲ. ಈ ಕಾವ್ಯವು ಕನ್ನಡ ಸಾಹಿತ್ಯಕ್ಕೆ ಅಲಂಕಾರಪ್ರಾಯವಾಗಿ ಎಲ್ಲರ ಆದರಕ್ಕೆ ಪಾತ್ರವಾಗುವುದೆಂದು ಹಾರೈಸುತ್ತೇನೆ.

ಬೆಳಗಾವಿ.
ತಾ|| ೨೦-೨-೧೯೩೮.

ಶಿ. ಶಿ. ಬಸವನಾಳ.

ಕವಿಕುಲಲಲಾಮ ಕಾಲಿದಾಸ.

ಸನ್ಮಾನ್ಯ ಮಿತ್ರರೂ ಹಿರಿಯರೂ ಆದ ಪಂಡಿತ ನಾಗೇಶಶಾಸ್ತ್ರಿಗಳು ತಮ್ಮ 'ಕರ್ಣಾಟಕ ಕುಮಾರಸಂಭವ'ದ ಮೊದಲಲ್ಲಿ ಸೇರಿಸಲಿಕ್ಕೆ ಕಾಲಿದಾಸನ ಸಂಬಂಧವಾಗಿ ಒಂದು ಚಿಕ್ಕ ಲೇಖನವನ್ನು ಬರೆದು ಕೊಡಬೇಕೆಂದು ಕೇಳಿ ಸನ್ಮಾನದ ಒಂದು ಭಾರವನ್ನೇ ನನ್ನ ಮೇಲೆ ಹೊರಿಸಿದ್ದಾರೆ. ಹೀಗೆ ಮಾಡುವುದಕ್ಕೆ ಅವರು ನನ್ನಲ್ಲಿಟ್ಟಿರುವ ಪ್ರೀತಿ ವಿಶ್ವಾಸಗಳು ಕಾರಣವಲ್ಲದೆ ನನ್ನ ಅರ್ಹತೆಯಲ್ಲವೆಂದು ನಾನು ಭಾವಿಸಿದ್ದೇನೆ. ನಾನು ಸಂಸ್ಕೃತದಲ್ಲಿ ಪರಿಣತಿಯನ್ನು ಸಂಪಾದಿಸಿದವನಲ್ಲ. ಶಾಲೆ ಕಾಲೇಜುಗಳಲ್ಲಿ ನಾನು ವ್ಯಾಸಂಗ ಮಾಡಿದುದು ಹೆಚ್ಚಾಗಿ ಇಂಗ್ಲೀಷ ಸಾಹಿತ್ಯದಲ್ಲಿ. ಈಗ ಕಾಲೇಜಿನಲ್ಲಿ ಕಲಿಸುವುದು ಕನ್ನಡ ಮತ್ತು ಇಂಗ್ಲೀಷ ಸಾಹಿತ್ಯಗಳನ್ನು. ಹೀಗೆ ವಿಚಾರ ಮಾಡಿದರೆ ಕಾಲಿದಾಸನ ಬಗ್ಗೆ ಬರೆಯಲಿಕ್ಕೆ ನಾನು ಕೈಹಾಕುವುದು ದಿಟ್ಟತನವೆಂದೇ ಎನಿಸಬಹುದು. ಆದರೆ ಈ ಕೆಲಸಕ್ಕೆ ಕೈಹಾಕುವದಕ್ಕೆ ಎರಡು ಕಾರಣಗಳು. ಮಾನ್ಯಮಿತ್ರರ ಇಷ್ಟವನ್ನು ನೆರವೇರಿಸಲೇಬೇಕೆಂಬ ಕರ್ತವ್ಯಭಾವನೆ ಒಂದು; ಎರಡನೆಯದು, ಕಾಲಿದಾಸನಲ್ಲಿರುವ ನನ್ನ ಭಕ್ತಿಭಾವ. ಕಾಲಿದಾಸನ ವಿಷಯವಾಗಿ ಬರೆಯಲಿಕ್ಕೆ ನನಗೆ ಅರ್ಹತೆ ಇಲ್ಲನೆಂದು ಹೇಳಿದರೂ ಒಂದು ಬಗೆಯಾದ ಅರ್ಹತೆ ನನಗೆ ಇದೆಯೆಂದು ಭಾವಿಸುತ್ತೇನೆ. ಅದೇನೆಂದರೆ ಕಾಲಿದಾಸ ಕವಿಯಲ್ಲಿ ನನಗೆ ಅಪರಿಮಿತವಾದ ಪೂಜ್ಯ ಭಾವವಿದೆ. ಈ ಮಾತು ಪಂಡಿತರಿಗೂ ಗೊತ್ತು. ಎಂತಲೆ ಅವರು ಈ ಕೆಲಸಕ್ಕೆ ನನ್ನನ್ನು ನಿಯೋಜಿಸಿರಬಹುದು. ಆದರೆ ಈ ಮಹಾಕವಿಯ ವಿಷಯವಾಗಿ ಬರೆವುದಕ್ಕೆ ಇದೊಂದೇ ಗುಣವು (?) ಸಾಕೆ? ಪಂಡಿತರಿಗೆ ಈ ಅವಕಾಶವನ್ನು ಉಂಟು ಮಾಡಿಕೊಟ್ಟದ್ದಕ್ಕಾಗಿ ಕೃತಜ್ಞತೆಯ ವಂದನೆಗಳನ್ನು ಸಮರ್ಪಿಸಿ, ಕವಿಕುಲಲಲಾಮನಾದ ಕಾಲಿದಾಸನ ಅಡಿದಾವರೆಗಳಲ್ಲಿ ನನ್ನ ಒಂದೆರಡು ವಾಕ್ಯಕುಸುಮಾಂಜಲಿಗಳನ್ನು ಇರಿಸುವ ಯತ್ನ ಮಾಡುತ್ತೇನೆ.

ಕಾವ್ಯರಸಾಸ್ವಾದನೆಯು ಹೆಚ್ಚಾಗಿ ವೈಯಕ್ತಿಕವಿಷಯವಾಗಿದೆ. ಆದುದರಿಂದ ಈ ವಿಷಯದಲ್ಲಿ ರುಚಿವೈಚಿತ್ರ್ಯಕ್ಕೆ ಬೇಕಾದಷ್ಟು ಎಡೆಯಿದೆ.

ಕಾಲಿದಾಸನ ಕಾವ್ಯಗಳ ವಿಷಯವಾಗಿ ನಾನು ಹೇಳುವ ಮಾತುಗಳು ಅತಿಶಯೋಕ್ತಿಪೂರಿತವಾದುವೆಂದು ಎನಿಸಬಹುದೆಂಬ ಭೀತಿಯು ನನಗಿದೆ. ನಾನು ಓದಿದ ಇನ್ನುಳಿದ ಯಾವ ಕವಿಯ ಕೃತಿಗಳೂ ಕಾಲಿದಾಸನ ಕೃತಿಗಳಷ್ಟು ನನ್ನ ಹೃದಯಕ್ಕೆ ಆಹ್ಲಾದವನ್ನುಂಟುಮಾಡಿಲ್ಲ, ಸೌಂದರ್ಯಾನುಭೂತಿಯನ್ನುಂಟುಮಾಡಿಲ್ಲ. ಕಾಲಿದಾಸನ ಎಷ್ಟೋ ಪದ್ಯಗಳು ನನ್ನ ಚಿತ್ತಭಿತ್ತಿಯ ಮೇಲೆ ವಜ್ರದ ಮೊಳೆಗಳಂತೆ ಕೀಲಿಸಿ ಬಿಟ್ಟಿವೆ; ನಿಸರ್ಗದ ನಿಗೂಢ ಸೌಂದರ್ಯಗಾಂಭೀರ್ಯದ ಮೇಲೆ ಹೊಸ ಬೆಳಕನ್ನು ಬೀರಿ ಅವುಗಳಲ್ಲಿ ಅವಿತುಕೊಂಡಿರುವ ಚೆಲುವನ್ನು ತೋರಿಸಿವೆ. ಕಾಲಿದಾಸನಲ್ಲಿ ನನಗಿರುವ ಉತ್ಸಾಹ ಹಾಗೂ ಆದರ ಭಾವವನ್ನು ಇನ್ನಿತರರಲ್ಲಿಯೂ ಕಾಣಬೇಕೆಂಬ ಆಶೆ ನನಗಿದೆ. ಸಂಸ್ಕೃತವನ್ನು ಬಲ್ಲವರಿಗೆ ಮಾತ್ರವಲ್ಲದೆ ಭಾರತೀಯರಾದವರಿಗೆಲ್ಲರಿಗೂ ಕಾಲಿದಾಸನ ಕೃತಿಗಳ ಅರಿವೂ ಅವನಲ್ಲಿ ಆದರ ಭಾವವೂ ಇರಲೇಬೇಕೆಂದು ನನ್ನ ಅಭಿಪ್ರಾಯ. ಆದುದರಿಂದ ಕಾಲಿದಾಸನ ಕಾವ್ಯರತ್ನವಾದ ಕುಮಾರ ಸಂಭವವನ್ನು ಸುಲಭವಾದ ಕನ್ನಡ ಪದ್ಯಗಳಲ್ಲಿ ಪರಿವರ್ತಿಸಿ ಕನ್ನಡಜನಾಂಗಕ್ಕೆ ಅರ್ಪಿಸಿದ್ದಕ್ಕಾಗಿ ಪಂಡಿತ ನಾಗೇಶಶಾಸ್ತ್ರಿಗಳಿಗೆ ಧನ್ಯವಾದಗಳು ಸಲ್ಲತಕ್ಕುವು.

ಕವಿಕುಲಗುರುವೆಂದು ಭರತಭೂಮಿಯಲ್ಲಿ ಖ್ಯಾತನಾದ ಕಾಲಿದಾಸನು ವಿಶ್ವ ಕವಿಗಳ ಮಾಲಿಕೆಯಲ್ಲಿ ಸೇರಲು ಅರ್ಹನಾದ ಕವಿಶ್ರೇಷ್ಠನೆಂದು ಆಧುನಿಕ ಯುಗದಲ್ಲಿ ಪರಿಗಣಿತನಾಗಿದ್ದಾನೆ. ಪಾಶ್ಚಾತ್ಯ ಪಂಡಿತರು ಸಂಸ್ಕೃತ ವಿದ್ಯಾವ್ಯಾಸಂಗದಲ್ಲಿ ಆಸ್ಥೆಯನ್ನು ತೋರಿಸಹತ್ತಿದಂದಿನಿಂದ ಜಗತ್ತಿನಲ್ಲಿ ಕಾಲಿದಾಸನ ಕೀರ್ತಿಯು ಬೆಳೆಯುತ್ತಲೆ ಇದೆ. ಸ್ವಮಹಿಮೆಯನ್ನು ಮರೆತ ಇಲ್ಲವೆ ತಿರಸ್ಕರಿಸಿದ ಕಳೆದ ಶತಮಾನದ 'ಸುಶಿಕ್ಷಿತ' ಭಾರತೀಯರು ಪಾಶ್ಚಾತ್ಯ ಪಂಡಿತರ ಸ್ತುತಿಪಾಠಗಳಿಂದ ಎಚ್ಚತ್ತು ತಮ್ಮವನೇ ಆದ ಕಾಲಿದಾಸನ ಬಗ್ಗೆ ಹೆಚ್ಚಾದ ಆದರವನ್ನೂ ಅರಿವನ್ನುಂಟು ಮಾಡಿಕೊಳ್ಳುವ ಆತುರತೆಯನ್ನೂ ತೋರಿಸ ಹತ್ತಿದರು. ಪಂಡಿತ ಮಂಡಲಿಯಲ್ಲೇನೊ ಕಾಲಿದಾಸನಿಗೆ ಎಂದಿನಿಂದಲೂ ಅಗ್ರ ಸ್ಥಾನವು ಮೀಸಲಾಗಿದ್ದೇ ಇದೆ.

ಕಾಲಿದಾಸನ ಪ್ರಭಾವವು ಭರತ ಭೂಮಿಯ ಎಲ್ಲಾ ಸಾಹಿತ್ಯಗಳಲ್ಲಿಯೂ ಕಾಣಬರುತ್ತದೆ. ಕಾಲಿದಾಸನ ಉಪಮೆಗಳು, ವಿಚಾರಗಳು, ಶೈಲಿ ಮುಂತಾದ

ವುಗಳನ್ನು ಅನುಕರಣ ಮಾಡಿದ, ಇಲ್ಲವೆ ಅವುಗಳಿಂದ ಸ್ಫೂರ್ತಿಹೊಂದಿದ ಕವಿಗಳು ಹೇರಳವಾಗಿದ್ದಾರೆ. ಕನ್ನಡ ಸಾಹಿತ್ಯವನ್ನೇ ನೋಡಿದರೆ ಈ ಮಾತು ಸ್ಪಷ್ಟವಾಗುತ್ತದೆ. ಪಂಪ, ರನ್ನ, ನಾಗಚಂದ್ರ, ರುದ್ರಭಟ್ಟ, ಹರಿಹರ ಮೊದಲಾದ ಕವಿಗಳ ಕೃತಿಗಳಲ್ಲಿ ಕಾಲಿದಾಸನ ಛಾಯೆ ಅಲ್ಲಲ್ಲಿ ಕಂಡುಬರುತ್ತದೆ. ಪೂರ್ವಕವಿಗಳನ್ನು ಸ್ತುತಿಸುವಲ್ಲಿ ಬಹಳ ಜನ ನಮ್ಮ ಕವಿಗಳು ಕಾಲಿದಾಸನ ಸ್ತೋತ್ರವನ್ನೂ ಮಾಡಿದ್ದಾರೆ. ನಂಜುಂಡನೆಂಬ ಕವಿಯು ಕಾಲಿದಾಸನನ್ನು ಬಹಳ ಚಾತುರ್ಯದಿಂದ, ಚಮತ್ಕೃತಿಯುತವಾಗಿ ಹೀಗೆ ನುತಿಸಿದ್ದಾನೆ.

ಕವಿತಾವನಿತೆಯ ಸಂಗಕೆ ಪೆಣ್ತನ । ಸವಿಯಲ್ಲವೆಂದಾ ವಾಣಿ
ತವಕದಿಂ ಗಂಡುರೂಪಾಂತಳೆಂಬಂತಿರ್ದ । ಕವಿಕಾಳಿದಾಸನಿಗೆಱಗುವೆ ॥

ಇಂತಹ ಸ್ತುತಿಗಳು ನಮ್ಮ ಕವಿಗಳ ರಸಿಕತೆಯನ್ನೂ ಗುಣಗ್ರಾಹಕಶಕ್ತಿಯನ್ನೂ ತೋರ್ಪಡಿಸುತ್ತವೆ. ಕಾಲಿದಾಸನ ಕಾವ್ಯಗಳ ಅಭ್ಯಾಸವು ಸಂಸ್ಕೃತ ವಿದ್ವಾಂಸರಿಗಷ್ಟೇ ಅಲ್ಲದೆ ಭರತಖಂಡದ ಯಾವುದೇ ಸಾಹಿತ್ಯದ ಅಭ್ಯಾಸಿಗಳಿಗೂ ಆವಶ್ಯವು. ರಸಿಕವೃಂದಕ್ಕಂತೂ ಇವು ಚಿರಂತನಚಿಂತಾಮಣಿಗಳು. ವಿಶ್ವದ ಜನರೆಲ್ಲ ಓದಿ ನಲಿಯಬೇಕಾದ, ಕೊಂಡಾಡಬೇಕಾದ, ಬೆರಗುಪಡೆಯಬೇಕಾದ ಕೃತಿಗಳು ಕಾಲಿದಾಸನವು.

ಯಾವನೊಬ್ಬ ಕವಿಯ ಕಾವ್ಯದ ಅಭ್ಯಾಸಕ್ಕೆ ಆ ಕವಿಯ ಚರಿತ್ರೆ, ಕಾಲ ಮುಂತಾದವುಗಳ ಜ್ಞಾನವು ಅವಶ್ಯವೆಂದು ಈಗಿನವರ ಮತ. ಈ ಬಗೆಯಾದ ಜ್ಞಾನವಿದ್ದರೆ ಕೆಲವೊಂದು ವಿಷಯಗಳು ಹೆಚ್ಚು ಸ್ಪಷ್ಟವಾಗಿ ವಿದಿತವಾಗುವುದರಿಂದ, ಸಾಧ್ಯವಿದ್ದಲ್ಲಿ ಅಂತಹ ಜ್ಞಾನ ಮಾಡಿಕೊಳ್ಳುವದಕ್ಕೆ ಯತ್ನ ಮಾಡುವುದು ಒಳಿತಾದರೂ, ಅದು ತೀರ ಅವಶ್ಯಕವೆಂದು ನಾನು ಹೇಳಲಾರೆ. ಅವಶ್ಯವೆಂದಿಟ್ಟುಕೊಂಡರೂ ಕಾಲಿದಾಸನ ವಿಷಯದಲ್ಲಿ ಅದು ಅಷ್ಟು ಸುಲಭಸಾಧ್ಯವೂ ಇಲ್ಲ. ಒಮ್ಮೊಮ್ಮೆ, ಕವಿಯ ಕಾಲ, ಚರಿತ್ರೆ ಮುಂತಾದ ಬಾಹ್ಯ ವಿಷಯಗಳ ಜಾಲದಲ್ಲಿ ಸಿಲುಕಿ, ತೊಳಲಿ, ಕಾವ್ಯದಲ್ಲಿ ಮುಖ್ಯವಾಗಿ ಗಮನಿಸಬೇಕಾದ, ರಸನಿರೂಪಣೆ, ಕಾವ್ಯಸೌಂದರ್ಯ, ಭಾಷೆಯ ಬೆಡಗು—ಒಂದು ಮಾತಿನಲ್ಲಿ ಕಾವ್ಯಧರ್ಮವನ್ನೇ ಮರೆತು ಬಿಡುವುದೂ ಉಂಟು; ಸುಂದರಿಯಾದ ನರ್ತಕಿಯ ನರ್ತನವನ್ನು ನೋಡಬೇಕೆಂದು ಹೋದವರು, ನರ್ತಕಿಯ

ಅಜ್ಜಿ, ದಂತವಿಹೀನೆಯಾದ, ವೃದ್ಧೆಯನ್ನು ಹುಡುಕಿ ಹುಡುಕಿ ನೋಡಿ ಬೇಸರಪಟ್ಟಂತೆ. ಕಾಲಿದಾಸನ ಸಂಬಂಧವಾಗಿಯಂತೂ, ಕಾಲ ದೇಶ ಚರಿತ್ರೆ ಮುಂತಾದವುಗಳನ್ನು ನಿರ್ಧರಿಸಿ ಹೇಳುವುದು ಅಸಾಧ್ಯವೆಂದೇ ಹೇಳಬಹುದು. ಪಂಡಿತರು ಅವುಗಳನ್ನು ಗೊತ್ತುಪಡಿಸುವುದಕ್ಕಾಗಿ ಕಷ್ಟಪಡದೆ ಇಲ್ಲ. ಆದರೆ ಅವರ ಪರಿಶ್ರಮಗಳೆಲ್ಲಿ ಹೆಚ್ಚಾಗಿ ವಿಫಲವಾಗಿವೆ. ಕಾಲಿದಾಸನು ತನ್ನ ಕಾವ್ಯಗಳಲ್ಲಿ ಸ್ವವಿಷಯನ್ನು ಹೇಳಿಕೊಂಡಿಲ್ಲ. ಮಾಲವಿಕಾಗ್ನಿಮಿತ್ರದಲ್ಲಿ ತನ್ನ ಹೆಸರನ್ನು ಮಾತ್ರ ಹೇಳಿದ್ದಾನೆ. ಇವನ ವಿಷಯವಾಗಿ ಅನೇಕದಂತ ಕಥೆಗಳು ನಮ್ಮ ದೇಶದಲ್ಲಿ ಪ್ರಚಾರದಲ್ಲಿವೆ. ಆದರೆ ಅವುಗಳನ್ನು ನಂಬಲಾಗುವುದಿಲ್ಲ. ಕಾಲಿದಾಸನ ಕಾವ್ಯಗಳನ್ನು ಪಠಿಸಿದವರಿಗೆ ಇವನೊಬ್ಬ ಅಸಾಧಾರಣ ಪ್ರತಿಭಾವಂತನಾದ ಮಹಾತ್ಮನೆಂದೂ, ಪ್ರಪಂಚದ ವಿವಿಧ ಅನುಭವಗಳನ್ನು ಹೊಂದಿದವನೆಂದೂ, ನಿಸರ್ಗ-ಸೌಂದರ್ಯ-ಪ್ರಿಯನೆಂದೂ, ಸೂಕ್ಷ್ಮ ನಿರೀಕ್ಷಣ ಶಕ್ತಿಯುಳ್ಳವನೆಂದೂ ವಿವಿಧಶಾಸ್ತ್ರ ಪಾರಂಗತನೆಂದೂ ವಿದಿತವಾಗುತ್ತದೆಯೇ ಹೊರತು ಕಾಲಿದಾಸನೆಂಬ ವ್ಯಕ್ತಿಯ ಪರಿಚಯವಾಗುವುದಿಲ್ಲ. ಕಾಲಿದಾಸನ ಕಾಲ ಮತ ಮುಂತಾದವುಗಳ ಬಗ್ಗೆ ಪಂಡಿತರ, ಸಂಶೋಧಕರ ಕೆಲವು ಅಭಿಪ್ರಾಯಗಳನ್ನು– ಹೆಚ್ಚಾಗಿ ಊಹಾತ್ಮಕವಾದ ಅಭಿಪ್ರಾಯಗಳನ್ನು ಅತಿ ಸಂಕ್ಷೇಪವಾಗಿ ವಿವೇಚಿಸುತ್ತೇನೆ.

ಕಾಲಿದಾಸನ ಕಾಲ.

ಕ್ರಿಸ್ತಶಕ ಪೂರ್ವ ೧ನೆಯ ಶತಮಾನದಲ್ಲಿ ಕಾಲಿದಾಸನು ಜೀವಿಸಿದ್ದನೆಂದು ಕೆಲವು ಪಂಡಿತರು ಅಭಿಪ್ರಾಯಪಡುತ್ತಾರೆ. ಕ್ರಿ. ಶ. ೬ ನೆಯ ಶತಮಾನಲ್ಲಿ ಇದ್ದಿರಬಹುದೆಂದು ಇನ್ನು ಬೇರೆ ಪಂಡಿತರ ಅಭಿಪ್ರಾಯವು. ಮತ್ತೆ ಕೆಲವರು ಈ ಎರಡು ಶತಮಾನಗಳ ಮಧ್ಯದ ಒಂದು ಶತಮಾನದಲ್ಲಿ ಕಾಲಿದಾಸನು ಹುಟ್ಟಿ ಬೆಳೆದನೆಂದು ವಾದಿಸುತ್ತಾರೆ ಒಟ್ಟಿನಲ್ಲಿ ಕಾಲಿದಾಸನು ಕ್ರಿ. ಶ. ಪೂ. ೨ನೆಯ ಶತಮಾನದಿಂದ ಕ್ರಿ. ಶ. ೬ ನೆಯ ಶತಮಾನಗಳ ಅವಧಿಯಲ್ಲಿ ಎಂದರೆ ೭೦೦ ವರ್ಷಗಳ ಅವಧಿಯಲ್ಲಿ ಜೀವಿಸಿದ್ದನೆಂದು ನಾವು ಇಟ್ಟುಕೊಳ್ಳಬಹುದು. ಕ್ರಿ. ಶ. ಪೂ. ೮ ನೆಯ ಶತಮಾನವು ಕಾಲಿದಾಸನ ಕಾಲವಿದ್ದಿರಬಹುದೆಂದು ಕೂಡ ಒಬ್ಬ ಫ್ರೆಂಚ ಪಂಡಿತರ ಅಭಿಪ್ರಾಯ !! ಇನ್ನೊಬ್ಬ ಇಂಗ್ಲಿಷ್ ಪಂಡಿತರು ಕ್ರಿ. ಶ. ೧೧ ನೆಯ ಶತಮಾನವೇ ಕಾಲಿ

ಶಾಸನ ಕಾಲವೆಂದು ನಿರ್ಣಯಿಸಲಿಕ್ಕೆ ಯತ್ನಿಸಿದ್ದಾರೆ! ಆದರೆ ಈ ಎರಡೂ ಅಭಿಪ್ರಾಯಗಳನ್ನು ಬಹುಜನ ಪಂಡಿತರು ತ್ಯಜಿಸಿದ್ದರಿಂದ ಇವುಗಳನ್ನು ನಾವು ಬದಿಗಿರಿಸಬಹುದು.

(೧) ಡಾ. ಮಾಕ್ಸಮುಲ್ಲರ, ಭಾವು ದಾಜಿ, ಪಾಠಕ ಮೊದಲಾದ ಪಂಡಿತರು ಕಾಲಿದಾಸನು ೬ ನೆಯ ಶತಮಾನದವನೆಂದು ಅಭಿಪ್ರಾಯ ಪಡುತ್ತಾರೆ. ಆ ಅಭಿಪ್ರಾಯದ ಮಂಡನ-ಖಂಡನಗಳನ್ನು ವಿವೇಚಿಸದೆ ಒಂದೇ ಮಾತಿನಲ್ಲಿ ಕಾಲಿದಾಸನು ಇದಕ್ಕೂ ಹಿಂದಿನವನೆಂದು ಹೇಳಲಿಕ್ಕೆ ಒಂದು ಆಧಾರವಿದೆ. ಮಧ್ಯಹಿಂದುಸ್ತಾನದ ಮಂಡಸೋರ ಅಥವಾ ಪೂರ್ವ ಕಾಲದ ದಶಪುರದ ಬಳಿಯಲ್ಲಿ ಕ್ರಿ. ಶ. ೪೭೩ ರಲ್ಲಿ ಬರೆದ ಒಂದು ಶಿಲಾ ಶಾಸನವಿದೆ. ಅದನ್ನು ಬರೆದ ವತ್ಸಭಟ್ಟಿ ಎಂಬ ಕವಿಯು ಕಾಲಿದಾಸನ ಕೆಲವು ಪದ್ಯಗಳ ಅನುಕರಣ ಮಾಡಿರುವನೆಂದು ಸ್ಪಷ್ಟವಾಗಿ ಕಾಣಿಸುತ್ತದೆ. ಆದ್ದರಿಂದ ಕಾಲಿದಾಸನು ಕ್ರಿ. ಶ. ೪೭೩ ಕ್ಕೆ ಹಿಂದೆಯೇ ಇದ್ದಿರಬೇಕು.

(೨) ಡಾ. ಮಾಕ್ಡೊನೆಲ್, ಕೀಥ, ಚಕ್ರವರ್ತಿ ಮೊದಲಾದ ಪಂಡಿತರು ಕಾಲಿದಾಸನು ೫ನೆಯ ಶತಮಾನದ ಆದಿಯಲ್ಲಿ ಇದ್ದನೆಂದು ಸಾಧಿಸುತ್ತಾರೆ. ಕಾಲಿದಾಸನು ೨ನೆಯ ಶತಮಾನಕ್ಕೆ ಮುಂಚೆ ಇದ್ದಿರಲಾರನೆಂದು ಅವರ ಊಹೆ. ಇದಕ್ಕೆ ಕಾರಣವೆಂದರೆ, ಅಶ್ವಘೋಷನೆಂಬ ಬೌದ್ಧ ಕವಿಯು ೧ನೆಯ ಶತಮಾನದವನೆಂದು ನಿಶ್ಚಿತವಾಗಿದೆ; ಕಾಲಿದಾಸನ ಶೈಲಿಯು ಅಶ್ವಘೋಷನ ಶೈಲಿಯನ್ನು ಬಹಳಮಟ್ಟಿಗೆ ಹೋಲುತ್ತದೆಯಲ್ಲದೆ, ಇವರಿಬ್ಬರ ಕಾವ್ಯಗಳಲ್ಲಿಯ ಕೆಲವು ಪದ್ಯಗಳು ಒಂದೇ ಆಗಿವೆ. ಅಶ್ವಘೋಷನ ಒಂದು ನಾಟಕದಲ್ಲಿಯ ಪ್ರಾಕೃತಭಾಷೆಯು ಕಾಲಿದಾಸ ನಾಟಕಗಳಲ್ಲಿಯ ಪ್ರಾಕೃತಭಾಷೆಗಿಂತಲೂ ಪೂರ್ವದ್ದಾಗಿದೆಯಂತೆ. ಅಶ್ವಘೋಷನ ತರುವಾಯದವನಾದ ಕಾಲಿದಾಸನು ೨ನೆಯ ಶತಮಾನಕ್ಕೆ ಹಿಂದೆ ಇದ್ದಿರಲಾರನು. ಇನ್ನು ೨ನೆಯ ಶತಮಾನದಿಂದ ೪೭೩ ರ ನಡುವೆ ನಾವು ಕಾಲಿದಾಸನ ಕಾಲವನ್ನು ಗೊತ್ತುಹಿಡಿಯಬೇಕಾಯಿತು. ೪ನೆಯ ಮತ್ತು ೫ನೆಯ ಶತಮಾನಗಳಲ್ಲಿ ಪ್ರಖ್ಯಾತವಾದ ಗುಪ್ತವಂಶವು ಭರತಖಂಡದಲ್ಲಿ ತನ್ನ ಪ್ರಭುತ್ವವನ್ನು ನೆಲೆಗೊಳಿಸಿತ್ತು. ಈ ಮನೆತನದ ಎರಡನೆಯ ರಾಜನಾದ ಸಮುದ್ರಗುಪ್ತನು ಭರತಖಂಡದಲ್ಲೆಲ್ಲ ದಿಗ್ವಿಜಯ ಮಾಡಿ ಸಾಮ್ರಾಜ್ಯವನ್ನು ಸ್ಥಾಪಿಸಿದನು.

ರಘುವಂಶದಲ್ಲಿಯ ರಘುದಿಗ್ವಿಜಯ ವರ್ಣನೆಯು ಸಮುದ್ರಗುಪ್ತನ ದಿಗ್ವಿಜಯವನ್ನು ಅನುಲಕ್ಷಿಸಿ ಬರೆದದ್ದಾಗಿದೆಯೆಂದು ಈ ಮತದ ಪಂಡಿತರು ಹೇಳುತ್ತಾರೆ. ಸಮುದ್ರಗುಪ್ತನ ತರುವಾಯ ಆಳಿದ ೨ನೆಯ ಚಂದ್ರಗುಪ್ತನು ಮಧ್ಯಹಿಂದುಸ್ತಾನ ಗುಜರಾಥ ಮೊದಲಾದ ಪ್ರಾಂತಗಳನ್ನು ಗೆದ್ದು ವಿಕ್ರಮಾದಿತ್ಯನೆಂಬ ಬಿರುದನ್ನು ತಳೆದನು. ಈತನ ಕಾಲದಲ್ಲಿ (ಎಂದರೆ ಕ್ರಿ. ಶ. ೩೮೦—೪೧೩) ಕಾಲಿದಾಸನು ಬಾಳಿದನೆಂದು ಇವರು ಊಹಿಸುತ್ತಾರೆ. ಇವನ ಮಗನಾದ ಕುಮಾರಗುಪ್ತನ ಗೌರವಕ್ಕಾಗಿ ಕಾಲಿದಾಸನು ಕುಮಾರಸಂಭವವನ್ನು ಬರೆದನೆಂದು ಹೇಳುತ್ತಾರೆ.

(೩) ಸರ್ ವಿಲಿಯಂ ಜೋನ್ಸ್, ಶ್ರೀ. ರೇ., ಶ್ರೀ. ಚಿ. ವಿ. ವೈದ್ಯ ಮೊದಲಾದ ಪಂಡಿತರು ಕಾಲಿದಾಸನು ಕ್ರಿ. ಶ. ಪೂ. ೧ನೆಯ ಶತಮಾನದವನೆಂದು ಸಾಧಿಸುತ್ತಾರೆ. ಶಕಪುರುಷನಾದ ವಿಕ್ರಮಾದಿತ್ಯನ ಆಸ್ಥಾನದಲ್ಲಿ ನವರತ್ನಗಳೆಂದು ಖ್ಯಾತರಾದ ಒಂಬತ್ತು ಜನ ಮಹಾವಿದ್ವಾಂಸರಿದ್ದರೆಂದೂ ಈ ನವರತ್ನಗಳಲ್ಲಿ ಕಾಲಿದಾಸನು ಒಬ್ಬನೆಂದೂ ಒಂದು ಆಖ್ಯಾಯಿಕೆಯು ಭರತವರ್ಷದಲ್ಲೆಲ್ಲ ಪ್ರಚಾರದಲ್ಲಿದೆ. ಈ ವಿಕ್ರಮಾದಿತ್ಯನು ಕ್ರಿ. ಶ. ಪೂ. ೧ನೆಯ ಶತಮಾನದಲ್ಲಿದ್ದನು. ವಿಕ್ರಮಶಕವು ಕ್ರಿ. ಶ. ಪೂ. ೫೭ ರಲ್ಲಿ ಪ್ರಾರಂಭವಾಗುತ್ತದೆ. ವಿಕ್ರಮೋರ್ವಶೀಯ ನಾಟಕವನ್ನು ತನ್ನ ಪೋಷಕನ ಪ್ರೀತ್ಯರ್ಥವಾಗಿ ಬರೆದನೆಂದೂ ಮಾಲವಿಕಾಗ್ನಿಮಿತ್ರದಲ್ಲಿಯೂ ಆ ಕಾಲದಲ್ಲಿ ನಡೆದ ಸಂಗತಿಗಳ ಉಲ್ಲೇಖವಿದೆಯೆಂದೂ ಈ ಮತದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಮ್ಮ ದೇಶದಲ್ಲಿ ಪ್ರಚಾರದಲ್ಲಿದ್ದ ಆಖ್ಯಾಯಿಕೆಯನ್ನು ನಂಬದಿರಲಿಕ್ಕೆ ಸಾಕಷ್ಟು ಕಾರಣಗಳಿಲ್ಲ; ಅಶ್ವಘೋಷನೇ ಕಾಲಿದಾಸನ ಅನುಕರಣ ಮಾಡಿರಬೇಕೆಂದು ಹೇಳಲಿಕ್ಕೆ ಅಸ್ಪದವಿದೆ; ಕಾಲಿದಾಸನು ಅಶ್ವಘೋಷನಿಗಿಂತ ಹೆಚ್ಚು ಪ್ರತಿಭಾಶಾಲಿಯಾದ ಕವಿಯೆಂಬ ಮಾತಿನ ಬಗ್ಗೆ ಏನೂ ವಾದವಿಲ್ಲ. ಇಂತಹ ಮಹಾಕವಿಯಾದ ಕಾಲಿದಾಸನು ತನಗಿಂತಲೂ ಕಡಿಮೆಯವನಾದ ಅಶ್ವಘೋಷನ ಅನುಕರಣ ಮಾಡಿದನೆಂದು ಹೇಳುವುದು ಯೋಗ್ಯವಲ್ಲ. ಅಶ್ವಘೋಷನೆ ಕಾಲಿದಾಸನ ಅನುಕರಣ ಮಾಡಿದನೆಂದು ಹೇಳುವುದು ಹೆಚ್ಚು ಸಮಂಜಸವು. ಭಾಷೆಯ ದೃಷ್ಟಿಯಿಂದ ನೋಡಿದರೂ ಕಾಲಿದಾಸನು ಕ್ರಿ. ಶ. ಪೂರ್ವದವನೆಂದೇ ನಿರ್ಧರಿಸಬೇಕಾಗುತ್ತದೆ ಎಂದು ಮುಂತಾಗಿ ಈ ಅಭಿಪ್ರಾಯದ ಪಂಡಿತರು ಸಾಧಿಸುತ್ತಾರೆ.

ಮೇಲೆ ಕಾಣಿಸಿದ ಚರ್ಚೆಗಳಿಂದ ಒಂದು ಮಾತು ಮಾತ್ರ ಸಿದ್ಧಾಂತವಾದಂತಾಯಿತು. ಅದೇನಂದರೆ ಕಾಲಿದಾಸನ ಕಾಲ ನಿರ್ಣಯವು ಇನ್ನೂ ಸಮರ್ಪಕವಾಗಿ ಆಗಿಲ್ಲ. ಎರಡು ಮೇರೆಗಳು ಮಾತ್ರ ಸಿದ್ಧವಾದಂತಾದವು. ಕಾಲಿದಾಸನು ಕ್ರಿ. ಶ. ಪೂ ೨ನೆಯ ಶತಕಕ್ಕೆ ಮುಂಚೆ ಇದ್ದಿರಲಾರನು; ಅವನು ಕ್ರಿ. ಶ. ೪೭೩ ರಿಗಿಂತ ಈಚೆಗೆ ಇದ್ದಿರಲಾರನು. ಈ ೬೦೦ ವರ್ಷಗಳ ಅವಧಿಯಲ್ಲಿ ಕಾಳಿದಾಸನು ಬಾಳಿ ತನ್ನ ಚಿರಂತನ ಕೃತಿಗಳನ್ನು ನಿರ್ಮಿಸಿರಬೇಕು. ಕಾಲಿದಾಸನು ಕ್ರಿ. ಶ. ಪೂ ೧ನೆಯ ಶತಮಾನದವನೆಂಬದು ಹೆಚ್ಚು ಸಮಜಂಸವೆಂದು ತೋರುತ್ತಿದೆಯಾದರೂ ನಿಶ್ಚಿತ ರೀತಿಯಲ್ಲಿ ಏನೂ ಹೇಳಲಾಗುವುದಿಲ್ಲ.

ಕಾಲಿದಾಸನ ಮತ; ಸ್ಥಳ.

ಕಾಲಿದಾಸನ ಮತವಾವುದು ಎಂದು ಹಲವರು ವಿವೇಚಿಸಿದ್ದಾರೆ. ಆದರೆ ಕವಿಯಾದವನು ಯಾವ ಮತದವನಿದ್ದರೇನು? ಅವನಿಗಿರುವುದು ಒಂದೇ ಮತ; ಕವಿಮತ; ಒಂದೇ ಧರ್ಮ; ಸೌಂದರ್ಯಧರ್ಮ. ಕಾಲಿದಾಸನ ಗ್ರಂಥಗಳಿಂದ ಅವನು ತ್ರಿಮೂರ್ತಿಗಳಲ್ಲಿ ಸಮಭಾವವುಳ್ಳವನಾದರೂ ಶಿವನನ್ನು ತನ್ನ ಇಷ್ಟದೈವತವೆಂದು ಭಾವಿಸಿದವನೆಂದು ತಿಳಿಯುಬರುತ್ತದೆ. ರಘುವಂಶದಲ್ಲಿಯ ವಿಷ್ಣುಸ್ತುತಿಯೂ, ಕುಮಾರಸಂಭವದಲ್ಲಿಯ ಬ್ರಹ್ಮನ ಸ್ತೋತ್ರವೂ ಇನ್ನು ಎಲ್ಲಾ ಕಾವ್ಯ ನಾಟಕಗಳಲ್ಲಿಯ ಶಿವಸ್ತುತಿಗಳೂ ಇದಕ್ಕೆ ನಿದರ್ಶನಗಳು. ಎಲ್ಲಾ ಸ್ಥಾನಗಳಲ್ಲಿ ಪರಮಾತ್ಮನನ್ನು ಕಾಣುವ ಒಂದು ಬಗೆಯ ಅದ್ವೈತ ಮತವು ಕಾಲಿದಾಸನದಾಗಿದ್ದಿತೆಂದು ತೋರುತ್ತದೆ.

ಆತ್ಮಾನಮಾತ್ಮನಾ ವೇತ್ಸಿ ಸೃಜಸ್ಯಾತ್ಮಾನಮಾತ್ಮನಾ ।
ಆತ್ಮನಾ ಕೃತಿನಾ ಚೈವ ಆತ್ಮನ್ಯೇವ ಪ್ರಲೀಯಸೇ ॥
ತ್ವಮಾಮನಂತಿ ಪ್ರಕೃತಿಂ ಪುರುಷಾರ್ಥಪ್ರವರ್ತಿನೀಂ ।
ತದ್ದರ್ಶಿನಮುದಾಸೀನಂ ತ್ವಮೇವ ಪುರುಷಂ ವಿದುಃ ॥
ತ್ವಮೇವ ಹವ್ಯಂ ಹೋತಾ ಚ ಭೋಜ್ಯಂ ಭೋಕ್ತಾ ಚ ಶಾಶ್ವತಃ ।
ವೇದ್ಯಂ ಚ ವೇದಿತಾಚಾಸಿ ಧ್ಯಾತಾ ಧ್ಯೇಯಂ ಚ ಯತ್ಪರಂ ॥

ಕು. ಸಂ. ಸರ್ಗ ೨.

ಶಿವನ ಉಲ್ಲೇಖವು ಬಂದಾಗ ಕಾಲಿದಾಸನು ಭಕ್ತಿಪರವಶನಾಗಿ ಹಾಡಿದ್ದಾನೆ. ಮೇಘದೂತಕಾವ್ಯದಲ್ಲಿ ಸಂದರ್ಭಗಳನ್ನು ಕಲ್ಪಿಸಿಕೊಂಡು ಕೂಡ

ಶಿವಮಹಿಮೆಯನ್ನು ಹಾಡಿದ್ದಾನೆ. ಅವನ ಎಲ್ಲ ನಾಟಕಗಳ ನಾಂದೀ ಪದ್ಯಗಳು ಶಿವಸ್ತುತಿಗಳಾಗಿವೆ. ಆದರೆ ಚರಾಚರ ವಿಶ್ವವನ್ನು ಆವರಿಸಿದ ಅಷ್ಟಮೂರ್ತಿಯಾದ ಪರಬ್ರಹ್ಮನನ್ನೆ ಕಾಲಿದಾಸನು ವೇದಾಂತಪರ ಸ್ತೋತ್ರಗಳಿಂದ ಸ್ತುತಿಸಿರುವುದು. ಈತನು ಕಾಶ್ಮೀರ ದೇಶದಲ್ಲಿ ಪ್ರಚಾರದಲ್ಲಿದ್ದ ಶೈವಮತಾನುಯಾಯಿಯೆಂದು ಕೆಲವರು ಹೇಳುತ್ತಾರೆ. ಈತನು ಬ್ರಾಹ್ಮಣನೆಂದೂ ಅದರಲ್ಲಿಯೂ ಗೌಡಸಾರಸ್ವತ ಬ್ರಾಹ್ಮಣನೆಂದೂ ಸಿದ್ಧಮಾಡಿ ತೋರಿಸಲಿಕ್ಕೆ ಒಬ್ಬ ಪಂಡಿತರು ಯತ್ನಿಸಿದ್ದಾರೆ. ಬ್ರಾಹ್ಮಣನಿದ್ದಿರಬಹುದೆಂಬ ಊಹೆಗೆ ಕೆಲವೊಂದು ಆಧಾರಗಳಿದ್ದರೂ ಗೌಡಸಾರಸ್ವತನೆಂದು ಹೇಳುವುದಕ್ಕೆ ಏನು ಪ್ರಮಾಣಗಳೊ ನಾನು ಕಾಣೆ. ಇವೆಲ್ಲ ಶುಷ್ಕತರ್ಕಗಳು.

ಕಾಲಿದಾಸನು ತಮ್ಮ ಪ್ರಾಂತದವನೇ ಎಂದು ಸಾಧಿಸಲಿಕ್ಕೆ ಹಲವು ಪ್ರಾಂತದವರು ಯತ್ನಮಾಡಿದ್ದಾರೆ. ಬಂಗಾಲದವನೆಂದು ಕೆಲವರು ಹೇಳುತ್ತಾರೆ. ಕಾಶ್ಮೀರದವನೆಂದು ಕೆಲವರು ಹೇಳುತ್ತಾರೆ. ಅವಂತಿಯವನೆಂದು ಕೆಲವರು ಹೇಳುತ್ತಾರೆ. ಬೇಕಾದರೆ ನಾವು ಕಾಲಿದಾಸನು ನಮ್ಮ ಪ್ರಾಂತದವನೇ, ಕರ್ನಾಟಕದವನೇ, ಅದರಲ್ಲಿಯೂ ಬೆಳಗಾವಿಯವನೇ ಎಂದು ಹೊಸದೊಂದು ವಾದವನ್ನು ಹೂಡಬಹುದು. ಇದಕ್ಕೆ ಕೆಲವೊಂದು ‘ಆಧಾರ’ಗಳನ್ನಾದರೂ ಹುಡುಕಿಕೊಡಬಹುದು. ಕಾಲಿದಾಸನು ಭರತಖಂಡದ ಇಂತಹ ಪ್ರದೇಶದವನೆಂದು ನಿರ್ಧರಿಸಿಹೇಳುವುದು ಸಾಧ್ಯವಲ್ಲದಿದ್ದರೂ ಮಧ್ಯಹಿಂದುಸ್ಥಾನ—ಅದರಲ್ಲಿ, ಉಜ್ಜಯಿನಿಯಲ್ಲಿ ಬಹಳ ದಿನಗಳವರೆಗೆ ವಾಸಮಾಡಿಕೊಂಡಿರಬೇಕೆಂದು ನನಗೆ ತೋರುತ್ತದೆ. ಮೇಘದೂತದಲ್ಲಿ ಕಾಲಿದಾಸನು ಈ ಪ್ರದೇಶದ ಸೂಕ್ಷ್ಮಪರಿಚಯ ಜ್ಞಾನವನ್ನು ವ್ಯಕ್ತಪಡಿಸುತ್ತಾನೆ. ಉಜ್ಜಯಿನಿಯ ವರ್ಣನೆಯನ್ನು ಬಹಳ ಅಭಿಮಾನದಿಂದಲೂ, ಪ್ರೀತಿಯಿಂದಲೂ ಮಾಡಿದ್ದಾನೆ. ಅವಂತಿಯ ಸ್ತ್ರೀಯರು, ಅವಂತಿಯ ಗ್ರಾಮವೃದ್ಧರು, ಅವಂತಿಯಲ್ಲಿ ಪ್ರಚಾರದಲ್ಲಿದ್ದ ಉದಯನಕಥೆ, ಉಜ್ಜಯನಿಯ ಮಹಾಕಾಲ ನಿಕೇತನ, ಅಲ್ಲಿ ನರ್ತಿಸುತ್ತಿರುವ ವೇಶ್ಯೆಯರು, ಸಿಪ್ರಾನದಿ, ಅವಂತಿಯ ವೃಕ್ಷ ಫಲಪುಷ್ಪಗಳು ಇವೆಲ್ಲವುಗಳನ್ನು ಒಂದು ಬಗೆಯಾದ ಆತ್ಮೀಯಭಾವದಿಂದ ಉಲ್ಲೇಖಿಸಿದ್ದಾನೆ.

IX

ಕಾಲಿದಾಸನ ಪ್ರತಿಭೆ; ಮಹತಿ.

ಇನ್ನು ಈ ಕಾಲಮತನಿರ್ಣಯ ಮೊದಲಾದ ಬರಡು ವಿಷಯವನ್ನು ಬದಿಗಿರಿಸಿ, ಕಾಲಿದಾಸನ ಕಾವ್ಯಗಳ ಗುಣಗಳನ್ನು ಸ್ವಲ್ಪದರಲ್ಲಿ ವಿವೇಚಿಸೋಣ. ಕಾಲಿದಾಸನು ತಮ್ಮವನೆ ಎಂದು ಒಂದು ಬಗೆಯಾದ ಕಚ್ಚಾಟವು ಕೆಲವು ಪ್ರಾಂತಗಳ ಜನರಲ್ಲಿ ನಡೆದಿದೆಯೆಂದು ಮೇಲೆ ಹೇಳಿದ್ದಾಯಿತು. ಈ ಮಾತಿನಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ; ಅದೇನೆಂದರೆ, ಕಾಲಿದಾಸನು ಹಿಂದುಸ್ಥಾನದ ಯಾವುದೇ ಒಂದು ಪ್ರಾಂತದವನಲ್ಲ; ಅವನು ಸಮಗ್ರ ಭರತಭೂಮಿಯವನು. ಕಾಲಿದಾಸನ ಕೃತಿಗಳಲ್ಲಿ ವ್ಯಕ್ತವಾಗಿರುವ ಆಕಾಂಕ್ಷೆಗಳು, ಆಶಯಗಳು, ಗೊತ್ತುಗುರಿಗಳು—ಇಡಿಯ ಭರತಖಂಡದವು. ಅವನ ಕಾವ್ಯಗಳಲ್ಲಿ ಕೇಳಬರುವ ಧ್ವನಿಯು ಭರತಖಂಡದ ಹೃದಯದ ಅಂತರಾಳದಿಂದ ಏಳುವ ಧ್ವನಿಯು. ಭಾರತೀಯ ಸಂಸ್ಕೃತಿಯ ಉನ್ನತವಾದ ಅಂಶಗಳನ್ನೆಲ್ಲ ಅವನ ಕೃತಿಗಳಲ್ಲಿ ಕಾವ್ಯಮಯವಾಗಿ ನಿರೂಪಿತವಾದದ್ದನ್ನು ನಾವು ಕಾಣಬಹುದು. ಕಾಲಿದಾಸನು ನಿಜವಾಗಿಯೂ ನಮ್ಮ ರಾಷ್ಟ್ರೀಯಕವಿ. ಹೀಗೆ ಹೇಳುವುದಕ್ಕೆ ಇನ್ನೊಂದು ಕಾರಣವುಂಟು. ಕಾಲಿದಾಸನ ಕಾವ್ಯಗಳಲ್ಲಿ ಭರತಭೂಮಿಯ ಎಲ್ಲಾ ಭಾಗಗಳ ವರ್ಣನೆಗಳು ಸಮಾವೇಶವಾಗಿವೆ. ಹಿಮಾಲಯದಿಂದ ಸಿಂಹಲದ್ವೀಪದವರೆಗೆ, ಪೂರ್ವೋದಧಿಯಿಂದ ಪಶ್ಚಿಮೋದಧಿಯವರೆಗೆ, ನಮ್ಮ ದೇಶದ ಎಲ್ಲ ಭಾಗಗಳನ್ನು ಆತನು ನಿಷ್ಪಕ್ಷಪಾತದೃಷ್ಟಿಯಿಂದ, ಗಾಢವಾದ ಪ್ರೇಮದಿಂದ ಬಣ್ಣಿಸಿದ್ದಾನೆ. ಭರತವರ್ಷದ ನೆಲ ಜಲ, ಆಕಾಶ, ಮೇಘಗಳು, ಪುಷ್ಪಗಳು, ಸ್ತ್ರೀಯರು, ಪುರುಷರು, ಬಾಲಕರು, ನಮ್ಮದೇಶದ ಗಿರಿಗಳು, ನದಿಗಳು, ಜಲಾಶಯಗಳು, ಅರಣ್ಯಗಳು—ಇವೆಲ್ಲವೂ ಕಾಲಿದಾಸನ ಪವಿತ್ರಪ್ರೇಮದ ವಿಷಯಗಳು. ಮಹಾಭಾರತ, ರಾಮಾಯಣಗಳನ್ನು ಬಿಟ್ಟರೆ, ನಮ್ಮ ದೇಶದ ಉಳಿದ ಇನ್ನಾವ ಕವಿಯ ಕೃತಿಗಳಲ್ಲಿಯೂ, ಕಾಳಿದಾಸನ ಕಾವ್ಯಗಳಲ್ಲಿರುವಂತೆ ಭರತ ಭೂಮಿಯ ಎಲ್ಲ ಪ್ರದೇಶಗಳ ವರ್ಣನೆಯು ಕಾಣಬರುವುದಿಲ್ಲೆಂದುವೆ ನನಗೆ ತೋರುತ್ತದೆ. ಭರತಖಂಡಕ್ಕೆ ಪರಿಚಿತರಾದ, ಪೂಜ್ಯರಾದ ವ್ಯಕ್ತಿಗಳನ್ನು ಕುರಿತು ಕಾಲಿದಾಸನು ಹಾಡಿದಾನೆ. ಈ ಎಲ್ಲ ದೃಷ್ಟಿಗಳಿಂದ ಕಾಲಿದಾಸನು ನಮ್ಮ ರಾಷ್ಟ್ರೀಯ ಕವಿಸಾರ್ವಭೌಮನೆಂದು ನಾನು ಬಗೆದಿದ್ದೇನೆ.

ಕಾಲಿದಾಸನ ಕಾವ್ಯಗಳ ಮೇಲ್ಮೆಯನ್ನೂ ಲಾಲಿತ್ಯವನ್ನೂ ಕುರಿತು ಎಷ್ಟೋ ದೇಶವಿದೇಶಗಳ ಪಂಡಿತರು, ರಸಿಕರು ಚರ್ಚೆಮಾಡಿದ್ದಾರೆ. ಈ ಲೇಖನದಲ್ಲಿ ಆತನ ಕಾವ್ಯಗಳ ಅಗಣಿತ ಸೌಂದರ್ಯದಲ್ಲಿಯ ಕೆಲವೊಂದು ಅಂಶಗಳನ್ನು ತೋರಿಸುವುದು ಮಾತ್ರ ಸಾಧ್ಯ. ಕಾಲಿದಾಸನ ಕಾವ್ಯನಾಟಕಗಳಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು, ವಾಗರ್ಥಗಳ ಸುಂದರ ಸಂಯೋಗ.

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

ಎಂದು ಪ್ರಾರ್ಥನೆಮಾಡಿ ಬರೆಯಲುದ್ಯುಕ್ತನಾದ ಕವಿಗೆ, ಪಾರ್ವತೀ ಪರಮೇಶ್ವರರು ನಿಜವಾಗಿಯೂ ವರಪ್ರಸಾದವನ್ನಿತ್ತರೋ ಎಂಬಂತೆ ಆತನ ಕಾವ್ಯಗಳಲ್ಲಿ ಮಂಗಲಮಯವಾದ ಅರ್ಥವು, ಮಂಗಲಮಯವಾದ ಶಬ್ದಗಳಲ್ಲಿ ಮಂಗಲಮಯವಾಗಿ ಸಮರಸ ಹೊಂದಿದುದನ್ನು ನಾವು ಎಲ್ಲೆಡೆಗಳಲ್ಲಿಯೂ ಕಾಣಬಹುದು. ಕಾವ್ಯದ ವಾಗರ್ಥಗಳಲ್ಲಿ ಯಾವುದು ಮುಖ್ಯವೆಂದು ಹೇಳುವುದು ದುಸ್ತರವಾದ ಮಾತು. ಜೀವ ದೇಹಗಳಂತೆ ಅವು ಒಂದನ್ನೊಂದು ಅಗಲಿ ಇರಲಾರವು-ವೇದ್ಯವಾಗುವಂತೆ ಆಗಲಿ ಇರಲಾರವು. ಆದುದರಿಂದ ಕಾವ್ಯದಲ್ಲಿ ಇವೆರಡೂ-ಇಲ್ಲವೆ ಇವೆರಡರ ಸಂಯೋಗ ಕ್ರಮವೇ ಮುಖ್ಯವೆಂದು ನಾವು ಹೇಳಬೇಕಾಗುತ್ತದೆ. ಕಾಲಿದಾಸನ ಈ ವಾಗರ್ಥಗಳ ದಿವ್ಯಸಂಯೋಜಕ ಶಕ್ತಿಯ ನಿದರ್ಶನಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದಾದರೂ ಸ್ಥಲಸಂಕೋಚದ ಮೂಲಕ ಒಂದೇ ಒಂದು ಪದ್ಯವನ್ನು ಉದಹರಿಸುತ್ತೇನೆ.

ಅವೃಷ್ಟಿಸಂರಂಭಮಿವಾಂಬುವಾಹಂ ಅಪಾಮಿವಾಧಾರ
ಮನುತ್ತರಂಗಂ ।
ಅಂತಶ್ಚರಾಣಾಂ ಮರುತಾಂ ನಿರೋಧಾನ್ನಿವಾತನಿಷ್ಕಂಪ
ಮಿವಪ್ರದೀಪಂ ॥ ಕು. ಸಂ. ೩ ॥

ಸಂಯಮಿಯಾದ ಧ್ಯಾನಸ್ಥ ತ್ರಿಯಂಬಕನ ಈ ವರ್ಣನೆಯಲ್ಲಿ, ಉಚಿತವಾದ ಶಬ್ದಗಳ ಪ್ರಯೋಗದಿಂದ, ಉಚಿತವಾದ ಉಪಮೆಗಳಿಂದ ಎಂತಹ ಶಾಂತವಾದ ಪ್ರಸನ್ನ ಗಂಭೀರ ವಾತಾವರಣವನ್ನು ಕಾಲಿದಾಸನು ಸೃಷ್ಟಿಸುತ್ತಾನೆಂಬುದನ್ನು ಗಮನಿಸಬೇಕು.

ಕಾಲಿದಾಸನ ಉಪಮೆಗಳು ಲೋಕಪ್ರಸಿದ್ಧವಾಗಿವೆ. ‘ ಉಪಮಾ ಕಾಲಿದಾಸಸ್ಯ ’ ಎಂದು ನಮ್ಮ ಪೂರ್ವದ ಪಂಡಿತರು ಹೇಳಿದ್ದಾರೆ. ಕಾಲಿದಾಸನ ಉಪಮೆಗಳು ಹೇಳಬೇಕಾದ ಸಂಗತಿಯನ್ನು ಥಟ್ಟನೆ ಮನಸ್ಸಿಗೆ ಮುಟ್ಟುವಂತೆ ತಿಳುಹಿಸಿಕೊಡುತ್ತವಲ್ಲದೆ, ಆತನ ಲೋಕವ್ಯವಹಾರಜ್ಞಾನವನ್ನೂ ಪ್ರಕೃತಿ ಸೌಂದರ್ಯ ಪ್ರಿಯತೆಯನ್ನೂ ತೋರ್ಪಡಿಸುತ್ತವೆ. ಕೆಲವೊಂದು ಉಪಮೆಗಳಂತೂ ಭವ್ಯವಾದ ಚಿತ್ರಮಾಲಿಕೆಗಳನ್ನೇ ನಮ್ಮ ಚಿತ್ತದಮೇಲೆ ಮೂಡಿಸುತ್ತವೆ. ಇನ್ನು ಕೆಲವೊಂದು ಉಪಮೆಗಳು ವಾಚ್ಯವಾದ ಅರ್ಥವನ್ನೇ ಅಲ್ಲದೆ ವ್ಯಂಗ್ಯವಾದ ವಿವಿಧಾರ್ಥಗಳನ್ನು ಕೊಡುವಂತಹವೂ ಆಗಿವೆ.

ಮಾರುತಿಃ ಸಾಗರಂ ತೀರ್ಣಃ ಸಂಸಾರಮಿವ ನಿರ್ಮಮಃ।

ಮಾರುತಿಯು ಸಮುದ್ರವನ್ನು ನಿರ್ಮಮನಾದಪುರುಷನು ಸಂಸಾರ (ಸಾಗರ) ವನ್ನು ದಾಟುವಂತೆ ದಾಟಿದನು. ‘ ಸಂಸಾರಮಿವ ನಿರ್ಮಮಃ ’ ಎಂಬುದನ್ನು ಮಾರುತಿಗೆ ಹೇಳುವುದರಲ್ಲಿ ಎಂತಹ ಔಚಿತ್ಯವಿದೆಯೆಂಬುದನ್ನು ಗಮನಿಸಬೇಕು. ಈ ಒಂದು ಉಪಮೆಯಿಂದ ಮಾರುತಿಯ ನಿರ್ಮಮತ್ವವೂ ಭಗವದ್ಭಕ್ತಿಯೂ ನಮಗೆ ಧ್ವನಿತವಾಗುತ್ತವೆ. ತಿಳಿಯಾದ ವಿನೋದವನ್ನು ನಮ್ಮ ದೇಶದ ಸಾಹಿತ್ಯಗಳಲ್ಲಿ ಕಾಣುವುದು ಅಪರೂಪ; ಕಾಲಿದಾಸನು ಇದಕ್ಕೆ ಅಪವಾದವಾಗಿಲ್ಲವಾದರೂ ಅವನ ಕೆಲವು ಉಪಮೆಗಳಲ್ಲಿ ಅವನ ವಿನೋದ ಪ್ರಿಯತೆಯು ವ್ಯಕ್ತವಾಗುತ್ತದೆ. ಅವುಗಳು ನಗೆಯನ್ನು ಹುಟ್ಟಿಸುವಂತಹ ಚಿತ್ರಗಳನ್ನು ನಮ್ಮ ಮನಶ್ಚಕ್ಷುವಿನ ಎದುರಿಗೆ ನಿಲ್ಲಿಸುತ್ತವೆ.

ಮಂದಃ ಕವಿಯಶಃಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಂ
ಪ್ರಾಂಶುಲಭ್ಯೇ ಫಲೇ ಲೋಭಾದುದ್ಬಾಹುರಿವ ವಾಮನಃ ॥

ಇದರಲ್ಲಿ ಒಬ್ಬ ಗಿಡ್ಡನಾದವನು ಎತ್ತರವಾದ ಮರದ ಅಡಿಯಲ್ಲಿ ನಿಂತು ತುದಿಯಲ್ಲಿರುವ ಫಲವನ್ನು ಹರಿದುಕೊಳ್ಳಬೇಕೆಂದು ಬಲಗೈಯನ್ನು ಮೇಲಕ್ಕೆತ್ತಿ ವ್ಯರ್ಥವಾಗಿ ಜಿಗಿದಾಡುತ್ತಿರುವ ಚಿತ್ರವು ನಿಜವಾಗಿಯೂ ಹಾಸ್ಯಕಾರಿಯಾಗಿದೆ. ಆದರೆ ಇಂತಹ ಉಪಮೆಗಳಲ್ಲಿಯ ಹಾಸ್ಯವು ಸ್ಫುಟವಾಗಿ ವ್ಯಕ್ತವಾದುದಲ್ಲ. ನಮ್ಮ ಕಲ್ಪನಾಶಕ್ತಿಯನ್ನು ಸ್ವಲ್ಪ ವೆಚ್ಚಮಾಡಿದಮೇಲೆ ವಿದಿತವಾಗುವ ಸವಿಯು ಅವುಗಳಲ್ಲಿದೆ. ಕಾಲಿದಾಸನ ವಿವಿಧಜ್ಞಾನ, ಅನುಭವಗಳು ಆತನ ಉಪಮೆಗಳಲ್ಲಿ ಕಾಣಬರುತ್ತವೆ; ವೇದಾಂತ, ರಾಜನೀತಿ, ವ್ಯಾಕ-

ರಣ ಮೊದಲಾದ ಎಷ್ಟೋ ಶಾಸ್ತ್ರಗಳ ಸಂಬಂಧವಾದ ಉಪಮೆಗಳು ಹೇರಳವಾಗಿವೆ. ಇವೆಲ್ಲ ವಿಷಯವಾಗಿ ಉದಾಹರಣೆ ಕೊಡಲು ಇಲ್ಲಿ ಸಾಧ್ಯವಿಲ್ಲ.

ನಮ್ಮ ದೇಶದ ಸಾಹಿತ್ಯಗಳಲ್ಲಿ ಪಾಶ್ಚಾತ್ಯ ಸಾಹಿತ್ಯಗಳಲ್ಲಿದ್ದಂತೆ ಸ್ವಭಾವ ನಿರೂಪಣೆಗೆ ಅಷ್ಟು ಮಹತ್ವದ ಸ್ಥಾನವಿಲ್ಲೆಂದು ಹೇಳುವುದುಂಟು. ಹೀಗೆ ಹೇಳುವುದರಲ್ಲಿ ಸತ್ಯಾಂಶವಿದೆಯೆಂದು ನಾವು ಒಪ್ಪಿಕೊಳ್ಳಲೇ ಬೇಕು. ಇದಕ್ಕೆ ಕಾರಣವೆಂದರೆ ನಮ್ಮ ಕವಿಗಳು ಹೆಚ್ಚಾಗಿ ಪುರಾಣಗಳಲ್ಲಿ, ಇತಿಹಾಸದಲ್ಲಿ ಪ್ರಸಿದ್ಧರಾದ ವ್ಯಕ್ತಿಗಳನ್ನು ಕುರಿತು ಬರೆದರು. ಆ ವ್ಯಕ್ತಿಗಳ ಪರಿಚಯವು ಎಲ್ಲರಿಗೂ ಇದ್ದುದರಿಂದ ಸ್ವಭಾವನಿರೂಪಣೆಗೆ ಅಷ್ಟು ಮಹತ್ವವನ್ನು ಕೊಡು ಆವಶ್ಯಕವೇ ಇರಲಿಲ್ಲ. ಆದರೂ ಕಾಲಿದಾಸನದು ಸ್ವಭಾವಚಿತ್ರಗಳಲ್ಲಿಯೂ ಪಳಗಿದ ಕೈ. ಶಕುಂತಲಾ, ಪಾರ್ವತಿ, ದುಷ್ಯಂತ, ಕಣ್ವ, ಅನಸೂಯೆ, ಇಂದುಮತಿ, ದಿಲೀಪ ಮೊದಲಾದ ವ್ಯಕ್ತಿಗಳು ಸಾಹಿತ್ಯದಲ್ಲಿ ಅಮರ ಪದವಿಯುವನ್ನು ಹೊಂದಿದ್ದಾರೆ. ಒಂದೆರಡು ಪದ್ಯಗಳಲ್ಲಿ ವ್ಯಕ್ತಿಯ ಸ್ವಭಾವದ ಮೇಲೆ ಬೆಳಕನ್ನು ಬೀರಿ ಆ ವ್ಯಕ್ತಿಯ ಹೃದಯವನ್ನೆ ನಮ್ಮೆದುರಿಗೆ ತೆರೆದಿಡುವ ಮಹತ್ತರವಾದ ಕೌಶಲವು ಕಾಲಿದಾಸನದು. ಈ ಸಂಬಂಧವಲ್ಲಿ ಒಂದೇ ಉದಾಹರಣೆಯನ್ನು ಕೊಡುತ್ತೇನೆ.

ಪಿತ್ರಾ ದತ್ತಾಂ ರುದನ್ ರಾಮಃ ಪ್ರಾಙ್ಮಹೀಂ ಪ್ರತ್ಯಪದ್ಯತ
ಪಶ್ಚಾತ್ ವನಾಯ ಗಚ್ಛೇತಿ ತದಾಜ್ಞಾಂ ಮುದಿತೋ ಗ್ರಹೀತ್

॥ ರ. ವಂ. ೧೨ ॥

ದಧತೋ ಮಂಗಲಕ್ಷೌಮೇ ವಸಾನಸ್ಯ ಚ ವಲ್ಕಲೇ ।
ದದೃಶುರ್ವಿಸ್ಮಿತಾಃ ಸ್ಯಕ ಮುಖರಾಗಂ ಸಮಂ ಜನಾಃ ॥ ರ. ವಂ. ೧೨ ॥

ಈ ಎರಡು ಪದ್ಯಗಳಿಂದ ರಾಮಚಂದ್ರನ ಸುಖದುಃಖಸಮತಾಭಾವ, ಶಾಂತಚಿತ್ತ, ಸತ್ಯಸಂಧತೆ, ವೈರಾಗ್ಯ ಮುಂತಾದ ಗುಣಗಳು ನಮ್ಮ ಕಣ್ಣೆದುರಿಗೆ ಮೈವೆತ್ತು ನಿಂತಂತೆ ಕಾಣುತ್ತವೆ. ರಾಮಚಂದ್ರನಲ್ಲಿ ಈ ಮೊದಲಾದ ಗುಣಗಳು ನೆಲೆಸಿದ್ದುವೆಂದು ಪ್ರತ್ಯಕ್ಷವಾಗಿ ಹೇಳದೆ ರಘುವರನ ಮುಖರಾಗವು ಪಟ್ಟಾಭಿಷೇಕದಕಾಲಕ್ಕೆ ಮಹಾರ್ಹವಾದ ವಸ್ತ್ರಗಳನ್ನು ಧರಿಸುವಾಗಲೂ, ಅರಣ್ಯಕ್ಕೆ ಹೊರಡುವಾಗ ನಾರಿನ ಬಟ್ಟೆಗಳನ್ನು ಉಡುವಾಗಲೂ ಒಂದೇ ಬಗೆಯದಾಗಿದ್ದಿತೆಂದು ಹೇಳಿ, ಈ ಗುಣಗಳೂ, ಇನ್ನೂ ಹೆಚ್ಚಾದ

ಮಹತಿಯೂ ಆತನಿಲ್ಲದ್ದಿತು ಎಂದು ನಮಗೆ ವ್ಯಂಗ್ಯವಾಗಿ ತಿಳುಹಿಸುವ ಕವಿಯ ಕೌಶಲವನ್ನು ನಾವು ನೋಡಬೇಕು.

ಮಾನವನ ಹೃದಯದ ರಹಸ್ಯವನ್ನು ಅರಿತುಕೊಳ್ಳುವುದು, ಬಾಹ್ಯ ವ್ಯಾಪಾರಗಳಿಗೂ ಮಾನಸಿಕ ವ್ಯಾಪಾರಗಳಿಗೂ ಸಂಬಂಧವನ್ನು ಗೊತ್ತು ಹಿಡಿಯುವುದು ಕವಿಯ ಕಾರ್ಯಗಳು. ಕಾಲಿದಾಸನ ಕಾವ್ಯನಾಟಕಗಳಲ್ಲಿ ಇಂತಹ ಅರಿವನ್ನು ನಾವು ಕಾಣಬಹುದು. ಯಾವದೊಂದು ವಿಶಿಷ್ಟ ಸನ್ನಿವೇಶದಲ್ಲಿ ಮಾನವನು ಯಾವರೀತಿಯಲ್ಲಿ ಆಚರಿಸಬಹುದೆಂದು ಕಾಲಿದಾಸನು ಮಾರ್ಮಿಕವಾಗಿ ಪ್ರದರ್ಶಿಸುತ್ತಾನೆ.

ತಂ ವೀಕ್ಷ್ಯ ವೇಪಥುಮತೀ ಸರಸಾಂಗಯಷ್ಟಿ
ರ್ನಿಕ್ಷೇಪಣಾಯ ಪದಮುದ್ಧೃತಮುದ್ವಹಂತೀ।
ಮಾರ್ಗಾಚಲವ್ಯತಿಕರಾಕುಲಿತೇವ ಸಿಂಧುಃ
ಶೈಲಾಧಿರಾಜತನಯಾ ನ ಯಯೌ ನ ತಸ್ಥೌ॥

ಕು. ಸ. ೫. ೮೫.

ವಟುವೇಷದಿಂದ ಬಂದ ಶಿವನು ನಿಜಸ್ವರೂಪವನ್ನು ತೋರಿಸಿಕೊಂಡ ಕೂಡಲೆ ಪಾರ್ವತಿಯ ಸ್ಥಿತಿಯನ್ನು ಬಣ್ಣಿಸುವ ಪದ್ಯವಿದು. ಕೋಪದಿಂದ ಹೊರಟು ಹೋಗಲುದ್ಯುಕ್ತಳಾದವಳು ತನ್ನ ಮನಃಪ್ರಿಯನನ್ನು, ಆರಾಧ್ಯ ದೈವತವನ್ನು ನೋಡಿ "ನ ಯಯೌ ನ ತಸ್ಥೌ", ಹೋಗಲೂ ಇಲ್ಲ ನಿಲ್ಲಲೂ ಇಲ್ಲ ಪಾರ್ವತಿಯು ಆ ಪ್ರಸಂಗದಲ್ಲಿ ಹೇಗೆ ವರ್ತಿಸಿರಬಹುದೆಂದು ನಾವು ಕಲ್ಪಿಸಿಕೊಂಡರೆ ಕಾಲಿದಾಸನು ಹೇಳಿದ್ದಕ್ಕೆ ಬೇರೆ ಏನನ್ನೂ ಮಾಡಿರಲಾರಳೆಂದು ನಮಗೆ ಸ್ಪಷ್ಟವಾಗದಿರದು. ಅವಳು ಮತ್ತೇನು ಮಾಡಿರಬಹುದೆಂದು ಕಲ್ಪಿಸಿ ಬೇಕಾದವರು ಬೇರೆ ಏನಾದರೂ, ಬೇರೆ ಶಬ್ದಗಳಿಂದ ಹೇಳಲಿ; ಎಂದರೆ ಕಾಲಿದಾಸನ ಪದ್ಯದ ಔಚಿತ್ಯವು ನಮಗೆ ಇನ್ನೂ ಹೆಚ್ಚಾಗಿ ಮಂದಟ್ಟಾಗುತ್ತದೆ. ಉಳಿದ ಯಾವ ರೀತಿಯಲ್ಲಿಯೂ ಈ ಸಂನ್ನಿವೇಶವನ್ನು ಬಣ್ಣಿಸುವುದು ಯಾರಿಗೂ—ಕಾಲಿದಾಸನಿಗಿಂತ ದೊಡ್ಡ ಕವಿ ಯಾರಾದರೂ ಇದ್ದರೆ, ಅವನಿಗೂ ಕೂಡ–ಶಕ್ಯವಿಲ್ಲವೆಂದು ನಾನು ಅಭಿಪ್ರಾಯ ಪಡುತ್ತೇನೆ.

ಕಾಲಿದಾಸನು ನಿಸರ್ಗ ಸೌಂದರ್ಯ ಪ್ರಿಯನೆಂದು ಈ ಮೊದಲೆ ಹೇಳಿದ್ದೇನೆ. ಆತನ ನಿಸರ್ಗ ವರ್ಣನೆಗಳು ರಮ್ಯವಾಗಿದ್ದಂತೆ ಸಹಜವೂ ಆಗಿವೆ. ಮೇಘ, ನದಿ, ಸರೋವರ, ಋತುಗಳು ಇವೇ ಮೊದಲಾದ ಪ್ರಕೃತಿ ಸೌಂದರ್ಯಗಳನ್ನು ಹೃದಯಂಗಮವಾಗಿ ಬಣ್ಣಿಸಿದ್ದಾನೆ. ಆತನಿಗೆ ಮಾನವನೂ ನಿಸರ್ಗವೂ ಒಂದೇ ರೀತಿಯಾಗಿ ಪ್ರೀತಿಯ ವಿಷಯಗಳು. ನಿಸರ್ಗವು ಮಾನವನ ಸುಖದುಃಖಗಳಲ್ಲಿ ಸಹಾನುಭೂತಿಯನ್ನು ತೋರಿಸುವಂತೆ ಅವನು ಮೇಲಿಂದ ಮೇಲೆ ಬಣ್ಣಿಸುತ್ತಾನೆ. ಮಾನವನ ಹೃದಯದ ಸ್ಪಂದನಗಳು ನಿಸರ್ಗದಲ್ಲಿಯೂ ಕೇಳಬರುತ್ತವೆ.

ನೃತ್ಯಂ ಮಯೂರಾಃ ಕುಸುಮಾನಿ ವೃಕ್ಷಾಃ ದರ್ಭಾನುಪಾತ್ತಾ
ನ್ವಿಜುಹುರ್ಹರಿಣ್ಯಃ ।
ತಸ್ಯಾಃ ಪ್ರಪನ್ನೇ ಸಮದುಃಖಭಾವಮತ್ಯಂತಮಾಸೀದ್ರುದಿತಂ
ವನೇಪಿ ॥ ರ. ವಂ. ೧೪. ೬೯.

ಲಕ್ಷ್ಮಣನು ಅಣ್ಣನ ಆಜ್ಞೆಗನುಸಾರವಾಗಿ ಸೀತಾಮಾತೆಯನ್ನು ಅರಣ್ಯದಲ್ಲಿ ಬಿಟ್ಟು ಬರಲಾಗಿ ಅವಳ ಶೋಕದಲ್ಲಿ ನವಿಲುಗಳು, ವೃಕ್ಷಗಳು ಎರಳೆಗಳು ಸಮಭಾಗಿಗಳಾದವಂತೆ. ಇಂತಹ ವರ್ಣನೆಗಳಿಂದ ಕಾಲಿದಾಸನ ಹೃದಯದಲ್ಲಿ ನಿಸರ್ಗದ ಬಗ್ಗೆ ಎಂತಹ ಗಾಢವಾದ ಭಾವನೆಯಿದ್ದಿತೆಂಬದು ವಿದಿತನಾಗುತ್ತದೆ. ಪಾಂಡಿತ್ಯ ಪ್ರದರ್ಶನದ ಮೋಹದಲ್ಲಿ ಸಿಲುಕಿ, ಶಬ್ದ ಜಾಲದಲ್ಲಿ ತೊಳಲಿ, ಚಮತ್ಕೃತಿ ಅಲಂಕಾರಗಹನದಲ್ಲಿ ಬಳಲಿ ಬಹಳಜನ ನಮ್ಮ ಕವಿಗಳು ಕೆಟ್ಟಿದ್ದಾರೆ. ಕಾಲಿದಾಸನು ಮಾತ್ರ ಈ ಪಾಂಡಿತ್ಯ ಪ್ರದರ್ಶನದ, ಶಬ್ದಾಡಂಬರದ ಮೋಹಕ್ಕೆ ಗುರಿಯಾಗಿಲ್ಲ. ಕಾಲಿದಾಸನ ಪಾಂಡಿತ್ಯವೇನೋ ಗಹನವಾದುದು; ಆತನ ಶಬ್ದಭಾಂಡಾರವು ಹಿರಿದಾದುದು. ಆದರೆ ಕಾವ್ಯದ ಸಹಜಸೌಂದರ್ಯಕ್ಕೆ ಭಂಗ ಬಾರದಂತೆ ಅವುಗಳನ್ನು ಉಪಯೋಗಿಸಿಕೊಂಡಿದ್ದಾನೆ. ಹೀಗಾಗಿ ಆತನ ಶಾಸ್ತ್ರಪಾಂಡಿತ್ಯವು ತೋಡವಾಗಿ ಪರಿಣಮಿಸುವುದಲ್ಲದೆ ತೊಡರಾಗುವುದಿಲ್ಲ. ಕಾಲಿದಾಸನ ಕಾವ್ಯ ಪ್ರತಿಭೆಯ ವಿಷಯವಾಗಿ ಇನ್ನೂ ಹೇಳಬೇಕಾದುದು ಬೇಕಾದಷ್ಟು ಇದೆಯಾದರೂ ಸ್ಥಲಸಂಕೋಚದ

ಮೂಲಕ, ಕಾಲಿದಾಸನ ತತ್ವಜ್ಞಾನ, ಮಾನವನಿಗೆ ಆತನ ಸಂದೇಶ ಇವುಗಳ ಬಗ್ಗೆ ಒಂದೆರಡು ಮಾತನ್ನು ಹೇಳಿ ಈ ಚಿಕ್ಕ ಲೇಖನವನ್ನು ಪೂರ್ತಿಗೊಳಿಸುತ್ತೇನೆ.

ಕಾಲಿದಾಸನ ಸಂದೇಶ.

ಕಾಲಿದಾಸನು ತನ್ನ ಎಲ್ಲ ಕೃತಿಗಳಲ್ಲಿ ಭಾರತೀಯ ಸಂಸ್ಕೃತಿಯ ಹೆಗ್ಗುರುತುಗಳಾದ ಭೂತದಯೆ, ವೈರಾಗ್ಯ, ಸರ್ವಸಮತಾಭಾವ, ಆತ್ಮಸಂಯಮ, ನಿಸರ್ಗಕ್ಕೆ ಹೊಂದಿಕೆಯಾದ ಜೀವನ, ಸ್ವಧರ್ಮ ಪರಿಪಾಲನೆ ಇವೇ ಮೊದಲಾದವುಗಳು ಮಾನವನ ಆದರ್ಶಗಳೆಂದು ಘೋಷಿಸಿದ್ದಾನೆ. ಕ್ಷಾತ್ರಧರ್ಮ ಪರಿಪಾಲಕನಾದ ದಿಲೀಪನು ಒಂದು ಹಸುವಿಗಾಗಿ ಪ್ರಾಣಗಳನ್ನರ್ಪಿಸಲಿಕ್ಕೆ ಸಿದ್ಧನಾಗಿದ್ದಾನೆ.

> **ಕಿಮಪ್ಯಹಿಂಸ್ಯಸ್ತವ ಚೇನ್ಮತೋಽಹಂ ಯಶಃಶರೀರೇ ಭವ ಮೇ ದಯಾಲುಃ ।**
> **ಏಕಾಂತವಿಧ್ವಂಸಿಷು ಮದ್ವಿಧಾನಾಂ ಪಿಂಡೇಷ್ವನಾಸ್ಥಾ ಖಲು ಭೌತಿಕೇಷು ॥** ರ. ವಂ. ೨-೫೭

ಎಂದು ಹೇಳುವ ದಿಲೀಪನ ವಚನಗಳಲ್ಲಿ ಪಾರ್ಥಿವ ಶರೀರದಲ್ಲಿ ಎಂತಹ ವಿರತಿಯು ಕಾಣಬರುತ್ತದೆ! ಕರ್ತವ್ಯನಿಷ್ಠತೆಯ ಪರಾಕಾಷ್ಠತೆಯನ್ನು ನಾವು ಇಲ್ಲಿ ಕಾಣಬಹುದು. ಕಾಲಿದಾಸನಿಗೆ ಸಂನ್ಯಾಸದಲ್ಲಿ ಅಷ್ಟು ಆಸ್ಥೆಯಿದ್ದಂತೆ ಕಾಣುವುದಿಲ್ಲ. ಈ ಪ್ರಪಂಚವೆಲ್ಲ ಪಾಪದ, ದುರ್ಗುಣಗಳ, ಕೇಡಿನ ಆಗರವೆಂದು ಹೇಳುವ ನಿರಾಶೆಯ ತತ್ತ್ವವು ಅವನದಲ್ಲ. ಶಾಕುಂತಲನಾಟಕದಲ್ಲಿ ದುಷ್ಯಂತನು ಇಂದ್ರನ ರಥದಲ್ಲಿ ಕುಳಿತು ಸ್ವರ್ಗದಿಂದ ಕೆಳಕ್ಕೆ ಬರುವಾಗ ಇಂದ್ರ ಸಾರಥಿಯಾದ ಮಾತಲಿಯು "ಅಹೋ ಉದಾರರಮಣೀಯಾ ಪೃಥಿವೀ" ಎಂದು ಹೇಳುತ್ತಾನೆ. ನಮ್ಮ ಈ ಭೂಗೋಲದ ಮೇಲೆ ಕಾಲಿದಾಸನ ನಿಕಟಪ್ರೇಮವನ್ನು ಈ ಮಾತು ಸೂಚಿಸುತ್ತದೆಂದು ನಾನು ಭಾವಿಸುತ್ತೇನೆ. 'ಕಷ್ಟಮವಶ್ಯಂ ನಿಕೃಷ್ಟಮಿಮಂ ಸಂಸಾರಂ' ಎಂದು ಮುಂತಾಗಿ ನಮ್ಮ ಕೆಲವು ಪುರಾಣಗಳಲ್ಲಿ ಹೇಳಿದ ಮಾತಿಗೆ ಆತನ ಒಪ್ಪಿಗೆ ಇದ್ದಂತೆ ತೋರುವದಿಲ್ಲ. ಸಂಸಾರದ ವಿವಿಧಾನುಭವಗಳೂ ಮನುಷ್ಯನಿಗೆ ಇರಬೇಕು;

ಪ್ರಪಂಚದ ಭೋಗಗಳ ಅನುಭವವೂ ಅವನಿಗೆ ಆಗತಕ್ಕದು. ಆದರೆ ತ್ಯಾಗ ಯುತವಾದ ಭೋಗವಿರಬೇಕು. ಒಂದು ಉಚ್ಚವಾದ ಆದರ್ಶವನ್ನಿಟ್ಟು ಕೊಂಡು ತ್ಯಾಗಪರವಾಗಿ ಧರ್ಮದಿಂದ ಭೋಗವನ್ನು ಹೊಂದಬೇಕು. ಮಾಲ ವಿಕಾಗ್ನಿಮಿತ್ರದ ನಾಂದೀಪದ್ಯದಲ್ಲಿಯೇ ಈ ಎಲ್ಲ ವಿಚಾರಗಳು ಸಮಾವೇಶ ವಾಗಿವೆ. ನನ್ನ ಅಭಿಪ್ರಾಯದಂತೆ ಈ ಪದ್ಯವು ಇಡಿಯ ವೇದಾಂತದಲ್ಲಿ ಅಡಕವಾಗಿರುವ ಮಹಾ ತತ್ತ್ವಗಳನ್ನು ಸೂತ್ರರೂಪವಾಗಿ ಕಾವ್ಯಮಯ ವಾಗಿ ನಮ್ಮೆದುರಿಗಿರಿಸುತ್ತದೆ.

ಏಕೈಶ್ವರ್ಯೇ ಸ್ಥಿತೋಪಿ ಪ್ರಣತಬಹುಫಲೋಯಃ ಸ್ವಯಂ
ಕೃತ್ತಿವಾಸಾಃ
ಕಾಂತಾಸಂಮಿಶ್ರದೇಹೋಪ್ಯವಿಷಯಮನಸಾಂ ಯಃ ಪರಸ್ತಾ
ದತೀನಾಂ
ಅಷ್ಟಾಭಿರ್ಯಸ್ಯ ಕೃತ್ಸ್ನಂ ಜಗದಪಿ ತನುಭಿಃ ಬಿಭ್ರತೋನಾಭಿ
ಮಾನಃ
ಸನ್ಮಾರ್ಗಾಲೋಕನಾಯ ವ್ಯಪನಯತು ಸ ನಸ್ತಾಮಸೀವೃತ್ತಿ
ಮೀಶಃ ॥

ಮಾನವರೆಲ್ಲರಿಗೂ ಆದರ್ಶನಾಗಿರುವ ಶಿವನು ಇಡಿಯ ವಿಶ್ವದ ಐಶ್ವರ್ಯವು ಪದತಲದಲ್ಲಿದ್ದರೂ ಆನೆಯ ತೊಗಲನ್ನು ಉಟ್ಟುಕೊಂಡು ತಿರುಗುತ್ತಾನೆ; ಅರ್ಧ ಶರೀರದಲ್ಲಿಯೇ ನಾರಿಯಿದ್ದರೂ ವೈರಾಗ್ಯಚಕ್ರವರ್ತಿಯಾಗಿದ್ದಾನೆ; ಅಷ್ಟಮೂರ್ತಿಯಾದ ಅವನಿಗೆ ಅಹಂಕಾರವಿಲ್ಲ. ಇಂಥ ಪರಶಿವನು ತ್ಯಾಗ-ಭೋಗದ ಮೂರ್ತಿಯೇ ಅಲ್ಲವೆ? ಪ್ರಪಂಚದಲ್ಲಿ ಕೂಡ 'ತೇನ ತ್ಯಕ್ತೇನ ಭುಂಜೀಥಾ:' ಎಂದು ಉಪನಿಷತ್ತಿನಲ್ಲಿ ಹೇಳಿದಂತೆ, ತ್ಯಾಗಯುತವಾದ ಭೋಗವಿರಬೇಕು. ಇದೇ ನಾನು ತಿಳಿದುಕೊಂಡಂತೆ ಕಾಲಿದಾಸನ ತತ್ತ್ವ.

ಆಧುನಿಕ ಕವಿಶ್ರೇಷ್ಠರಾದ ರವೀಂದ್ರನಾಥರು ಕಾಲಿದಾಸನ ತತ್ತ್ವಗಳ ವಿಷಯವಾಗಿ ಕೆಲವು ಮನನೀಯವಾದ ವಿಚಾರಗಳನ್ನು ಮಂಡಿಸಿದ್ದಾರೆ. ಅವರ ಮತದ ಪ್ರಕಾರ, ಕಾಲಿದಾಸನ ಕಾಲದಲ್ಲಿ ನಮ್ಮ ದೇಶದ ಅರ ಸರು ವಿಷಯಸುಖಲೋಲುಪರಾಗಿ ಕರ್ತವ್ಯ ಪರಾಙ್ಮುಖರಾಗಿದ್ದುದರಿಂದ

ಆತನು ತನ್ನ ಎಲ್ಲ ಕಾವ್ಯನಾಟಕಗಳಲ್ಲಿ ಆತ್ಮಸಂಯಮ, ಸರಲ ಜೀವನಗಳ ಮಹತ್ತ್ವವನ್ನು ಸಾರಿದ್ದಾನೆ. ಪ್ರೇಮವು ತಪಸ್ಸಿನಿಂದಲೇ ಪರಿಪೂರ್ಣತೆ ಹೊಂದುತ್ತದೆ. ಕೇವಲ ಶಾರೀರಿಕ ಆಕರ್ಷಣೆಯು ನಿಜವಾದ ಪ್ರೇಮವಲ್ಲ. ದೀರ್ಘಸಂಯಮತಪಗಳಿಂದ ಉದ್ಭವಿಸುವ, ಕಾಮನನ್ನು ಮೀರಿದ ಪ್ರೇಮವೇ ಶಾಶ್ವತಪ್ರೇಮವು. ಈ ತತ್ತ್ವವನ್ನು ಕಾಲಿದಾಸನು ಶಾಕುಂತಲದಲ್ಲಿಯೂ ಕುಮಾರಸಂಭವದಲ್ಲಿಯೂ ಜಗತ್ತಿಗೆ ಸಾರಿದ್ದಾನೆಂದು ರವೀಂದ್ರನಾಥರ ಅಭಿಪ್ರಾಯವು.


ಕಾಲಿದಾಸನ ಭವ್ಯ ಕೃತಿಗಳ ಶ್ರೇಷ್ಠತೆಯನ್ನು ನಾನು ಇಲ್ಲಿಯವರೆಗೆ ಹೊಗಳಿದ್ದಾಯಿತು. ಆತನ ಕೃತಿಗಳಲ್ಲಿ ದೋಷಗಳು ಎಷ್ಟೂ ಇಲ್ಲವೆಂದು ನಾನು ಹೇಳುವುದಿಲ್ಲ. ಶೃಂಗಾರದ ಅತಿರೇಕ, ಸಮಯಶರಣತೆ, ಕೃತಕತೆ ಮೊದಲಾದ ಕೆಲವು ದೋಷಗಳನ್ನು ನಾವು ಅಲ್ಲಲ್ಲಿ ಆತನ ಕಾವ್ಯಗಳಲ್ಲಿ ಕಾಣಬಹುದು. ಆದರೆ ಈ ದೋಷಗಳು ಆತನ ಅಗಣಿತ ಗುಣಗಳಲ್ಲಿ ಮರೆಯಾಗಿ ಹೋಗುತ್ತವೆ. ಆತನೇ ಹೇಳಿದಂತೆ, "ಏಕೋಹಿ ದೋಷೋ ಗುಣಸಂನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ". ಆತನ ದೋಷಗಳನ್ನು ಎಣಿಸಿ ಅವುಗಳನ್ನೇ ಎತ್ತಿ ಹಿಡಿಯುವದು ನನಗೇನೋ ಒಂದು ಅಲ್ಲದ ಕಾರ್ಯವೆಂದು ಎನಿಸುತ್ತದೆ; ಜೋಗದ ಜಲಪಾತವನ್ನು ನೋಡುವಾಗ, ಆ ಭವ್ಯ ಭೀಕರ ಸುಂದರ ದೃಶ್ಯವನ್ನು ನೋಡಿ ಹರ್ಷಿತನಾಗದೆ, ಬೆರಗುವಡೆಯದೆ, ಭಯಭಕ್ತಿಭಾವಕ್ಕೆಡೆಗೊಡದೆ, ಆ ನೀರಿನಲ್ಲಿ ಪಾಚಿ ತೇಲಿಬರುತ್ತದೆ, ನೀರು ರಾಡಿಯಾಗಿದೆ ಎಂದು ಮುಂತಾಗಿ ಅಲ್ಲಿಯ ಕುಂದುಗಳನ್ನು ಎಣಿಸುತ್ತ ನಿಂತ ಅರಸಿಕನಾದ ಮಾನವನಂತೆ. ಕಾಲಿದಾಸನ ಕೃತಿಗಳನ್ನು ಸಹೃದಯತೆಯಿಂದ ಪಠಿಸಿದರೆ ಆವನ ಅಪ್ರತಿಮವಾದ ಪ್ರತಿಭೆ, ಅತುಲವಾದ ವಾಗರ್ಥಪ್ರತಿಪತ್ತಿ, ಮಾನವ ಹೃದಯದ ಸೂಕ್ಷ್ಮಜ್ಞಾನ, ನಮ್ಮ ಮನವನ್ನೂ ಬಗೆಯನ್ನೂ ಏಕತಾನವಾಗಿ ಮಾಡಿಬಿಡುವ ಯಾವುದೋ ಒಂದು ದಿವ್ಯಮಾಯಾ ಮಂತ್ರ, ಇವುಗಳಿಂದ ಮುಗ್ಧರಾಗಿ ಇದಕ್ಕಿಂತ ಜಗತ್ತಿನಲ್ಲಿ ಹೆಚ್ಚಿನ ನಿರ್ವೃತಿ ಉಂಟೆ ಎನ್ನುವಂತಾಗುತ್ತದೆ. ಆಗಿನ ನಮ್ಮ ಹೃದಯದ ಭಾವನೆಗಳು ಇಂತಹವೇ ಎಂದು ವಿಂಗಡಿಸಿ ಹೇಳಲಾಗುವದಿಲ್ಲ. ಆನಂದ, ಆಶ್ಚರ್ಯ, ಅದ್ಭುತ, ಭಕ್ತಿ ಭಾವಗಳ ಮಿಶ್ರಣವು, ನಮ್ಮ ಬುದ್ಧಿಯಿಂದ

ಗ್ರಹಿಸಲಾಗದ ಒಂದು ಉಚ್ಚ ಸ್ಥಿತಿಗೆ ನಮ್ಮ ಮನಸ್ಸನ್ನು ಒಯ್ಯುತ್ತದೆ. ಈ ಸ್ಥಿತಿಯನ್ನು, ವೇದಾಂತಿಗಳು ಬ್ರಹ್ಮಜ್ಞಾನದ ಅನುಭವವನ್ನು ವರ್ಣಿಸುವಂತೆ, ಅನಿರ್ವಚನೀಯವೆಂದೇ ಹೇಳಬೇಕಾಗುತ್ತದೆ. ನಾಗಚಂದ್ರನು ತನ್ನ ಕಾವ್ಯದ ಬಗ್ಗೆ ಹೇಳಿಕೊಂಡ ಈ ಪದ್ಯವನ್ನು ಕಾಲಿದಾಸನ ಕೃತಿಗಳನ್ನು ಕುರಿತು ಇನ್ನೂ ಹೆಚ್ಚು ಔಚಿತ್ಯದಿಂದ ನಾವು ಹೇಳಬಹುದು.

ಸುಕೃತಿಪ್ರೀತಿಲತಾಸಮುತ್ಕಳಿಕೆ ವಿದ್ವನ್ಮಂಡಳೀರತ್ನಕಂ
ಠಿಕೆ ಧರ್ಮಾಮೃತಮೇಘಮಾಳಿಕೆ ವಚಃಶ್ರೀನರ್ತಕೀನೃತ್ಯವೇ
ದಿಕೆ ಸಾಹಿತ್ಯಸರೋಜಕರ್ಣಿಕೆ ಯಶಃಶ್ರೀಕೇಕರಾಳೋಕಚಂ
ದ್ರಿಕೆ ನಿಲ್ಕೀಕೃತಿ ಕಲ್ಪಕೋಟಿವರೆಗಂ ಭದ್ರಂ ಶುಭಂ ಮಂಗಳಂ ||

ಬೆಳಗಾಂವಿ
೧೨-೨-೧೯೩೮.

ವೆಂಕಟೇಶ ಗೋ. ಕುಲಕರ್ಣಿ.



ಪೋಷಕರು,

ವೈ. ಮಹಾಬಲೇಶ್ವರಪ್ಪನವರು, ಡಿ. ಬೋ. ಪ್ರೆಸಿಡೆಂಟ ಬಳ್ಳಾರಿ.

M. P. Belgaum

K. R. Gupta,

VI C/S

W. H. School

Bellary

॥ ಶ್ರೀಶಿವಃ ಶರಣಂ ॥

ಕರ್ಣಾಟಕ ಕುಮಾರಸಂಭವಂ.

ಪ್ರಥಮ ಸರ್ಗಂ.

ಕಂ॥ ನೆಲಸಿ ಹಿಮಾಲಯ ನಾಮದ।
ಚಲರಾಜಂ ದೇವತಾತ್ಮನುತ್ತರ ದಿಶೆಯೊಳ್ ॥
ಸಲೆಪೊಕ್ಕು ಪೂರ್ವ ಪಶ್ಚಿಮ।
ಜಲಧಿಗಳೊಳ್ ಧರೆಯನಳೆವ ಕೋಲೆನಲೆಸೆಗುಂ॥ ೧ ॥

ವ॥ ಆ ಅಚಲರಾಜನ ಪೆರ್ಮೆಯದೆಂತೆನೆ—

॥ ವೃ ॥

ಸುರುಚಿರ ಮೇರುಪರ್ವತನೆ ಪಾಲ್ಗರೆವಲ್ಲಿ ಸಮರ್ಥನಾಗೆ ತಾ।
ನುರೆ ಪೃಥುರಾಜಚಂದ್ರನರಿವಂತಿರೆ ಬೋಧಿಸೆ ಧೇನುರೂಪಮಂ॥
ಧರಿಸಿದ ಭೂಮಿಯಿಂ ಲಸಿತರತ್ನಮಹೌಷಧಿಯೆಂಬ ಪಾಲ ಭೂ॥
ಧರಕುಲಮೊಲ್ದು ಹಿಂಡಿದುದು ವತ್ಸಮನಾಗಿಸಿ ತದ್ಧಿಮಾದ್ರಿಯಂ ॥

ಗಣಿಪೊಡನಂತರತ್ನಜನಿಕಾರಣನಾದ ಹಿಮಾಚಲೇಂದ್ರನಾ।
ಘನಸುಭಗತ್ವಮಂ ಕಿಡಿಸದಿರ್ದುದು ತದ್ಗತಮಪ್ಪ ಮಂಜು ತಾಂ॥
ಗುಣಗಣದಲ್ಲಿ ದೋಷಮಿರಲೊಂದದಡಂಗುವುದಲ್ತೆ ರಾತ್ರಿನಾ-।
ಥನ ಮಲಿನಂ ಮರೀಚಿಗಳ ಮಧ್ಯದೆ ತೋರದಡಂಗುವಂದದಿಂ ॥೩॥

ಸುರವನಿತಾಜನಕ್ಕೊದಗಿಸುತ್ತುರು ವಿಭ್ರಮ ಮಂಡನಂಗಳಾ ।
ತುರಮನೆ ರಾಗರಂಜಿತಮನಾಗಿಸುತುಂ ಜಲಭೃದ್ವಿಭಾಗಮಂ ॥
ಕರಮೆಸೆದಿರ್ಪ ಧಾತುಗಳ ಬೃಂದವ ತಾಂ ಶಿಖರಂಗಳಿಂದಮಾ ।
ಗಿರಿವರನಾಂತು ಶೋಭಿಪನಕಾಲದ ಸಂಜೆಯನಾಂತ ಮಾಳ್ಕೆಯಿಂ ॥

ಆ ನಗರಾಜಮಂಳಿಯ ನಿತಂಬದೆ ಸಂಚರಿಪುನ್ನತಾಭ್ರ ಸಂ ।
ತಾನದ ಛಾಯೆ ಸಾನುಗತಮಾಗಿರಲಲ್ಲಿಗೆ ಬಂದು ಸಿದ್ಧರಾ ॥
ತಾಣದೆ ನಾಡೆ ವೃಷ್ಟಿಪರಿಪೀಡಿತರಾಗುತೆ ಮತ್ತಮಾಕ್ಷಣಂ ।
ಭಾನುಕರಪ್ರದೀಪ್ತಶಿಖರಂಗಳನೊಂದುತಮಿರ್ಪರಲ್ಲಿ ತಾಮ್ ॥ ೫ ॥

ಕರಿಗಳ ಕೊಂದ ಕೇಸರಿಸಮೂಹದ ಪಜ್ಜೆಯ ರಕ್ತರೇಖೆಗಳ್ ।
ಪರಿವ ಹಿಮಾಂಬುವಿಂ ತೊಳೆದು ಪೋದುದರಿಂದವು ಕಾಣದಿರ್ದೊಡಂ
ವರನಖರಂಧ್ರ ಮುಕ್ತಮೆನಿಪುನ್ನತಮೌಕ್ತಿಕವೃಂದದಿಂದಮೇ ।
ಅರಿಯುತಮಿರ್ಕುರ್ಮೈದೆ ಪಥಮಂ ಶಬರಾವಳಿಯಾಹಿಮಾದ್ರಿಯೊಳ್

ಆವುದರಲ್ಲಿ ಧಾತುರಸದಕ್ಷರಮಾಲೆ ಮತಂಗಜಾಂಗದೊಳ್ ।
ತೀವಿದ ಶೋಣಪದ್ಮಕದವೋಲ್ ಮಿಗೆ ಶೋಭೆಯನಾಂತು
ತೋರ್ಪುದೋ ॥
ಆವರಭೂರ್ಜವಲ್ಕಲಚಯಂ ದಿವಿಜಾಂಗನೆಯರ್ಗೆ ಸಂತತಂ ।
ಭಾವಜಲೇಖಕಾರ್ಯಕನುಕೂಲಮೆನಿಪ್ಪುದು ತನ್ನಗೇಂದ್ರನೋಳ್

ವ॥ ಇಂತುಮಲ್ಲದೆ—

ಕ॥ ಗಿರಿಪತಿ ದರೀಮುಖೋದ್ಭವ ।
ಮರುತನಿನೂದುತ್ತೆ ವೇಣುರಂಧ್ರಂಗಳ ತಾಂ ॥
ಮೊರೆಗುಂ ಕಿನ್ನರರುಚ್ಚ ।
ಸ್ವರಗಾನಕೆ ತಾನಮೀಯುಲೆಳಸುವ ತೆರದಿಂ ॥ ೮ ॥

ಕರಿಗಳ್ ಕೆನ್ನೆಯ ತೀಂಟೆಯ।
ಪರಿಹರಿಸಲ್ಕೆಂದು ತಿಕ್ಕೆ ಸರಲತರುಗಳಿಂ॥
ಸುರಿವಾ ಸದ್ರಸಗಂಧದೆ।
ಪರಿಮಳಿತಂಗಳ್ ತಟಂಗಳಾ ಹಿಮಗಿರಿಯಾ ॥೯॥

ಅಲ್ಲಿರುಳೊಳ್ ಜ್ಯೋತಿರ್ಲತೆ।
ಯೆಲ್ಲಂ ಕಂದರಗೃಹಾಂತರಾಳದೆ ಬೆಳಗಂ॥
ಚೆಲ್ಲುತೆ ತೈಲಮದಿಲ್ಲದೆ।
ಭಿಲ್ಲರ ಮಿಥುನಕ್ಕೆ ಸುರತದೀಪಮೆನಿಕ್ಕುಂ ॥೧೦॥

ಕಂ॥ ಗುರುಭಾರಶ್ರೋಣಿಕುಚಾ।
ರ್ತ್ತರಾದ ಕಿನ್ನರಿಯರಾ ಗಿರಿಯ ಹಿಮಘನದಾ॥
ಸರಣಿಯೊಳಂಗುಳಿಪಾರ್ಷ್ಣಿಗ।
ಳುರುಬಾಧೆಯನಾಂತೊಡಂ ಬಿಡರ್ ಮೆಲ್ನಡೆಯಂ॥

॥ ವೃ ॥

ಬರುತಂ ತನ್ನ ಗುಹೋದರಂಗಳೊಳಡಂಗಲ್ ತಾಂ ದಿವಾಭೀತದಂ।
ಶಿರೆವೊಲ್ ಕಳ್ತಲೆ ಸೂರ್ಯನತ್ತಣಿನದಂ ತದ್ಭೂಧರಂ ರಕ್ಷಿಪಂ॥
ಶರಣಂಬೊಕ್ಕಿರೆ ನೀಚನುಂ ಸುಜನನಲ್ಲೆಂತಂತೆವೋಲಾತನೊಳ್।
ಕರಮಿರ್ಟ್ಪರ್ದಪರುನ್ನತರ್ಕಳೊಲಿದಾತ್ಮೀಯತ್ವಮಂ ನಿಕ್ಕುವಂ॥೧೨

ಕಂ॥ ಸುರಿಯೆ ರುಚಿಯುತ್ತಲಿತ್ತಲ್।
ನೆರೆ ಬೀಸುವ ಚಂದ್ರಕಿರಣಸಿತಬಾಲದ ಚಾ।
ಮರದಿಂ ಚಮರಿಗಳಾತನ।
ಗಿರಿರಾಜಾಹ್ವಯಮನೆಸಗುಗುಂ ಸಾರ್ಥಕಮಂ ॥೧೩॥

ಸೆಳೆಯೆ ದುಗುಲಂಗಳಂ ನಾ।
ಣ್ಚಳಿದಲ್ಲಿದ ಕಿನ್ನರೀಜನಕೆ ಕಳ್ಕನೆ ತಾಂ॥
ಜಲಧರ ಪಟಲಂ ಗವಿವನೆ॥
ಗಳ ಬಾಗಿಲೊಳ್ಳೆದೆ ಜೋಲ್ದು ಜವನಿಕೆಯಕ್ಕುಂ॥೧೪॥

ಧೃತಗಂಗಾಂಬುಕಣಂ ಕಂ।
ಪಿತಸರಲಕುಜಂ ವಿಭಿನ್ನಬರ್ಹಿಸುಬರ್ಹಂ॥
ಹಿತಕರ ಮರುತಂ ತದ್ಗಿರಿ।
ಗತಶಬರರ ಮೃಗಿತಮೃಗರ ಸೇವಿಸುತಿರ್ಕುಂ॥ ೧೫॥

ವರಸಪ್ತರ್ಷಿಗಳಾ ಹಿಮ।
ಗಿರಿಯುಗ್ರಸರಂಗಳಲ್ಲಿ ಕೊಯ್ಯಲುಳಿದ ತಾ।
ವರೆಗಳನರಳಿಸುವನಧ।
ಶ್ಚರಸೂರ್ಯಂ ತನ್ನಯೂರ್ಧ್ವಮುಖರಶ್ಮಿಗಳಿಂ॥ ೧೬॥

ವೃ॥

ಹಿಮಧರಣೀಧರಂ ಸವನಸಾಧನವಸ್ತುಗೆ ಜನ್ಮದಾತನುಂ।
ಕ್ಷಮೆಯತಿಭಾರಮಂ ಧರಿಪ ಶಕ್ತಿಯನಾಂತನುಮೆಂಬುದಂ ಕರಂ॥
ಕಮಲಸಮುದ್ಭವಂ ತಿಳಿದು ತದ್ಗಿರಿವಮೌಳಿಗೆ ತಾನೆ ಕೊಟ್ಟನು॥
ತ್ತಮತರಯಜ್ಞಭಾಗಮನೆ ಭೋಗಿಪ ಶೈಲಕುಲಾಧಿಪತ್ಯಮಂ॥

ವ॥ ಇಂತು ಶೈಲಕುಲಾಧಿಪತ್ಯಮಂ ಪಡೆದೆಸೆಯುತ್ತಮೊಂದುದಿನಂ—

ವೃ॥

ಮಿಾನೆಯೆನಿಪ್ಪ ಕನ್ಯೆ ಪಿತೃಮಾನಸದಿಂ ಗ್ರಹಿಸುತ್ತೆ ಜನ್ಮಮಂ॥
ಮಾನಿತೆಯಾಗೆ ಯೋಗಿಜನಕಂ, ತನಗೈಸಲೆ ತಕ್ಕಳೆಂದು ಸಂ॥
ತಾನದ ವೃದ್ಧಿಗಾ ವಧುವ ಕೈವಿಡಿದಂ ವಿಧಿಬದ್ಧಮಾರ್ಗದಿಂ।
ಮಾನವಿದಂ ಸುಮೇರುವಿನ ಮಿತ್ರನುಮಾ ಹಿಮಶೈಲನಾಯಕಂ॥

ಕಂ|| ಬಳಿಕಂ ಕಾಲಕ್ರಮದಿಂ|
ನೆಲೆಗೊಳ್ಸಿನ ಮವರೊಳಾತ್ಮರೂಪಾನುಗುಣಂ||
ಜಲಜಾಸ್ತ್ರಕೇಳಿ ಗರ್ಭವ।
ತಳೆದಳ್ ಬಗೆಗೊಳ್ವ ಜೌವನದ ನಗಸತಿ ತಾಂ ||೧೯||

ವೃ ||

ನಾಕಧವಂ ಸಮಸ್ತನಗಪಕ್ಷವ ಛೇಧಿಪನಾಗಿ ದೀರ್ಘಕೋ।
ಪಾಕುಲನಾದೊಡಂ ಕುಲಿಶಘಾತದ ನೋವನೆ ಕಾಣದಿರ್ಪನುಂ।
ಸ್ವೀಕೃತಸಿಂಧುಸಖ್ಯನುಮಹೀಂದ್ರವಧೂಪರಿಭೋಗ್ಯನಪ್ಪ ನ್ಮೈ।
ನಾಕಸುನಾಮಕಾತ್ಮಭವನಂ ಪಡೆದಳ್ ಪ್ರಿಯೆ ತನ್ನಗೇಂದ್ರನಾ||

ವ|| ವ್ಮೈನಾಕಜನ್ಮಾನಂತರದೊಳ್—

ತ್ರಿಣಯನ ಪೂರ್ವಪತ್ನಿ ಪತಿಭಕ್ತಿಪರಾಯಣೆ ದಕ್ಷನಾತ್ಮ ಸಂ।
ಜನಿತೆ ಸತೀಸನಾಮಾಹ್ವಯದ ದೇವಿಯೆ ತನ್ನಯ ತಂದೆಯತ್ತಣಿಂ||
ಜನಿಸಿದವಜ್ಞೆಯಿಂ ನಿಜಶರೀರವ ಯೋಗದೆ ಬಿಟ್ಟು ತಾಂ ಪುನ।
ರ್ಜನನಮನೊಂದಲಾ ತುಹಿನಭೂಧರಕಾಂತೆಯನ್ಮೈದೆಪೊರ್ದಿದಳ್ ||

ಕಂ|| ಗಿರಿರಾಜನಿನೊಗೆದಳ್ ಸ।
ಚ್ಚರಿತದ ತತ್ಸತಿಯೊಳಾ ಶುಭಾನ್ವಿತೆ ಶುದ್ಧಾ||
ಚರಣದೆ ಕೆಡದ ಸುನಯದೊಳ್।
ಸಿರಿ ತಾನುತ್ಸಾಹಗುಣದೆ ಪುಟ್ಟುವ ಪಾಂಗಿಂ || ೨೨ ||

ವ|| ಇಂತು ಹಿಮವಂತನ ಕಾಂತೆಯೊಳ್ ಮಹಾದೇವಿ ಪುಟ್ಟುವಿನಂ—

|| ವೃ ||

ಧರಿಸೆ ಸುನಿರ್ಮಳತ್ವವ ದಿಶಾವಳಿಯುಂ ರಜವೊಂದದಿರ್ದು ಸಂ।
ಚರಿಸೆ ಸಮೀರಣಂ ಮಧುರಶಂಖನಿನಾದಮದುಣ್ಮೆ ಬಾಂದಳಂ ||
ಸುರಸುಮವೃಷ್ಟಿಯುಂ ಸುರಿಸೆ ಸರ್ವಶರೀರಿಗಳಲ್ಲಿ ಸೌಖ್ಯಮುಂ।
ದೊರೆಕೊಳಿಸಿತ್ತು ಜನ್ಮದಿನಮಾ ಧರಣೀಧರರಾಜಪುತ್ರಿಯಾ ||೨೩||

ಕಂ|| ಜನಯಿತ್ರಿಯಧಿಕತೇಜದ ।
ತನುಭವೆಯಿಂ ನಾಡೆ ತೊಳಗಿದಳ್ ನವಮೋಘ ||
ಧ್ವನಿಯಿಂದುದ್ಭಿನ್ನ ಲಸ ।
ನ್ಮಣಿಯಂಕುರದಿಂ ವಿದೂರಭೂಮಿಯೆಸೆವವೋಲ್ ||೨೪||

ತಳೆದುದಯುವ ದಿನದಿನದೊಳ್ ।
ಬಳೆಯುತವಳ್ ರುಚಿರದವಯುವಂಗಳನಾ ತಿಂ ||
ಗಳರೇಖೆ ಚಂದ್ರಿಕಾನುಯು ।
ಕಳಾಂತರಂಗಳನದೆಂತಿರಂತಿರೆ ಪೊರೆದಳ್ || ೨೫ ||

|| ವೃ ||

ಪಿತನನುಬಂಧಮಂ ಕಥಿಪ ಪಾರ್ವತಿಯೆಂಬಭಿಧಾನದಿಂದಮಾ ।
ಸುತೆಯುನನಂತ ಬಂಧುಹಿತೆಯುಂ ಕರೆಗುಂ ಸಲೆ ಬಂಧುಸಂಕುಲಂ||
ಅತಿಹಿತದಿಂದುಮಾ ಯೆನುತೆ ಮಾತೆ ತಪಃಕೃತಿಯಿಂ ನಿಷೇಧಿಸಲ್ ।
ಕ್ಷಿತಿಯೊಳನಂತರಂ ಪ್ರಥಿತಮಾಯ್ತುಮೆಯೆಂಬ ಪೆಸರ್
ಸುನೇತ್ರೆಯಾ || ೨೬ ||

ಕಂ|| ಅಗಪತಿಗೆ ಮಕ್ಕಳಿರೆಯುಂ ।
ಮಗಳಂ ನೋಳ್ಪವನ ದಿಟ್ಟಿ ಪೊರ್ದದು ತಣಿವಂ ||
ಅಗಣಿತಸುಮಯುತದಾ ಚೇ ।
ಸಗೆಯಲ್ಲಳಿಮಾಲೆಗಳ್ತಿ ಚೂತದೊಳಧಿಕಂ || ೨೭ ||

ಸ್ಫುರದುರುಶಿಖೆಯಿಂ ದೀಪಂ ।
ಸುರನದಿಯಿಂ ಸ್ವರ್ಗಸರಣಿ ಶುದ್ಧವಚನದಿಂ ||
ವರಪಂಡಿತನೆಂತಂತಾ ।
ಗಿರಿಪತಿಯುವಳಿಂದೆ ಪೂತನುಂ ಭೂಷಿತನುಂ || ೨೮ ||

ವೃ ||

ಆಡುವಳಾ ಹಿಮಾಚಲನ ಪುತ್ರಿ ಪಲರ್ವೆ ಸಖೀಜನರ್ಕಳಿಂ ।
ಕೂಡಿ, ಸುರಾಪಗಾಪುಳಿನವೇದಿಗಳಿಂ ನವವಸ್ತ್ರ ಮುಖ್ಯದಿಂ ।
ಮಾಡಿದ ದಿವ್ಯಪುತ್ರಿಕೆಗಳಿಂ ಪುಟಿಸೆಂಡುಗಳಿಂದೆಯುಂ ಲಸ ।
ತ್ಕ್ರೀಡೆಯೊಳುದ್ಭವಿಪ್ಪ ರಸವೀಂಟುವಳೋ ಎನೆ ತನ್ನ ಬಾಲ್ಯದೊಳ್

ಎಂತು ಶರತ್ತಿನೊಳ್ ತ್ರಿಪಥಗಾಮಿನಿಯಂ ಕಲಹಂಸಮಾಲೆ ಮೇ।
ಣೆಂತಿರುಳೊಳ್ ಮಹೌಷಧಿಯ ತದ್ಗತಕಾಂತಿಸುಪಂಕ್ತಿ ಪೊರ್ದುಗುಂ
ಅಂತಿರೆ ಪೊರ್ದಿದತ್ತಮಳ ಬುದ್ಧಿಯ ತದ್ಗಿರಿರಾಜಪುತ್ರಿಯಂ ।
ಪಿಂತಣ ಜನ್ಮದಾ ಸಕಲವಿದ್ಯೆಯೆ ತಾನುಪದೇಶಕಾಲದೊಳ್ ॥ ೩೦ ॥

ಕಂ|| ತನುಲತೆಗಕೃತ್ರಿಮದ ಮಂ।
ಡನಮುಮಸಾಸವಪವಾಖ್ಯಮದಕರಣಂ ಕಾ ॥
ಮನ ಸುಮಮಲ್ಲದ ಶರಮೆಂ।
ದೆನಿಸಿದ ವಯಮಾಂತಳಗಜೆ ಕಳೆದೆಳೆತನಮಂ ॥ ೩೧ ॥

ನವಯೌವನಸಂವ್ಯಕ್ತಮ।
ದವಳಂಗಂ ತೂಲಿಕಾಲಿಖಿತ ಚಿತ್ರದವೋಲ್ ॥
ರವಿಕರಭಿನ್ನಾಬ್ಜದವೊಲ್ ।
ತವೆ ತಾಂ ಚತುರಸ್ರಶೋಭೆಯೊಂದೆನಿಸಿರ್ಕುಂ ॥ ೩೨ ॥

ವ || ಇಂತಿರ್ಪಗಜಾತೆಯ ಅಡಿಯಿಂ ಮುಡಿಯವರೆಗಮಿರ್ಪ ಶೋಭಾತಿಶಯಮೆಂತಿರ್ದುದೆನೆ—

ಕಂ|| ಬಗೆಯಲ್ಕುನ್ನತದುಂಗುಟ ।
ದುಗುರ್ವೆಳಗಡಿಯಿಡಲೊಸರ್ದ ರಕ್ತಮೆನಿಸೆ ತ ||
ನ್ನಗಸುತೆಯಂಘ್ರಿಗಳಪಹರಿ ।
ಸುಗುಮಿಳೆಯೊಳ್ ಚರಿಸುವ ಸ್ಥಲಾಬ್ಜದ ಸಿರಿಯಂ ||೩೩||

ಗಿರಿಸುತೆಯಿಂದಂ ಕಲನೂ ।
ಪುರರವದುಪದೇಶವೊಂದಲೆಂದೆಳಸುತ್ತಂ ||
ಅರಸಂಚೆಗಳಾಕೆಗೆ ಕಲಿ ।
ಸಿರುವವೊ ಎನಲವಳ ಗತಿವಿಲಾಸವು ದೆಸೆಗುಂ || ೩೪ ||

ಸುದತಿಯ ಗೋಪುಚ್ಛಾಕಾ ।
ರದ ಶುಭಜಂಘೆಗಳನನತಿದೀರ್ಘಂಗಳನಾ ||
ಬಿದಿಗೆಯ್ದುಳಿದಂಗವ ಮಾ ।
ಳ್ಪುದಕೆ ಸುಲಾವಣ್ಯ ಸಂಗ್ರಹಕೆ ಯತ್ನಿಸನೇಂ || ೩೫ ||

ಧರೆಯೊಳ್ ವಿಶಾಲತೆಯು ಸಾಂ ।
ತಿರೆಯುಂ ಬಹು ಕರ್ಕಶದ ಕರೀಂದ್ರಕರಂಗಳ್ ||
ಉರುಶೀತದ ಕದಲಿಗಳುಂ ।
ಗಿರಿಜೆಯ ನೊಣ್ದೊಡೆಯ ದೊರೆಗೆ ಪೊರಗೆನಿಸಿರ್ಕುಂ || ೩೬ ||

ಅನವದ್ಯಮೆನಿಪ ನಗಜೆಯ ।
ಘನಜಘನದ ಶೋಭೆಯೆನಿತಡೆಂಬುದು ತಿಳಿಗುಂ ||
ಮನಸಿಜರಿಪು ಬಳಿಕಂ ಪರ ।
ವನಿತಾದುರ್ಲಭದ ತೊಡೆಯೊಳದನಾಂತುದರಿಂ || ೩೭ ||

ವಸನಗ್ರಂಥಿಯ ದಾಂಟುತೆ ।
ಮಿಸುಗುವ ನತನಾಭಿರಂಧ್ರದೊಳಪುಗುತವಳಾ ||
ಪೊಸತೆಳುವಾಸೆಯುದೆಸೆಗುಂ ।
ರಶನಾಮಧ್ಯಸ್ಥನೀಲಮಣಿಕಾಂತಿಯವೋಲ್ || ೩೮ ||

ಜಲಜಾಸ್ತ್ರಂಗೇರಲ್ಕು- ।
ಜ್ವಲನವಯೌವನಮೆ ಗೆಯ್ದ ಸೋಪಾನಮೆನಲ್ ||
ಬೆಳಗುವ ಸುವಳಿತ್ರಯಮುಂ ।
ತಳೆದಳ್ ಮಧ್ಯದೆ ಸುವೇದಿಕೃಶಮಧ್ಯೆಯುವಳ್ || ೩೯ ||

ಜಡಜಾಯತನೇತ್ರೆಯ ಕ।
ರ್ಪಿಡಿದಗ್ರದೆ ತೊಳಪ ಸಿತಪಯೋಧರಯುಗಳಂ॥
ನಡುವೆ ಬಿಸತಂತು ಪುಗಲೆಡೆ।
ಗುಡದೆಯೆ ಬಳೆಗುಂ ಪರಸ್ಪರೋತ್ಪೀಡನದಿಂ ॥ ೪೦ ॥

ಹರನಿಂ ಜಿತನೆನಿಸಿಯುಮಾ।
ಸ್ಮರನಾ ಪರಶಿವನ ಕಂಠಪಾಶಂಗೆಯ್ದಾ॥
ಗಿರಿಜಾಬಾಹುಗಳಂ ನಾಂ।
ಸಿರಸದ ಪೂವಿಂ ಸುಮೃದುಗಳೆಂದೂಹಿಸುವೇಂ ॥ ೪೧ ॥

ಗಿರಿಸುತೆಯ ಕುಚೋನ್ನತದಾ।
ಕೊರಳುಂ ವರ್ತುಲಸುಮೌಕ್ತಿಕಾಮಾಲೆ ಪರ॥
ಸ್ಪರಶೋಭೆಯನಿತ್ತವುಗಳ್।
ಧರಿಸಿದವು ಸಮಾನಭೂಷ್ಯಭೂಷಣತೆಯ ತಾಂ ॥ ೪೨ ॥

ಜಲರುಹಗುಣಮುಂ ಶಶಿಯೊಳ್ ।
ಜಲರುಹದೊಳ್ ಶಶಿಯ ಕಾಂತಿಯುಂ ಪಡೆಯದೆ ಚಂ॥
ಚಲೆ ಸಿರಿಯುಮೆಯಾಸ್ಯದೊಳಿ।
ರ್ದೊಲವಿಂದನುಭವಿಪಳವುಗಳೆರಡರ ಸುಖಮುಂ ॥ ೪೩ ॥

ನವಪಲ್ಲವದೊಳ್ ಸುಮಮುಂ।
ಪವಳದೆ ಸುಮ್ಮುತ್ತನಾದೊಡಂ ತಂದಿರಿಸಲ್॥
ಅವಳಾ ಕೆಂದುಟಿಯೊಳ್ ಸೂ।
ಸುವ ಬೆಳಗಿಂತಳ್ತ ಕಿರುನಗೆಗೆ ಸರಿಬರ್ಕುಂ ॥ ೪೪ ॥

ಕಲಭಾಷಿಣಿಯುವಳಮರ್ದಂ।
ಸಲೆ ಸುರಿಸುವ ಸರದೆ ನುಡಿಯೆ ಕೇಳ್ದ ಜನಕೆ ಕೋ॥
ಗಿಲೆ ನುಣ್ದರಮುಂ ಕರ್ಕಶ।
ಕಲಿತಂ ಶ್ರುತಿಗೂಡದಿರ್ಪ ವೀಣೆಯ ದನಿವೋಲ್ ॥ ೪೫ ॥

ಎಲರಿಂ ಚಲಿಸುವ ಕನ್ನೈ ।
ದಿಲೆಗೆಣೆಯು ಬೆದರ್ದ ನೋಟವುಂ ಮೃಗಿಗಳಿನಾ ॥
ಲಲನಾಮಣಿ ಕಲ್ತಳೊ ಮೇಣ್ ।
ಸಲೆ ಕಲ್ತವೊ ಮೃಗಿಗಳಾ ಸರೋಜಾಂಬಕಿಯಿಂ ॥ ೪೬ ॥

ಗಿರಿಜೆಯು ಕಾಡಿಗೆ ಕಡ್ಡಿಯೊ ।
ಳುರೆಬರೆದಂತಿರ್ಪ ಗೆರೆಯು ನಿಡುವುರ್ಬುಗಳಾ ॥
ವರರುಚಿಯುಂ ಸ್ಮರನೀಕ್ಷಿಸಿ ।
ತೊರೆದಂ ಸೌಂದರ್ಯಮುದವ ನಿಜಕಾರ್ಮುಕದಾ ॥೪೭॥

ನಾಣಿರ್ದೊಡೆ ತಿರ್ಯಕ್ಕುಲ ।
ಮಾನಸದಲ್ಲುಮೆಯ ಕೇಶಪಾಶದ ಪರಿಯುಂ ॥
ಕಾಣುತೆ ಬಾಲದೊಳಿಟ್ಟಭಿ ।
ಮಾನವ ತೊರೆದಿರ್ಕುಮಲ್ತೆ ಚಮರೀವೃಂದಂ ॥ ೪೮ ॥

ಬಿದಿಯೊಂದೆಡೆಯೊಳ್ ಸೌಂದ ।
ರ್ಯದ ಪೆಂಪಂ ನೋಡಲೆಳಸಿದಂತೆ ಸಮೆದನಾ ॥
ಸುದತಿಯುನ್ಮೈದೆ ಯಥಾಸ್ಥಾ ॥
ನದೊಳಿಟ್ಟಖಿಲೋಪಮಾನವಸ್ತುಗಳಿಂದಂ ॥ ೪೯ ॥

ವ॥ ಇಂತಿರ್ಪ ಮಗಳಿಂ ಕೂಡಿ ಹಿಮವಂತನುಂ ತತ್ಕಾಂತೆಯುಂ ಸಂತಸಂಗೊಂಡಿರುತಿರ್ಪಿನಂ:—

॥ ವೃ ॥

ಒಂದಿನದಲ್ಲಿ ಕಾಮಚರನಾರದನಾ ಧರಣೀಧರೇಂದ್ರ ಸ ॥
ನ್ನಂದಿಯುಂ ತದಂತಿಕದೊಳೈಸಲೆ ನೋಡುತುಸುರ್ದನೀಕೆ ತಾಂ ॥

ಮುಂದೆ ಮಹೇಶನರ್ಧ ತನುವಂ ಸೆಳೆದಾತ್ಮವರಾನುರಾಗದಿಂ |
ದೊಂದದೆಯೇ ಸಪತ್ನಿಯನವಂಗೆ ಸುಪತ್ನಿಯೆನಿಪ್ಪಳೆಂಬುದಂ ॥ ೫೦ ॥

ಕಂ॥ ಜನಕನದರಿಂ ತೊರೆದನಾ ।
ತನುಜೆಗೆ ವಯಮಧಿಕಮಿರೆಯುಮನ್ಯವರಾನ್ವೇ ॥
ಷಣವ ಮನುಪೂತಹವ್ಯಮ ।
ನನಲನನುಳಿದಿತರತೇಜಮದು ಪೊರ್ದುಗುಮೇಂ ॥ ೫೧ ॥

ವ॥ ಇಂತನ್ಯವರಾಭಿಲಾಷೆಯಂ ತೊರೆದಿರುತಿರ್ದೋಡಂ:—

ಕಂ॥ ಎರೆಯದ ಹರಂಗೆ ಮಗಳಂ ।
ಗಿರಿವರನೀಯಲ್ಕೆ ಕೋರ್ದುದಿಲ್ಲಂ ಸುಜನಂ ॥
ಧರಿಸುವನೌದಾಸೀನ್ಯಮ ।
ನುರುಯಾಂಭಾಭಂಗಭಯದಿನಿಷ್ಟಾರ್ಥದೊಳಂ ॥ ೫೨ ॥

ಗಿರಿಸುತೆಯುದೆಂದು ತನುವಂ ।
ತೊರೆದಳೊ ಗತಜನ್ಮದಲ್ಲಿ ದಕ್ಷನ ಕಿನಿಸಿಂ ॥
ಹರನಾ ದಿನದಿಂ ವಿಷಯಾ ।
ತುರನಾಗದೆ ಸತಿವಿರಹಿತನಾಗಿರುತಿರ್ಕುಂ ॥ ೫೩ ॥

ವ॥ ಇಂತಿರ್ದೊಂದು ದಿನಂ:—

॥ ವೃ ॥

ಸುರತಟನೀಪ್ರವಾಹಪರಿಸಿಕ್ತಮನೋಹರದೇವದಾರುವುಂ ।
ವರಮೃಗನಾಭಿಗಂಧಯುತಮುಂ ಸಲೆ ಹಾಡುವ ಕಿನ್ನರರ್ಗೆ ಮುಂ ॥
ದಿರವುಮೆನಿಪ್ಪ ತತ್ತುಹಿನ ಭೂಧರಸಾನುವದೊಂದರಲ್ಲಿ ಸು ।
ಸ್ಥಿರಮತಿ ಕೃತ್ತಿವಾಸನುರೆ ವಾಸಿಸಿದಂ ತಪಮಿರ್ಪನೆಂದು ತಾಂ ॥ ೫೪ ॥

ವ|| ಆ ಸಮಯದೊಳ್:—

ತಳಿದು ನಮೇರುಪುಷ್ಪದವತಂಸವ ಕೋಮಳಮಾದ ಭೂರ್ಜವ |
ಲ್ಕಲದುಡೆಯುಟ್ಟು ಶೋಭಿಸೆ ಮನಃಶಿಲೆಯುತ್ತಮಲೇಪಮಂಗ
ದೊಳ್ ||
ನೆಲಸಿತು ಬಂದು ತತ್ಪ್ರಮುಥಸಂಕುಲಮಾದರದಿಂದಮಾ ಹಿಮಾ |
ಚಲದ ಶಿಲಾಜಿತುಪ್ರಚುರಮೆಂದೆನಿಸಿರ್ಪ ಶಿಲಾತಲಂಗಳೊಳ್ |೫೫|

ಆತುಹಿನಾದ್ರಿಯೊಳ್ ಸಹಿಸದಿರ್ದು ಮೃಗೇಂದ್ರರವಕ್ಕೆ ದರ್ಪಸಂ |
ಜಾತಕಲಂ ಕಕುದ್ವಿಲಸಿತಂ ವೃಷಭಂ ಖುರದಗ್ರದಿಂ ಶಿಲೀ ||
ಭೂತತುಷಾರಭೇದನವ ಗೆಯ್ಯುತೆ ಗರ್ಜಿಸಿತಾದಮಾರ್ಪಿನಿಂ |
ಭೀತಿಯನಾಂತದೆಂತೊ ಗವಯಾವಳಿ ತನ್ನನೆ ನೋಡುತಿರ್ಪಿನಂ|೫೬|

ತಾನೆ ಸರ್ವತಪಃಫಲಂಗಳನೀಡುವ ಪ್ರಭುವಾಗಿಯುಂ |
ತಾನದಾವುದೊ ಒಂದು ವಾಂಛೆಯಿನಷ್ಟಮೂರ್ತಿ ಹಿಮಾದ್ರಿಯಾ ||
ಸಾನುವೊಳ್ ಸಮಿದುಜ್ವಲನ್ನಿಜಮೂರ್ತಿಭೇದಕೃಶಾನುವಂ |
ನ್ಯೂನಮಿಲ್ಲದೆ ಸಂಪ್ರತಿಷ್ಠಿಸಿ ಮಾಡಿದಂ ತಪಮಳ್ಕರಿಂ || ೫೭ ||

ವ|| ಇಂತು ತಪಮಿರ್ಪ ಶಂಕರನೆಡೆಗೆ ಬಂದು:—

ಕಂ|| ಗಿರಿಪತಿಯುನರ್ಘ್ಯನಂ ತ |
ತ್ಸುರಪೂಜಿತಹರನರ್ಘ್ಯದಿಂ ಪೂಜಿಸಿ ತಾಂ ||
ನೆರೆ ನಿಯಮದೆ ಕೆಳದಿಯರೊಡ |
ವೆರೆದೀತನ ಸೇವಿಸೆಂದು ತನುಜೆಗೆ ಪೇಳ್ದಂ || ೫೮ ||

ವ|| ಹಿಮನಗಾಧಿಪಂ ಮಗಳ್ಗಿಂತಾಜ್ಞಾಪಿಸಿದ ಸಮಯದೊಳ್:—

ಕಂ|| ಗಿರಿಜೆ ತಪಕ್ಕೆಡರೆಂಬುದ |
ನರಿದುಂ ಶಿವನವಳ ಸೇವೆಗನುಮೋದಿಸಿದಂ ||
ಇರೆ ವಿಕೃತಿಹೇತು ಚಿತ್ತಂ |
ಸ್ಥಿರಮಿರ್ಕುಮದಾರ್ಗೆ ಧೀರರೇ ಅವರಲ್ತೇ || ೫೯ ||

ವ॥ ಇಂತನುಮೋದಿಸಿದನಂತರಂ:—

॥ ವೃ ॥

ಪ್ರತಿದಿನದಲ್ಲಿ ವೇದಿಯ ರಜಂಗಳ ತಾಂ ಗುಡಿಸುತ್ತಮೊಲ್ದು ಕೊ।
ಯ್ಯುತೆ ಬಲಿಪುಷ್ಪಮಂ ತರುತೆ ಮೇಣ್ ನಿಯಮೋದಕಮಂ
ಕುಶಂಗಳಂ ॥
ಕ್ಷಿತಿಧರರಾಜಪುತ್ರಿ ಪರಮಾತ್ಮನ ಸೇವಿಪಳಿಂತು ತಚ್ಛಿರೋ।
ಧೃತಕುಮುದಾಪ್ತರಶ್ಮಿಗಳವೈದೆ ನಿವಾರಿಸೆ ತನ್ನ ಖೇದಮಂ ॥ ೬೦ ॥

ಉಮೋತ್ಪತ್ತಿನಾಮಕ ಪ್ರಥಮಸರ್ಗಂ
ಸಂಪೂರ್ಣಂ.

ದ್ವಿತೀಯ ಸರ್ಗಂ.

ಕಂ॥ ಹಿಮಕರಧರ ಸೇವೆಯೊಳಾ।
ಹಿಮಶೈಲಜೆಯಿರ್ಪ ಸಮಯದೊಳ್ ತಾರಕನಿಂ।
ತಮಗಾಗೆ ಬಾಧೆ ಬಂದರ್।
ಕಮಲಜನೆಡೆಗಮರರಿಂದ್ರನಿರೆ ಮುಂಗಡೆಯೊಳ್ ॥ ೧ ॥

ಕಳೆಗುಂದಿದ ಮೊಗದಿಂದಂ।
ಬಳಿಸಾದಿಗಮರರೆಗೇ ಪದ್ಮಜಂ ಮೈದೋರ್ದಂ॥
ಎಳನೇಸರ್ ಮೈದೋರ್ದಂ।
ತಲರದ ತಾವರೆಗಳುಳ್ಳ ಕೊಳಗಳ್ದಿರೊಳ್ ॥ ೨ ॥

ವ॥ ತತ್ಪರಮೇಷ್ಠಿ ದರ್ಶನಾನಂತರಂ:—

ಕಂ॥ ಸರ್ವಸುವಿದ್ಯಾಪತಿಯಂ।
ಸರ್ವವ ಪುಟ್ಟಿಸುವ ಸರ್ವತೋಮುಖ ವಿಧಿಯಂ॥
ಸರ್ವಾಮರರಭಿವಂದಿಸಿ।
ಸರ್ವಾರ್ಥಾನ್ವಿತವಚನಂಗಳಿಂ ನುತಿಗೆಯ್ದರ್ ॥ ೩ ॥

ವ॥ ಅದೆಂತೆಂದೊಡೆ:—

ಕಂ॥ ವಂದಿಸುವೆವು ಸೃಷ್ಟಿಗೆ ಮೊದ।
ಲ್ಲೊಂದೇ ರೂಪಿಂದಮಿರ್ದು ಬಳಿಕಂ ಮೂವ್ಟ।
ಯಿಂದಂ ತ್ರಿಗುಣದ ಭೇದವ।
ನೊಂದಿ ವಿರಾಜಿಸುವ ನಿನಗೆ ವನರುಹಪೀಠಾ ॥ ೪ ॥

ಜಲಮಧ್ಯದೊಳ್ಳಿರಿಸಿದ ನಿ|
ಷ್ಫಲಮಲ್ಲದ ನಿನ್ನ ಬೀಜದಿಂ ಜಗಮೆಲ್ಲಂ ||
ಸಲೆ ಪುಟ್ಟಿದ ಕತ್ತದಿಂದಂ|
ಜಲಜೋದ್ಭವ ನೀನೆ ವಿಶ್ವಹೇತುವೆನಿಸಿದೈ || ೫ ||

ಮೂರಾಕೃತಿಯಿಂದಂ ವಿ|
ಸ್ತಾರಂಗೆಯ್ಯಾತ್ಮಶಕ್ತಿಯಂ ನೀನೊರ್ವಂ|
ಆರಯೆ ಸೃಷ್ಟಿಸ್ಥಿತಿಸಂ|
ಹಾರಂಗಳ್ಗಾದೆಯುತ್ತಿ ಕಾರಣಪುರುಷಂ || ೬ ||

ವ|| ಇಂತು ಭೂತಸೃಷ್ಟಿಯ ಕರ್ತೃತ್ವಮಾಂತು ಮತ್ತಂ—

ಎಳಸುತ್ತಂ ಸ್ತ್ರೀಪುರುಷಯು|
ಗಳಸರ್ಗಮಭಿನ್ನಮೂರ್ತಿಯೆನಿಸಿದ ನಿನ್ನಾ||
ತೊಳಪಾತ್ಮದೆರಡು ಭಾಗಂ|
ಗಳೆ ಸೃಷ್ಟಿಯ ಪಿತೃಗಳಾದಪೆಲೆ ವಾಗೀಶಾ || ೭ ||

ಪರಮೇಷ್ಠಿ! ನಿನ್ನ ಕಾಲದ|
ಪರಿಮಾಣದಿನಪ್ಪಿರುಳ್ಪಗಲ್ಗಳೊಳುಂಟಾ|
ಗಿರುವ ಭವನ್ನಿದ್ರಾಜಾ|
ಗರಣಂಗಳ್ ಭೂತಚಯದ ಲಯಸರ್ಗಂಗಳ್ || ೮ ||

ಜಗದಾದಿಯನಾದಿಯುಮೀ|
ಜಗದಂತನನಂತನುಂ ಸರೋರುಹಗರ್ಭಾ||
ಜಗದೀಶನನೀಶಂ ನೀಂ|
ಜಗಕ್ಕೆಸಲೆ ಹೇತು ನಿನಗೆ ಹೇತುವದಿಲ್ಲಂ || ೯ ||

ಅರಿವೆಯ್ ನಿನ್ನಂ ನೀನೇ।
ನೆರೆ ನಿನ್ನಂ ನೀನೆ ಸೃಜಿಸಿಕೊಳ್ವೆಯ್ ಮತ್ತಂ।
ಪಿರಿದೆನಿಪ ಶಕ್ತಿಯಿಂದಂ।
ದೊರಕೊಳಿಸುವೆಯಲ್ತೆ ವಿಲಯಮಂ ನೀಂ ನಿನ್ನೊಳ್।೧೦।

ಕಂ॥ ನೀನೇ ದ್ರವಮೃತಿಕಠಿಣಂ।
ನೀನೇ ಸ್ಥೂಲಂ ಸುಸೂಕ್ಷ್ಮಮುಂ ಲಘು ಗುರುವುಂ॥
ನೀನೇ ಕಾರ್ಯಂ ಕಾರಣ।
ನೇ ಮಿನ್ನಣಿಮಾದಿಸಿದ್ಧಿಯೇ ನಿನ್ನ ವಶಂ ॥ ೧೧ ॥

॥ ವೃ ॥

ಆವುದರಾದಿಯೊಳ್ ಪ್ರಣವಮೊಪ್ಪುವುದೋ ತ್ರಿವಿಧ ಸ್ವರಗಂಗಳಿಂ॥
ದಾವುದನರ್ಥಮಪ್ಪ ಪರಿಯಿಂದಿರದುಚ್ಚರಿಸುತ್ತಮಿರ್ಪರೋ॥
ಆವುದು ಪೇಳ್ವ ಕರ್ಮಮೆ ಸುಯಜ್ಞಮೊ ತತ್ಫಲಮೈದೆ ಸಗ್ಗಮೋ॥
ಆವಿಮಲಶ್ರುತಿಪ್ರಥಿತವಾಕ್ತತಿಗೈಸಲೆ ನೀನೆ ಕಾರಣಂ ॥ ೧೨ ॥

ಕಂ॥ ಪುರುಷಾರ್ಥಂಗಳ ನೀಡಲ್।
ಪರಿಣಮಿಪ ಪ್ರಕೃತಿ ನೀನೆ ತದ್ದರ್ಶನಮಂ॥
ನೆರೆ ಗೆಯ್ವೌದಾಸೀನ್ಯದೊ।
ಳಿರುತಿರ್ಪ ಪುರುಷನಾದೊಡಂ ನೀನೆಂಬರ್ ॥ ೧೩ ॥

ನೀನೇ ಪಿತೃಗಳ್ಗಂ ಪಿತೃ।
ನೀನೇ ದೇವಪ್ರಜಕ್ಕಮಧಿದೇವತೆಯುಂ॥
ನೀನೆ ಪರಕ್ಕಂ ಪರನೈ।
ನೀನೇ ದಕ್ಷಾದಿಧಾತೃಗಳ್ಗಂ ಧಾತ್ರಂ ॥ ೧೪ ॥

ನೀನೇ ಹೋತೃ ಹವಿಸ್ಸೈ।
ನೀನೇ ಮೋಕ್ಷ ಭೋಕ್ತೃ ಭೋಜ್ಯನೆಲೆ ಶಾಶ್ವತನೇ ॥
ನೀನೇ ಜ್ಞಾತೃ ಜ್ಞೇಯಂ।
ನೀನೇ ಮೋಕ್ಷ ಧ್ಯಾತೃ ಪರತರಂ ಧ್ಯೇಯಂ ನೀಂ ॥ ೧೫ ॥

ಅಸುರರ ಯಥಾರ್ಥ ಹೃದಯಂ।
ಗಮುಥೀ ವಿಧನ್ನುತಿಯ ಕೇಳ್ದನುಗ್ರಹದಿಂದಂ ॥
ಕಮಲಜನಾ ಸಮಯದೊಳೀ।
ಕ್ರಮದಿಂದಾ ನಿರ್ಜರರ್ಗೆ ಮಾರ್ನುಡಿ ನುಡಿದಂ ॥ ೧೬ ॥

ವ॥ ನುಡಿವ ಸಮಯದೊಳ್—

ಕಂ॥ ಆದಿಕವಿಯಾದ ತತ್ಕಮ।
ಲೋದರನ ಚತುರ್ಮುಖಂಗಳಿಂದುಚ್ಚರಿತಂ॥
ಆದುದರಿಂದಂ ಸಾರ್ಥಕ।
ಮಾದುದು ಸಾಲ್ದೆರದ ಶಬ್ದವೈಖರಿಯುದು ತಾಂ ॥ ೧೭ ॥

ವ॥ ಇಂತು ಭಾಷೋರಮಣಿಗೆ ಸಾರ್ಥಕತೆಯಿತ್ತು ದೇವತೆಗಳ ಸ್ವಾಗತಮಂ ಬಯಸಿದನದೆಂತೆನೆ—

ಕಂ॥ ಆರ್ಪಿಂ ನಿಜಾಧಿಕಾರದೊ।
ಳೊರ್ಪತಿವಿಕ್ರಮರೆ, ಯುಗಭುಜರೆ ನೀಮೆಲ್ಲರ್ ॥
ಒಪ್ಪೊರ್ಳೆ ಬಂದಿರೇಂ ಸುಖ।
ಮಿಪ್ಪುದೆ ನಿಮ್ಮಾಗಮನಮುದಮುರೋತ್ತಮರೇ ॥ ೧೮ ॥

ಮೊದಲಂದದಿಂದೆ ನಿಮ್ಮಯ।
ವದನಂಗಳ್ ತಳೆಯವೇಕೆ ನಿಜಕಾಂತಿಗಳಂ ॥
ಒದಗಿರೆ ಹಿಮಸಮಯಂ ಪೊ।
ರ್ದಿದ ಮಂದಪ್ರಭೆಯ ತಾರೆಗಳ ತೆರದಿಂದಂ ॥ ೧೯ ॥

ವರಮುಂ ನಿನ್ನಿಂದಂ ಪಡೆ ।
ದುರುಗರ್ವಿತನಾಗಿ ತಾರಕಾಖ್ಯಂ ದೈತ್ಯಂ ॥
ಪಿರಿದೆನಿಸಿದುಪದ್ರವಮುಂ ।
ದೊರೆಕೊಳಿಪಂ ಜಗಕೆ ಧೂಮಕೇತುವ ತೆರದಿಂ ॥ ೩೨ ॥

ಆ ದೈತ್ಯಾಧೀಶನ ಪುರ ।
ಭೇದನದಾ ದೀರ್ಘಿಕಾಬ್ಜಕುಲಮುಲರಲ್ ಬೇ ॥
ಕಾದುದದೆನಿತೆಂಬುದ ನರಿ ।
ದಾದಿತ್ಯಂ ಬಿಸಿಲನನಿತನೊದಗಿಸುತಿರ್ಪಂ ॥ ೩೩ ॥

ಶಿವನ ಶಿರೋಭೂಷಣಮೆನಿ ।
ಸುವ ಕಳೆಯುನದೊಂದನುಳಿದು ಸರ್ವಕಳೆಗಳಿಂ ॥
ಕುವಲಯಬಾಂಧವನಾವಗ ।
ಮುವನಂ ತಾರಕನನಿರದೆ ಸೇವಿಸುತಿರ್ಪಂ ॥ ೩೪ ॥

ಅಲರಂ ಕಳ್ವಪವಾದ ।
ಕ್ಕೊಳಗಾಗುವೆನೆಂಬ ಭಯದೊಳಲದೋಱಂಟಿದೊಳೇ ॥
ಸುಳಿಯದೆ ತತ್ಪಾರ್ಶ್ವದೊಳೇ ।
ಚಲಿಪಂ ಬಿಜ್ಜಣಿಗೆಯಲರ ಗತಿಯಿಂ ಪವನಂ ॥ ೩೫ ॥

ಋತುಗಳ್ ಕ್ರಮಸೇವೆಯನುಳಿ ।
ಯುತೆ ಸುಮಸಂಗ್ರಹಣತತ್ಪರಂಗಳೆನಿಸಿ ತಾವ್ ॥
ಸತತಂ ತದ್ರಾತ್ರಿಂಚರ ।
ಪತಿಯಂ ಸೇವಿಸುಗುಮೈದೆ ವನಪಾಲರವೊಲ್ ॥ ೩೬ ॥

ಜಡನಿಧಿಯವಂಗೆ ಕಾಣಿಕೆ ।
ಗುಡಲರ್ಹಮೆನಿಪ್ಪ ಮಣಿಗಳುದಕಾಂತರದೊಳ್ ॥
ನಡೆ ಸಂಭವಿಸುವವರೆಗಂ ।
ಕಡುಜತನದೆ ತಾಂ ನಿರೀಕ್ಷಿಸುಗುಮುವುಗಳನೇ ॥ ೩೭ ॥

ಜ್ವಲದುರುಮಸ್ತಕಮಣಿಶಿಖೆ ।
ಗಳ ವಾಸುಕಿಮುಖ್ಯವಿಷಧರದಂಗಳ್ ನಿಶೆಯೊಳ್ ।
ತಳೆದು ಸ್ಥಿರದೀಪತ್ವವ ।
ಸಲೆ ಸೇವಿಸುತಿರ್ಕುಮಿರದೆ ಬಳಸುತ್ತವನಂ ॥ ೩೮ ॥

ಎಳಸುತೆ ತದನುಗ್ರಹಮಂ ।
ಬಲರಿಪುವುಂ ಮತ್ತೆಮತ್ತೆ ಸುರಕುಜಸುಮಮಂ ॥
ಕಳಿಸುತ್ತಂ ದೂತರಿನೈ ।
ಸಲೆ ತಾನನುಕೂಲನಂ ನೆಗಳ್ಚುಗುಮವನಂ ॥ ೩೯ ॥

ಆರಾಧಿಸಿದೊಡಮಿಂತಾ ।
ತಾರಕನಂ ಪೀಡಿಸುಗುಮವಂ ತ್ರಿಜಗಮನೇ ॥
ಆರಯೆ ಕುಜನಂ ಪ್ರತ್ಯಪ ।
ಕಾರದೊಳೆಂತಂತೆ ಶಾಂತನಲ್ಲುಪಕೃತಿಯೊಳ್ ॥ ೪೦ ॥

ಮುಡಿಯುಲ್ಕಮರಾಂಗನೆಯರ್ ।
ಕಡುದಯೆಯಿಂದಾವ ಸುರಕುಜಂಗಳ ತಳಿರಂ ।
ನಡೆ ಕೊಯ್ವರೊ ನಂದನದೊಳ್ ।
ಕಡಿದುರುಳಿಪ ಗತಿಯು ಕಂಡವವು ತಾರಕನಿಂ ॥ ೪೧ ॥

ಸೆರೆಗೆಯ್ದಮರಿಯರಾ ನಿ ।
ರ್ಜರರಿಪು ನಿದ್ರಿಸುವ ಪ್ರೋಳ್ತೊಳಂ ಸ್ವಾಸಸಮಂ ॥
ಮರುತಂ ಪುಟ್ಟುವ ವೊಲ್ ಚಾ ।
ಮರಮಂ ಬೀಸುತ್ತಮಿರ್ಪರಶ್ರು ಸುರಿವಿಸಂ ॥ ೪೨ ॥

ಜಲಜಸಖತುರಗಖುರದಿಂ ।
ದಳಿತಂಗಳೆನಿಪ್ಪ ಮೇರುಶಿಖರಂಗಳನಾ ॥
ಖಳನುರೆ ಕಿಳ್ತಾತ್ಮಗೃಹಂ ।
ಗಳೊಳಾಡುಂಬೆಟ್ಟಗಳನೊಡರ್ಚಿಸಿದಂ ತಾಂ ॥ ೪೩ ॥

ಮಂದಾಕಿನಿಯೊಳ್ ತಾಂ ಜಲ |
ವೊಂದೇ ದಿಗ್ಗಜಮುದಾವಿಲಮುದುಳಿದಿರ್ಕುಂ ||
ಪೊಂದಾವರೆಸಸಿಗಳ್ ತ |
ನ್ಮಂದಿರವಾಪಿಗಳ ಸೇರ್ದವೀಗಳ್ ವಿಭುವೇ || ೪೪ ||

ಖಿಲವಾಗೆ ವಿಮಾನಪಥಂ |
ಖಲನವನಾಕ್ರಮಿಪನೆಂಬ ಭಯದಿಂದೀಗಳ್ ||
ತಳೆಯರ್ ಸಮಸ್ತಲೋಕಂ |
ಗಳ ನೋಳ್ಪಾನಂದದನುಭವವ ದಿವಿಜರ್ಕಳ್ || ೪೫ ||

ವಿತತಾಧ್ವರಂಗಳೊಳ್ ಸ |
ನ್ನುತಯಾಜ್ಞಿಕರಿತ್ತ ಹವಿಯನಗ್ನಿಮುಖದಿನ ||
ದ್ಭುತಮಾಯಾಬಳನವನಪ |
ಹೃತಿಗೆಯ್ವಂ ನಮ್ಮ ಕಣ್ಗಳಿದಿರೊಳೆ ಕೇಳೈ || ೪೬ ||

ಸುರನಾಥನ ಸಾಕಾರದ |
ಚಿರಕಾಲಾರ್ಜಿತಸುಯಶಮನೆಂತಂತೆವೊಲಾ ||
ಸುರಕುಲರಿಪು ತಾರಕನಪ |
ಹರಿಸಿದನುಚ್ಚೈಃ ಶ್ರವಾಖ್ಯ ಹಯರತ್ನಮನೇ || ೪೭ ||

ಕ್ರೂರನೊಳಾ ರಾಕ್ಷಸನೊಳ್ |
ತೋರದದೆಮ್ಮಖಿಳವಿಧದುಪಾಯಕೆ ಫಲಮೋ ||
ಸಾರೌಷಧಿಯಿಂದೆ ಫಲಂ |
ತೋರದ ತೆರದಿಂದೆ ಸನ್ನಿಪಾತ ಜ್ವರದೊಳ್ || ೪೮ ||

ಅತುಳಜಯಮಾವುದರೊಳಾ |
ಗತಮಪ್ಪುದನೆಳಸುತಿರ್ದೆವೋ ಪ್ರತಿಘಾತೋ ||
ದ್ಗತತೇಜದ ಮುರಹರವಿ |
ಶ್ರುತಚಕ್ರಮುದವನಗಳದೊಳಿರ್ದುದು ಮಣಿವೋಲ್ || ೪೯ ||

ಅಸುರೇಂದ್ರನವನ ಮದಕರಿ ।
ವಿಸರಂ ನಿರ್ಜಿತಸುರೇಂದ್ರಗಜಮಿಂದಭ್ಯಾ ।
ಸಿಸುಗುಂ ವಪ್ರಕ್ರೀಡೆಯು ।
ನೊಸೆದೀಗಳ್ ಪುಷ್ಕರಾದಿ ಜಲಧರತಟದೊಳ್ ॥ ೫೦ ॥

ವ॥ ಇಂತಾ ತಾರಕನಿಂದನೇಕಕಷ್ಟವೊಗೆದಿದಿರ್ಪುದರಿಂ:—

ಭವಕರ್ಮಬಂಧವಿಚ್ಛೇ ।
ದವ ಧರ್ಮನ ಮುಕ್ತಿಕಾಮರೆಳಸುವ ತೆರದಿಂ ॥
ಅವನಂ ನಾಶಿಪ ಸೇನಾ ।
ಧವನಂ ನೀಂ ಸೃಜಿಸಲೆಳಸುನೆವು ಮತ್ರ್ಯಭುವೇ ॥ ೫೧ ॥

ಸುರಬಲರಕ್ಷಕನಂ ಮುಂ ।
ತಿರಿಸಿಕೊಳುತ್ತಿಂದ್ರನಾವನಂ ರಿಪುಕುಲದಿಂ ॥
ಸೆರೆವೆಣ್ಣಂ ತರ್ಪಂದದೆ ।
ತರುತಿರ್ಪನೊ ವಿಜಯರಮೆಯುನವನಂ ಸೃಜಿಸೈ ॥ ೫೨ ॥

ಗುರುವಾಕ್ಯಮುದು ಮುಗಿಯೆ ತ ।
ತ್ಪರಮೇಷ್ಠಿಯಿನೊಗೆದ ದಿವ್ಯ ವಚನಮುದು ತಿರ ॥
ಸ್ಕರಿಸಿದುದು ಗರ್ಜಿತಾಸಂ ॥
ತರವೃಷ್ಟಿಯುನಿರದೆ ತನ್ನ ಸುಭಗತೆಯಿಂದಂ ॥ ೫೩ ॥

ಫಲಿಸುವುದು ನಿಮ್ಮಭೀಷ್ಟಮಿ ।
ದೆಲೆವಿಬುಧರೆ ಕಳೆಯಿರಲ್ಪಕಾಲವ ಸುರಸಂ ॥
ಕುಲಕನುಕೂಲನೆನಿಪ್ಪಾ ।
ದಳಪತಿಯಂ ಸೃಜಿಪ ಕಜ್ಜಮಾಗದು ನನ್ನಿಂ ॥ ೫೪ ॥

ಅಸುರಂ ಪ್ರಾಪ್ತಾಭ್ಯುದಯನೆ |
ನಿಸೆ ನನ್ನಿಂ ನಾನೆ ಕೊಲ್ವುದನುಚಿತಮವನಂ ||
ವಿಷಕುಜಮನಾದೊಡಂ ಪೋ |
ಷಿಸಿ ತಾಂ ಮೇಣ್ ತಾನೆ ಕಡಿವುದದನಲ್ತುಚಿತಂ ॥ ೫೫ ||

ಎರೆದನವಂ ಮೊದಲೆನ್ನಂ |
ಸುರರಿನವಧ್ಯತ್ವಮನೆ ಅದಂ ನಾನಿತ್ತೆಂ ||
ವರಮುದೆ ಶಿಂ ಲೋಕಂಗಳ |
ನುರುಪಲ್ತ್ತ್ಕವನ ತಪಕೆ ಗೆಯ್ದುದು ತಣ್ಪಂ ॥ ೫೬ ||

ರಣಕುಶಲಂ ತತ್ತಾರಕ |
ದನುಜಂ ಕದನಕ್ಕೆ ಸಿದ್ಧನಾಗಲ್ಕಿದಿರೊಳ್ ||
ತ್ರಿಣಯನ ನಿಷಿಕ್ತರೇತ |
ಸ್ಸಿನ ಭಾಗಮನುಳಿದೊಡಿನ್ನದಾವಂ ನಿಲ್ವಂ || ೫೭ ||

ಆ ದೇವಂ ತಮದಿಂ ದೂ |
ರಾದ ಪರಂಜ್ಯೋತಿಯಾಗಿ ರಾಜಿಪನಿನ್ನಾ ||
ಮಾದೇವನತಿಶಯದ ಮಹಿ |
ಮೋದಯಮರಿಯಲ್ಕಶಕ್ಯಮೆನಗಂ ಹರಿಗಂ ॥ ೫೮ ॥

ಎಂತಿರೆ ಕಬ್ಬುನಮನಯ |
ಸ್ಕಾಂತದಿನಂತುಮೆಯ ವಿಮಳರೂಪದಿನಾ ಕಾ ॥
ಲಾಂತಕನ ಸಂಯಮಿತಸು |
ಸ್ವಾಂತಮನುರೆ ಸೆಳೆಯಲುಜ್ಜುಗಿಸಿರೆಲೆ ಸುರರೇ || ೫೯ ॥

ನಿಶಾಂಕಕಲಾಜೂಟನ |
ಮೇಣೆನ್ನ ನಿಷಿಕ್ತ ತೇಜಮಂ ಧರಿಸಲ್ಕಾ ॥
ಕ್ಷೋಣೀಭೃತ್ತನುಭವೆಯಿಶಾ |
ಶಾನನ ಜಲಮಯದ ಮೂರ್ತಿಯೀರ್ವರೆ ಶಕ್ತರ್ ॥ ೬೦ ॥

ಸುರರೇ ತದ್ಗಿರಿಶನ ಸುತ ।
ನುರೆ ನಿಮ್ಮ ಚಮೂಪತಿತ್ವಂ ತಳೆಯುತ್ತಂ ॥
ಪರ ಶೌರ್ಯದೆ ಪರಿಹರಿಪಂ ।
ಸೆರೆವನೆಯಮರಾಂಗನೆಯರ ಜಡೆಗಳ ತೊಡಕಂ ॥ ೬೧ ॥

ಅಮರರ್ಕಳ್ಗೀ ತೆರದಿಂ ।
ಕಮಲಭವಂ ಪೇಳ್ದು ವೈಯಮಡಗಿಸುವಿನಮಾ ॥
ಸುಮನಸರುಂ ನಿಜಕರ್ತ |
ವ್ಯಮನುರೆ ನಿಶ್ಚೈಸಿ ಮನದೆ ಸಗ್ಗಕೆ ಪೋದರ್ ॥ ೬೨ ॥

ಸಿತಿಕಂಠಚಿತ್ತಹರಣಕೆ ।
ರತಿವಲ್ಲಭನರ್ಹನೆಂದು ತಿಳಿದ ಮಹೇಂದ್ರಂ ॥
ಕೃತಿಸಿದ್ಧಿಕಾಂಕ್ಷೆಯಿಂ ದ್ವಿಗು ।
ಣಿತವೇಗದ ಮನದೆ ನೆನೆದನಾ ಸುಮಶರನಂ ॥ ೬೩ ॥

ವ॥ ತತ್ಸ್ಮರಣಾನಂತರಂ:—

ಕುಂದದ ಮೊಂದಳಿರ್ಗಣೆ ವಿರಾಜಿಸೆ ಮಿತ್ರವಸಂತಹಸ್ತದೊಳ್ ।
ಸುಂದರಿಯುಂದವಾದ ನಿಡುಪುರ್ಬಿನ ಶೋಭೆಯ ತಾಳ್ದ ಕೊಪ್ಪ ತಾ ॥
ನೊಂದಿದ ಬಿಲ್ಲನಾಂತು ರತಿಕಂಕಣಚಿಹ್ನಿತಕಂಠವಲ್ಲಿ ಸಂ ।
ಕ್ರಂದನನಲ್ಲಿಗಾಗಮಿಸಿದಂ ಕರಮಂ ಮುಗಿದಾ ಮನೋಭವಂ ।೬೪।

ಬ್ರಹ್ಮಾಭಿಗಮನನಾಮಕ ದ್ವಿತೀಯ ಸರ್ಗಂ

— ಸಂಪೂರ್ಣಂ —

ತೃತೀಯ ಸರ್ಗಂ.

ಕಂ॥ ಸುರಪತಿಯುಕ್ಷಿಸಹಸ್ರಂ ।
ಸುರರಂ ಬಿಟ್ಟೊರ್ಮೆಗೆರಗಿತಂಗಜನೊಳೆ ತಾಂ ॥
ಅರಿವೊಡೆ ಚಲಮುಕ್ಕುಂ ಫಲ ।
ಪರತೆಯಿನಾಶ್ರಿತರೊಳಾದರಂ ಪ್ರಭುಜನದಾ ॥ ೧ ॥

ಬಿಡದಿಲ್ಲಿ ಕುಳಿತುಕೊಳ್ಳೆಂ ।
ದೆಡೆಯುಂ ಬಿಡೆ ಪೀಠದಂತಿಕದೊಳಿಂದಿರನಾ ॥
ವೊಡೆಯನ ದಯೆಯುಂ ತಲೆಯೊಳ್ ।
ನಡೆ ಪೊತ್ತಿಂತುಸುರ್ದನಂಗಜಾತಂ ರಹದೊಳ್ ॥ ೨ ॥

ನಿನಗಾವುದು ಕೃತ್ಯಂ ತ್ರಿಭು ।
ವನದೊಳ್ ಚೆಸಸೆನಗೆ ವಿದಿತಪುರುಷ ವಿಶೇಷಾ ॥
ನೆನೆದಿತ್ತ ಭವದನುಗ್ರಹ ।
ಮನೆ ಬಳೆಯಿಸಲೆಳಸೆನಲ್ತೆ ನಿನ್ನ ಚೆಸನದಿಂ ॥ ೩ ॥

ಅತಿದೀರ್ಘತಪದೆ ಸಗ್ಗದ ।
ಪತಿಯಾಗಲ್ಕೆಳಸಿ ನಿನ್ನೊಳಳ್ಕಜದಿಂ ವ ॥
ರ್ತಿಪನಾವನುಸಿರ ಮತ್ಸಂ ।
ಹಿತಶರಚಾಸಕ್ಕೆ ವಶಮನಾಗಿಪೆನವನಂ ॥ ೪ ॥

ಶತಮುಖ ನಿನಗಾವನಸಂ ।
ಮತನೆಳಸಂ ಜನ್ಮಭಯದೆ ಮುಕ್ತಿಯುನವನಂ ॥
ಸತತಂ ಬಂಧಿಪೆಸಾರೇ ।
ಚಿತಸುಭ್ರೂಸುಂದರೀಕಟಾಕ್ಷಂಗಳೊಳಾಂ ॥ ೫ ॥

ವ॥ ಇಂತಮಲ್ಲದೆ:--

॥ ವೃ ॥

ನಿನಗಹಿತಾತ್ಮನಾವನುರೆ ಭಾರ್ಗವನಿಂದುರುನೀತಿಶಾಸ್ತ್ರಶಿ ।
ಕ್ಷಣವಿರದಾಂತೊಡಂ ಕಥಿಸು ನೀನವನಂ ವಿಷಯಾಶೆಯೆಂಬ ದೂ ॥
ತನನೊಡಗೊಂಡು ನಾಂ ಕಿಡಿಪೆನಾತನ ಧರ್ಮಧನಂಗಳಂ ಸರಿ ।
ತ್ತಿನ ತಟಯುಗ್ಮಮಂ ಕಿಡಿಪವೋಲ್ ಮಿಗೆ ಪೆರ್ಚಿದ ವಾರಿ
ಸಂಚಯಂ ॥ ೬ ॥

ಪರಿಕಿಸಿ ರೂಪಮಂ ಚಲಿತಮಾದ ಭವನ್ಮನದಂತರಾಳದೊಳ್ ।
ವರಪತಿಭಕ್ತಿಶೀಲೆಯೆನಿಪಾವ ನಿತಂಬಿನಿ ಪೊಕ್ಕಳಾಕೆಯೇ ॥
ತೊರೆಯುತೆ ಲಜ್ಜೆಯಂ ನಿಜಭುಜಂಗಳನೈಸಲೆ ನಿನ್ನ ಕಂಠದ ।
ಲ್ಲಿರಿಸುವುದಂ ಸುರಾಧಿಪನೆ ನೀಂ ಬಯಸಿರ್ಪೆಯೊ ಮಾಳ್ಪೆನಂತೆನಾಂ॥

ಕಂ॥ ಸುರತಾಪರಾಧದಿಂದಡಿ ।
ಗೆರಗಿರೆ ಕಾಮುಕನೆ ನಿನ್ನನಾವಳ್ ಕಿನಿಸಿಂ ॥
ದುರೆ ಕಡೆಗಣಿಸಿದಳವಳೊಡ ।
ಲುರುತಪ್ತಮನೆಸಗಿ ತಳಿರ ಪಾಸಿನೊಳಿಡುವೆಂ ॥ ೮ ॥

ಕುಲಿಶಂ ವಿಶ್ರಮಿಸುಗೆ ಕಡು ।
ಗಲಿ ನೀಂ ದಯೆಗೆಯ್ ಮದಸ್ತ್ರದಿಂ ನಿಷ್ಫಲದೋ ॥
ರ್ಬಲನಾಗುತಾವ ದೈತ್ಯಂ ।
ಮುಳಿಸಿಂ ಚಲಿಸಧರದಬಲೆಯುರ್ಗಂಜಂ ಪೇಳ್ ॥ ೯ ॥

ಕುಸುಮಾಸ್ತ್ರನಾದೊಡಂ ತ್ವ ।
ತ್ಪ್ರಸಾದದಿಂ ಮಧುವ ಸಾಯಮೊಂದರೊಳೆ ಧೃತೋ ॥
ಲ್ಲಸಿತಪಿನಾಕಶಿವನ ಧೃತಿ ।
ಗೆಸಗುವೆನಾಂ ಚ್ಯುತಿಯನನ್ಯಧನ್ವಿಗಳಿನ್ನೇಂ ॥ ೧೦ ॥

ವ|| ಕಂತು ತನ್ನ ಪರಾಕ್ರಮಾತಿಶಯಮನಿಂತು ವಿವರಿಸೆ:—

ಬಳಿಕಂ ಸುರಪಂ ತೊಡೆಯಿಂ |
ತಳಿರಡಿಯಂ ಪಾದಪೀಠದಲ್ಲಿರಿಸುತ್ತಂ ||
ಎಳಸಿರ್ದ ವಿಷಯದೊಳ್ ನಿಜ |
ಬಲಮಂ ಪ್ರಕಟಿಸಿದ ಕಾಮನೊಡನಿಂತೆಂದಂ || ೧೧ ||

ಕೆಳೆಯನೆ ನಿನ್ನೊಳಿದೆಲ್ಲಂ |
ಸಲೆ ಸಿದ್ಧಂ ನನಗೆ ಕಣೆಗಳೆರಡೇ ನೀನುಂ ||
ಕುಲಿಶಂ ತತ್ಪವಿಯೊ ತಪೋ |
ಬಲಯುತರೊಳ್ ಪುಗದು ನಿನಗೆ ಪುಗನೆಡೆಯಿಲ್ಲಂ || ೧೨ ||

ಅರಿದುದರಿಂ ನಿನ್ನಳವಂ |
ಗುರುಕಾರ್ಯದೊಳಿರಿಪೆನೆನ್ನ ಸಮನಂ ನಿನ್ನಂ ||
ಹರಿ ಕಂಡು ಶೇಷನುರ್ವೀ |
ಧರತ್ವಮಂ ತನುವನವನ ಮೇಲಿರಿಸನೆ ಪೇಳ್ || ೧೩ ||

ಹರನೊಳ್ ಶರಗತಿಯಂ ನೀ |
ನೊರೆದುದರಿಂದೆಮ್ಮ ಕೃತಿಗೆ ಸಮ್ಮತಿ ನಿನ್ನಿಂ ||
ದೊರೆದವೊಲಾಯ್ತಿದನೇ ನಿ |
ರ್ಜರರಿವರರಿಭಯಯುತರ್ಕಳೆಳಸುಗುಮೀಗಳ್ || ೧೪ ||

ಘನಜಯಕೆ ಶಂಭುತೇಜದೆ |
ಜನಿಸುವ ದಳಪತಿಯನೀ ಸುರರ್ಕಳೆಳಸುವರ್ ||
ಮನಮಂ ಬ್ರಹ್ಮದೊಳಿಟ್ಟಾ |
ಮನುಮೂರ್ತಿ ಶಿವಂ ವಶಂ ತ್ವದಿಷುಪಾತದೊಳೇ || ೧೫ ||

ನಿಯಮಿತಮನನಾ ಶಿವನ |
ದ್ರಿಯ ತನುಜೆಯನೆಳಸುವಂತೆ ಯತ್ನಿಸು ತಚ್ಛೌ ||
ಲಿಯ ವೀರ್ಯವ ಧರಿಸಲ್ ವನಿ |
ತೆಯರೊಳವಳ್ ಶಕ್ತಳೆಂದುಸುರ್ದಂ ಬ್ರಹ್ಮಂ || ೧೬ ||

ಗುರುವಪ್ಪಣೆಯೊಳ್ ಪಾರ್ವತಿ |
ಗಿರಿಯೂರ್ಧ್ವಾವನಿಯೊಳೈದೆ ತಪಮಿರ್ಪ ಮಹೇ ||
ಶ್ವರನಂ ಸೇವಿಸುತಿರ್ಪುದ |
ನರಿಪೇಂ ಮದ್ಗೂಢಚರರೆನಿಸಿದಪ್ಸರರಿಂ || ೧೭ ||

ವ|| ಇಂತಿರ್ಪ ಕಾರಣದಿಂದಂ:—

|| ವೃ ||

ಪೊರಮಡು ಸಿದ್ಧಿಯಂ ಪಡೆಯಲೈಸಲೆ ಮಾಡು ಸುರಾಘ
ಕಾರ್ಯಮಂ |
ಗಿರಿತನುಜಾತೆ ತತ್ಕೃತಿಯೊಳಂತಿಮಕಾರಣಭೂತಳಾದೊಡಂ ||
ಪರಿಕಿಸೆ ಬೀಜಸಾಧ್ಯಮೆನಿಪಂಕುರದುದ್ಭವದಾದಿಯೋಳದೆಂ |
ತಿರೆ ಜಲಮಂತೆ ನೀನೆ ಅದಕುತ್ತಮಕಾರಣನೆಂದಪೇಕ್ಷಿತಂ || ೧೮ ||

ಸುರಜಯಮುಪಾಯಭೂತಂ |
ಹರನಾತನೊಳಿಷುವನಿಸುವ ನೀನೇ ಧನ್ಯಂ ||
ಕಿರಿದಾದೊಡಮದು ಹೇತ್ವಂ |
ತರದಿಂ ಸಿದ್ಧಿಸದ ಕಜ್ಜಮಿಾಯದೆ ಜಸಮಂ || ೧೯ ||

ತ್ರಿದಶವ್ರಜಮೇ ಯಾಚಿಸು |
ವುದು ಲೋಕತ್ರಯದ ಕಜ್ಜಮಿದು ನಿನ್ನಯ ಶೌ ||
ರ್ಯದೊಳೇ ಹಿಂಸಾಧಿಕಮಿ |
ಲ್ಲದೆ ಸಾಧ್ಯಂ ನಿನ್ನ ಶೌರ್ಯಮಚ್ಚರಿಯಲ್ತೇಂ || ೨೦ ||

ಸ್ಮರ ನಿನಗೆ ಬಸಂತಂ ಸಹ।
ಚರನೊರೆಯುದೊಡಂ ಸಹಾಯನಾಗುವನೀತಂ ॥
ಮರುತಂಗಾವಂ ವೈಶ್ವಾ।
ನರಂಗೆ ನೀನೆಸಗು ಸಾಯುವೆಂದು ಕಥಿಸುವಂ ॥ ೨೧ ॥

ವ॥ ಈ ಮಾಳ್ಕೆಯೊಳಮರಾಧಿಪಂ ಸುಮಶರನಂ ಪ್ರೋತ್ಸಾಹಿಸಿದಸಮನಂತರದೊಳ್:—

॥ ವೃ ॥

ಒರೆದವೊಲಾಗುಗೆಂದು ಕರುಣಾಧಿಕದಿಂದಿರದಿತ್ತಮಾಲೆಯುಂ।
ಶಿರದೊಳೆ ತಾಳ್ದವೊಲ್ ವಿಭುವಿನಾಜ್ಞೆಯ ತಾಳ್ದು ಸರೋಜ
ಮಾರ್ಗಣಂ ॥
ಪೊರಮಡುವಾಗಳಾ ವಿಬುಧನಾಯಕನಾತನ ಮೈಯ ಮುಟ್ಟುತಾ ॥
ದರಿಸಿದನಾದಿತೇಯಕರಿತಾಡನಕರ್ಕಶಮಾದ ಹಸ್ತದಿಂ ॥ ೨೨ ॥

ಪ್ರಿಯಸಖಮಧುವುಂ ರತಿಯುಂ।
ಭಯದಿಂ ಬರೆ ಬೆನ್ನೊಳಂಗನಾಶದೆ ಕೃತಿಸಿ॥
ದ್ಧಿಯ ಪಡೆವೆನೆಂದು ತುಹಿನಾ।
ಲಯದ ಶಿವಾಶ್ರಮಕೆ ಮನ್ಮಥಂ ನಡೆತಂದಂ ॥ ೨೩ ॥

ವ॥ ಇಂತು ನಡೆತರ್ಪನಂ:—

ಕಂ॥ ಹರನಾಶ್ರಮದ ಸಮಾಧಿ।
ಸ್ಥರ ಮುನಿಗಳ ತಪದ ನಿಷ್ಠೆಯಂ ದ್ವೇಷಿಸುತಂ ॥
ಸ್ಮರಗರ್ವಹೇತುಭೂತ।
ಸ್ವರೂಪದಿಂ ಪ್ರಕಟನಾದನಲ್ಲಿ ಬಸಂತಂ ॥ ೨೪ ॥

ತೆರಳಲನುವಾಗೆ ಸಮಯುವ ।
ತೊರೆದುಷ್ಣಕರಂ ಕುಬೇರರಕ್ಷಿತದಿಶೆಯೊಳ್ ॥
ಪೊರಪೊಣ್ಮಿತು ನಿಟ್ಟುಸಿರೆನೆ ।
ಮರುತಂ ಮುಖದತ್ತಣಿಂದೆ ದಕ್ಷಿಣದಿಶೆಯಾ ॥ ೨೫ ॥

ಅಸುಗೆ ಪ್ರಕಾಂಡದಾದಿಯಿ ।
ನೆಸೆವ ಸಪಲ್ಲವಕುಸುಮಂಗಳಂ ತತ್ಕ್ಷಣದೊಳ್ ॥
ಪ್ರಸವಿಸಿದುದೆಳಸಲಿಲ್ಲದು ।
ಶಶಿಮುಖಿಯರ ಸಕಲನೂಪುರಾಂಘ್ರಿಯ ಸೋಂಕಂ ॥ ೨೬ ॥

ಸಲೆ ವಿರಚಿಸಿ ಪೊಸಮಾವಿನ ।
ತಳಿರ್ಗಳ ಗರಿಯಿಂದೆ ತಳ್ತ ಪೂಗಣೆಯುದರೊಳ್ ॥
ಜಲಜಾಸ್ತ್ರನಾಮದಕ್ಕರ ।
ಗಳೆವೆನೆ ತುಂಬಿಗಳನಿರಿಸಿದಂ ಮಧುಮಾಗಳ್ ॥ ೨೭ ॥

ವರವರ್ಣಮುಳ್ಳೊಡೇಂ ತಾಂ ।
ಧರಿಸದೆ ಪರಿಮಳವ ಕರ್ಣಿಕಾರಂ ಮನಮಂ ॥
ಮರುಗಿಸುಗುಂ ಗುಣಪೂರ್ಣದ ।
ವಿರಚನೆಯೊಳ್ ವಿಮುಖಮುತ್ತೆ ವಿಧಿಯಾ ಹೃದಯಂ ॥ ೨೮ ॥

ಎಳವೆರೆಯು ಕೊಂಕನೊಂದಿದ ।
ಪಲಾಶಮುಳ್ಳಲರ್ದಕೆಂಪರಲ್ಗಳಿಸೆಗುಮಾ ॥
ಗಳೆ ಮಧುವಿನ ಸಂಗಮದೊಳ್ ।
ತಳೆದ ವನಸ್ಥಲಿಗಳಾ ನಖಕ್ಷತಿಗಳವೊಲ್ ॥ ೨೯ ॥

ಬೆಳಗೆ ವಿಲಗ್ನಮಧುಪಕ ।
ಜ್ಜಲಚಿತ್ರದ ತಿಲಕಮೈದೆ ಮುಖದೊಳ್ ಮೇಣ್ ಮಾಂ ॥
ದಳಿರ್ದುಟಿಯುಮುದಯರವಿಕೋ ।
ಮಲರಾಗದೆ ಸಿಂಗರಿಸಿದಳಾ ಮಧುರಮೆ ತಾಂ ॥ ೩೦ ॥

ಎಡರಡಸೆ ಪ್ರಿಯಾಲದ ಪು।
ಪ್ಪುಡಿಯಿಂದಂ ದಿಟ್ಟಿಗಳ್ಗೆ ಗಾಳಿಗಿದಿರೊಳೇ॥
ನಡೆಗುಂ ಮದಗರ್ವದ ಮಿಗ।
ಗಡಣಂ ಮರ್ಮರಿತಜೀರ್ಣಪರ್ಣದಟವಿಯೊಳ್ ॥ ೩೧ ॥

ಮಾಂದಳಿರಂ ಮೆಲ್ದರೆ ಕೆಂ।
ಪೊಂದಿದ ಕಂಧರದ ಗಂಡುಗೋಗಿಲೆಯ ಕುಕಿಲ್ ॥
ಸುಂದರಿಯರ ಮಾನಚ್ಯುತಿ।
ಯೊಂದಿಸುವುದಕಾಯ್ತು ಬೆಸಪನುಡಿ ಮನ್ಮಥನಾ ॥ ೩೨ ॥

ಹಿಮಮದು ತೊಲಗಿರೆ ತುಟಿಗಳ್ ।
ವಿಮಳತೆಯಂ ತಳೆಯೆ ಬೆಳ್ಪೆಳಗು ಮೊಗದೆಡೆಯೊಳ್ ॥
ಸಮನಿಸೆ ಪತ್ರವಿರಚನಾ।
ಸಮಯದೆ ಕಿಂಪುರುಷವನಿತೆಯರ್ ಬೆಮರೇರ್ದರ್ ॥ ೩೩ ॥

ಮೃಡನಾಶ್ರಮದ ತಪಸಿಗಳ್ ।
ನಡೆ ನೋಡುತಕಾಲದೊಳ್ ಬಸಂತನ ಬರವಂ ॥
ಕಡು ಜತನದೆ ವಿಕೃತಿಗಳಂ।
ತಡೆದೆಂತೋಗ್ಗೈದು ಬಗೆಗಳಂ ಬಿಗುವಿಡಿದರ್ ॥ ೩೪ ॥

ರತಿಯೊಡನಂಗಜನಾರೋ।
ಪಿತಸುಮಚಾಪಂ ಶಿವಾಶ್ರಮವ ಪೊರ್ದಿವಿನಂ ॥
ಅತಿಸುಪ್ರೇಮರಸಾನ್ವಿತ।
ರತಿಭಾವದ ಚೇಷ್ಟೆ ತೋರಿತಖಿಳಮಿಥುನದೊಳ್ ॥ ೩೫ ॥

ಅಲರ ಸುಪಾತ್ರೆಯೊಳೊಂದರೊ।
ಳಳಿ ತನ್ನ ಪ್ರಿಯೆಯ ಕೂಡಿ ಕುಡಿದುದು ಮಧುವಂ॥
ಸಲೆ ಸೋಂಕಿಗೆ ಮುಚ್ಚಿದ ಕ।
ಣ್ಗಳ ಹರಿಣಿಯ ತುರಿಸಿದತ್ತು ಕೋಡಿಂ ಹರಿಣಂ ॥ ೩೬ ॥

ಕರಿಗಿತ್ತುದು ಕಡುನಲವಿಂ ।
ಕರೇಣು ಸರಸೀಜಪರಿಮಳದ ಬಾಯ್ನೀರಂ ॥
ಕರಮುಪಚರಿಸಿತು ದಯಿತೆಯ ।
ನರೆತಿಂದುಳಿದಿರ್ದ ಬಿಸವ ಕೊಟ್ಟು ರಥಾಂಗಂ ॥ ೩೭ ॥

ಸುಮುಮುದ್ಯ ಘೂರ್ಣಿತಾಕ್ಷಿಯ ।
ಬೆಮರಿಂ ನಸುಮಾಸುಳಿಸಿರ್ದ ಪತ್ರರಚನೆಯಾ ॥
ರಮಣೀಮುಖಮಂ ಕಿನ್ನರ ।
ನಮಳಿನಗೀತಾಂತರಂಗಳೊಳ್ ಚುಂಬಿಸಿದಂ ॥ ೩೮ ॥

ಅಲದೊರ್ಂಗಲ್ಮೊಲೆ ತಳಿರ್ದುಟಿ ।
ಗಳಿನೊಪ್ಪುವ ಬಳ್ಳಿವೆಣ್ಗಳೊಳ್ ತಳ್ಕೆಯನೈ ॥
ಸಲೆ ಪೊರ್ದಿದುವವನೀಜಂ ।
ಗಳುಮುರೆ ಬಾಗಿರ್ದ ಕೊಂಬೆದೋಳ್ಗಳಿನಾಗಳ್ ॥ ೩೯ ॥

ಹರನಾಗಳ್ ಕೇಳ್ದೊಡಮು ।
ಚ್ಚರಿವೆಣ್ಣಿನಿವಾಡನಾತ್ಮಪರನೆನಿಸಿರ್ದಂ ॥
ದೊರೆಕೊಳಿಸಲಾರವಾತ್ಮೇ ।
ಶ್ವರರ ಸಮಾಧಿಗೆ ವಿಭಂಗವೆಂದುಮೊಡರ್ಗಳ್ ॥ ೪೦ ॥

ವ॥ ಇಂತಾದ ಸಮಯದೊಳ್—

ಕಂ॥ ಎಡಮುಂಗೈಯೊಳ್ ಪೊಂಗೋ ।
ಲ್ವಿಡಿದೆಲೆವನೆವಾಗಿಲಾಂತು ಗಣಮಂ ಚಪಲ ।
ಕ್ಕೆಡೆಗುಡದಂತಿರೆ ಗೆಯ್ದಂ ।
ನಡೆ ತಾಂ ಬಾಯ್ವೆರಳ ಸನ್ನೆಯೊಳೆ ನಂದೀಶಂ ॥ ೪೧ ॥

ತರುಗಳ್ ಕದಲವು ಚಲಿಸವು ।
ಮರಿದುಂಬಿಗಳಂಡಜಂಗಳೆತ್ತವು ಸರಮಂ ॥
ಚರಿಸವು ಮಿಗಗಳ್ ಚಿತ್ರದೆ ।
ಬರೆದವೋಲಾಯ್ತು ಖಿಳವನಮೆ ತಚ್ಛಾಸನದಿಂ ॥ ೪೨ ॥

ವ॥ ಆ ಸಮಯದೊಳ್:—

॥ ವೃ ॥

ಕಂತು ಜಯಪ್ರಯಾಣದೆ ಪುರೋಗತ ಶುಕ್ರನ ದಿಕ್ಕನೊಂದದಿ ।
ರ್ಪಂತಿರೆ ನಂದಿದೃಷ್ಟಿಗತಮಾರ್ಗವನೊಂದದೆ ಪಾರ್ಶ್ವ ಭಾಗದಿಂ ॥
ಪ್ರಾಂತದ ಭೂಮಿಯುಂಬಿಡದೆ ಮುಚ್ಚಿರುತಿರ್ಪ ನಮೇರುಶಾಖೆಯಿಂ।
ತಾಂ ತೊಳಗುತ್ತಮಿರ್ಪ ಪರಮಾತ್ಮತಪಃಸ್ಥಲದಲ್ಲಿಗೈದಿದಂ ॥೪೩॥

ಪುಲಿದೊವಲ ಪಾಸುವಿಂ ಕಂ ।
ಗೊಳಿಸುವ ವರದೇವದಾರುವೇದಿಕೆಯೊಳ್ ತಾಂ ॥
ಕುಳಿತ ಚಲರಹಿತ ಶಿವನಂ ।
ಜಲಜಾಸ್ತ್ರಂ ಸನ್ನಿಹಿತವಿನಾಶಂ ಕಂಡಂ ॥ ೪೪ ॥

ಚಲಿಸದಿರೆ ಪೂರ್ವಕಾಯಂ ।
ಸಲೆ ಬಾಗಿರೆ ಭುಜಯುಗಮದು ತೊಡೆಯಲ್ಲಿ ಕರಂ ॥
ಗಳವರಲ್ದಬ್ಜವ ಪೋಲ್ತಿರೆ ।
ತೊಳಗುತ್ತಾಯತದೆ ವೀರಬಂಧಸ್ಥಿತನಂ ॥ ೪೫ ॥

ಉರಗದೆ ಕಟ್ಟಿದ ಜಡೆಯೊ ।
ಪ್ಪಿರೆ ಕಿವಿಯೊಳ್ ದ್ವಿಗುಣಪಕ್ಷಸೂತ್ರಂ ತಾಂ ಜೋ ॥
ಲ್ದಿರೆ ಗಲಕಾಂತಿಯನೊಡಗೊಂ ।
ಡುರುನೀಲದ ಕೃಷ್ಣಚರ್ಮಮಂ ಧರಿಸಿದನಂ ॥ ೪೬ ॥

ಚಲಿಸದೆನೆಯೊಳ್ ವಿಕೃತಿಯಂ ।
ತಳೆಯುದ ಪುರ್ವಿನೊಳಣಂ ತೊಳಪ ತಾರೆಯೊಳಂ ॥
ಸಲೆ ತಳ್ತಧೋರುಚಿಯ ಕ ।
ಣ್ಗಳಿನೈಸಲೆ ನಾಶಿಕಾಗ್ರಮುಂ ನಿರುಕಿಪನಂ ॥ ೪೭ ॥

ಒಳ ಎಲರ ತಡೆದಕತದಿಂ ।
ಮುಳೆಯುಲ್ಬಣಮಿಲ್ಲದಿರ್ಪ ಮುಗಿಲಂತಿರೆ ನೋಣ್ ॥
ಅಲೆಯುಳಿದ ಮಡುವಿನಂತೆವೊ ।
ಲೆಲರಾಡದ ನೆಲೆಯ ದೀಪದಂತೊಪ್ಪುವನಂ ॥ ೪೮ ॥

ಶಿರದತ್ತಣಿನುದ್ಭವಿಸಿದ ।
ಕರೋಟನೇತ್ರಾಂತರಾಗತದ ವರತೇಜೋಂ ॥
ಕುರದಿಂ ಬಿಸಸೂತ್ರಾಧಿಕ ।
ತರಮೃದುಬಾಲೇಂದುಲಕ್ಷ್ಮಿಯುಂ ಕಂದಿಸನಂ ॥ ೪೯ ॥

ನವರಂಧ್ರನಿವರ್ತಿತಕಾ- ।
ರ್ಯವ ಯೋಗಾಧೀನಮನವ ಹೃದಯದೊಳಿಡುತುಂ ॥
ಅವಿನಾಶಿಯೆಂದು ಸುಜ್ಞರ್ ।
ತನೆ ಕಥಿಪಾತ್ಮನ ನಿಜಾತ್ಮನಲ್ಲೀಕ್ಷಿಪನಂ ॥ ॥ ೫೦ ॥

ಮನಸಿಜನಿಂತೊಪ್ಪುವನಂ ।
ಮನಕಂ ಗೋಚರಿಸದಾ ತ್ರಿಲೋಚನನಂ ತಾಂ ।
ಸನಿಹದೊಳೆ ಕಂಡು ಕರದಿಂ ।
ಕಣೆಬಿಲ್ಗಳ್ ಜಾರೆ ತಿಳಿಯದಿರ್ದಂ ಭಯದಿಂ ॥ ೫೧ ॥

ವ|| ಇಂತು ಭಯಂಬೆತ್ತಿರೆ ಬಳಿಕ್ಕಂ—

ಕಂ|| ಮನಸಿಜನೀಕ್ಷಿಸಿದಂ ನಿಜ।
ವಿನಷ್ಟಬಲವುಂ ಸ್ವರೂಪದಿಂ ವರ್ಧಿಪಳೆಂ।
ದೆನೆ ಕಣ್ಗೊಳಿಪಗತನುಭವೆ।
ವನದೇವತೆಯರ್ಕಳೊಡನೆ ಬರ್ಪುದನಾಗಳ್ || ೫೨ ||

ವ|| ಬರ್ಪ ಗಿರಿರಾಜನಂದಿನಿ ಮತ್ತಮೆಂತಿರ್ದಳೆನೆ:—

ಕಂ|| ಕೆಂಬರಲ ಪಳಿವಸುಗೆಯೊಳ್।
ಪೊಂಬೆಳಗಂ ಸೆಳೆವ ಬೆಟ್ಟದಾವರೆಯೊಳ್ ಮು।
ತ್ತುಂಬವೊಲೊಪ್ಪುವ ಲಕ್ಕೆಯೊ।
ಳಂ ಬೆಳಗುವ ಸುಗ್ಗಿಪೂದೊಡವ ಧರಿಸಿರ್ದಳ್ || ೫೩ ||

ಮೊಲೆಗಳ ಭಾರಕೆ ಬಾಗಿದ।
ವೊಲಿರ್ದು ಬಾಲಾರ್ಕರಾಗವಸನವನುಡುತುಂ॥
ಅಲಗೊರ್ಂಚಲಿಂದೆ ಬಾಗುತೆ।
ತಳಿರ್ತು ಸಂಚರಿಪ ಬಳ್ಳಿಯಂ ಪೋಲ್ತಿರ್ದಳ್ || ೫೪ ||

ರತಿಪತಿ ಸರಿನೆಲೆಯೆಂದರಿ।
ಯುತಮಿಟ್ಟಿರಡನೆಯ ಬಿಲ್ಲೆದೆಯ ಪೋಲ್ತಿರ್ಪು॥
ನ್ನತಬಕುಳದಾಮದುಡೆನೂಲ್।
ನಿತಂಬದಿಂ ಜಾರೆ ಸರಿಗೊಳಿಸುತಮೆಸೆಯುವಳ್ || ೫೫ ||

ಉಸಿರ್ಗಂಪಿಗೆಳಸಿ ಮಿಗೆ ಬಿಂ।
ಬಸಮಾನಾಧರದ ಬಳಿಗೆ ಭೃಂಗಂ ಬರಲೀ॥
ಕ್ಷಿಸಿ ಬೆದರ್ದ ನೋಟದಿಂ ಕರ।
ಲಸಿತಾಬ್ಜದೊಳದ ಪಲರ್ಮೆ ತಾಂ ತೊಲಗಿಸುವಳ್ || ೫೬ ||

ಅನವದ್ಯಾವಯವದೆ ತ ।
ನ್ನಿನೆಯಳುಮಂ ನಾಣ್ಚಿಪವಳನೀಕ್ಷಿಸಿ ಮುಗುಳ್ದಂ ॥
ಮನಸಿಜನಾಶಿಸಿದಂ ಜಿತ ।
ಮನನೊಳ್ ಶಂಕರನೊಳಾತ್ಮಕಾರ್ಯದ ಜಯಮಂ ॥೫೭॥

ವ॥ ಕಂತುವಿಂತು ನಿರೀಕ್ಷಿಪ ಸಮಯದೊಳ್:—

ಕಂ॥ ಗಿರಿಸುತೆ ಭವಿಷ್ಯದಾತ್ಮೇ ।
ಶ್ವರನಾ ಬಾಗಿಲ್ಗೆ ಬರ್ಪಿನಂ ಶಂಕರನುಂ ॥
ತೊರೆದಂ ಯೋಗಮನೊಳಗುರೆ ।
ಪರಿಕಿಸಿ ಪರಮಾತ್ಮಸಂಜ್ಞೆಯೊಂದಿದ ಬೆಳಗಂ ॥ ೫೮ ॥

ವ॥ ಆ ಬಳಿಕ್ಕಂ:—

ಪೆಡೆದುದಿಯಿಂ ಶೇಷಂ ಕೆಳ ।
ಗಡೆಯೊಳ್ ಭೂತಲವನೆಂತೊ ಪೊತ್ತಿರ್ಪಿನಮಾ ।
ಮೃಡನಾಸನಬಂಧವ ಮಿಗೆ ।
ಸಡಿಲ್ಚಿದಂ ಮೆಲ್ಲನುಳಿದು ಬಂಧಿಸಿದುಸುರಂ ॥ ೫೯ ॥

ಬಂದಳ್ ಶುಶ್ರೂಷೆಗೆ ಗಿರಿ ।
ನಂದಿನಿಯೆಂದೀಶ್ವರಂಗೆ ವಂದಿಸಿ ನುಡಿದಾ ॥
ನಂದಿಯುವಳನೊಳವುಗಿಸಿದ ।
ನೊಂದುತೆ ಸಮ್ಮತಿಯ ವಿಭುವ ಭ್ರೂಸಂಜ್ಞೆಯೊಳೇ ॥ ೬೦ ॥

ಕಂ॥ ಗಿರಿಸುತೆಯ ಕೆಳದಿಯರ್ ನಿಜ ।
ಕರದಿಂದಮೆ ಕೊಯ್ದು ತಂದ ಮಧುಮಾಸಸುಮೋ ॥
ತ್ಕರಮಂ ಕಿಸಲಯಮಿಶ್ರಮ ।
ನೆರಗುತ್ತಂ ಸೂಸಿದರ್ ಶಿವನ ಪದತಲದೊಳ್ ॥ ೬೧ ॥

ನವಕರ್ಣಿಕಾರಮದು ತೊಳ।
ಗುವ ನೀಲಾಲಕದ ಮಧ್ಯದಿಂ ಜಾರುತಿರಲ್ ॥
ಕಿವಿಯಿಂ ಜಗುಳ್ದ ತಳಿರಿನೊ।
ಪ್ಪುವ ಶಿರದಿಂದೆರಗಿದಳ್ ಮಹೇಶಂಗುಮೆಯುಂ ‖ ೬೨ ‖

ಇತರ ಸ್ತ್ರೀದುರ್ಲಭನಂ
ಪತಿಯಂ ಪಡೆಯೆಂದು ಸತ್ಯವಾಕ್ಯಮನಾ ಪಾ ॥
ರ್ವತಿಗೊರೆದಂ ಪರಮಾತ್ಮಂ।
ಕ್ಷಿತಿಯೊಳ್ ಪುಸಿಯಾಗದಲ್ತೆ ಮಹಿಮರ ವಚನಂ ‖ ೬೩ ‖

ವ‖ ತದನಂತರಂ—

ಕಂ‖ ಶರಸಮಯವರಿತು ಶಲಭದ।
ತೆರದಿಂ ಸ್ಮರನಗ್ನಿಮುಖವ ಪುಗಲೆಳಸಿ ಧರಾ ॥
ಧರಭವೆಯಿದಿರೊಳ್ ಸ್ಥಾಣುಗೆ।
ಗುರಿಯಿಡುತಂ ಮಗುಳ್ದು ಮಗುಳ್ದುಮೆಳೆದಂ ಪೆದೆಯಂ ।೬೪।

ಗಿರಿಸುತೆಯುಂ ಕೆಂಬಣ್ಣದ।
ಕರದಿಂದೆ ತಪಸ್ವಿಶಂಭುಗರ್ಪಿಸಿದಳ್ ಭಾ ॥
ಸ್ಕರಕಿರಣದಿಂದಮೊಣಗಿದ।
ಸುರಗಂಗಾಪದ್ಮಬೀಜಮಾಲೆಯನಾಗಳ್ ‖ ೬೫ ‖

ಪರಶಿವನರ್ಥಿಜನಪ್ರಿಯ।
ನಿರುತಿಪ್ರುದರಿಂದದಂ ಪರಿಗ್ರಹಿಸುವಿನಂ ॥
ಸ್ಮರನಾಗಳೆ ಸಂಮೋಹನ।
ಶರಮನಮೋಘಮನಮರ್ಚಿದಂ ನಿಜಧನುವೊಳ್ ‖ ೬೬ ‖

ಸಸಿಯೊಗೆಯೆ ಚಲಿಸ ಸಿಂಧುವೊ ।
ಲಸಮಾಕ್ಷಂ ನಸು ಸಡಿಲ್ದ ಧೃತಿಯಿಂದಾಗಳ್ ॥
ಪಸರಿಸಿದಂ ದಿಟ್ಟಿಗಳಂ ।
ಮಿಸುಗುವ ಬಿಂಬಾಧರಾಸ್ಯದೊಳ್ ಪಾರ್ವತಿಯಾ ॥ ೬೭ ॥

ತಳಿರಿಡಿದ ನವ ಕದಂಬದ ।
ವೊಲೊಪ್ಪುವಯುವದೆ ಸುರತಿಭಾವನನುವೆಯುಂ ॥
ತಿಳಿಸುತೆ ನಿಂತಳ್ ಲಜ್ಜಾ ।
ವಿಲೋಲಲೋಚನದ ವದನಮಂ ತಿರುಗಿಸಿ ತಾಂ ॥ ೬೮ ॥

ವ. ಇಂತು ಸಂಭವಿಸುವಿನಮಾಗಳ್:—

ತ್ರಿಣಯುನನಾತ್ಮಕ್ಷೋಭೆಯ ॥
ನಣಗಿಸುತಂ ತನ್ನ ನಿರ್ಜಿತೇಂದ್ರಿಯ ಬಲದಿಂ ॥
ಮನದ ವಿಕಾರದ ಕಾರಣ ।
ಮನೆ ತಿಳಿಯಲ್ಕೆಲ್ಲಕಡೆಗೆ ದಿಟ್ಟಿಪರೆಪಿದಂ ॥ ೬೯ ॥

ಎಡಗಾಲಂ ತೋಳ್ಗಳುಮಂ ।
ನಡೆ ಬಾಗಿಸಿ ಮುಷ್ಟಿಯಿಟ್ಟು ಬಲಲೋಚನದಾ ॥
ಕಡೆಯೊಳ್ ಚಕ್ರೀಕೃತಧನು ॥
ವಿಡಿದಿಸಲನುವಾದ ಕಾಮನಂ ಕಂಡನವಂ ॥ ೭೦ ॥

ಕಿಡೆ ತಪಮುದು ಕೋಪಂ ಮಿತಿ ।
ಗೆಡೆ ಗಂಟಿಡೆ ಪುರ್ವು ಭೀತಿ ಪುಟ್ಟಿಪ ನೊಗದಾ ॥
ಮೃಡನಾ ನಡುಗಂಣಿಂದಂ ।
ಕಿಡಿಗೆದರುತ್ತುರಿವ ಬೆಂಕಿಯೊಗೆದುದು ಜವದಿಂ ॥ ೭೧ ॥

ಮರಳಿಸು ಮರಳಿಸು ಕಿನಿಸಂ ।
ಪರೇಶ ನೀನೆಂಬ ಸುರರ ನುಡಿ ಬಾಂದಳದೊಳ್ ॥
ಪೊರಪೊಣ್ಮುವನಿತರೊಳಾ ।
ಹರಾಕ್ಷಿಭವವಹ್ನಿ ಬೂದಿಗೈದಿತ್ತವನಂ ॥ ೭೨ ॥

ವ|| ಇಂತಾದ ಮನ್ಮಥದಹನದನಂತರದೊಳ್:—

ಅತಿದುಸ್ಸಹಾಭಿಷಂಗಜ।
ನಿತಮೂರ್ಛೆ ಹೃಷೀಕವೃತ್ತಿಯುಂ ಬಂಧಿಸುತುಂ॥
ಅತಿದುಃಖವ ಮರೆಯಿಸುತುಂ।
ರತಿಗುಪಕೃತಿಗೈದುದೆನಿಸಿತೊಂದು ಮುಹೂರ್ತಂ ॥ ೭೩ ॥

ಕಂ|| ಸಿಡಿಲೆಂತು ಗಿಡುವನಂತಿರೆ।
ಸುಡುತುಂ ತಪದೆಡರ ಕಾವನಂ ಕ್ಷಣದೊಳ್ ಪೆ॥
ಣ್ಣೆಡೆಯುಳಿಯಲೆಳಸಿ ನಿಜಗಣ।
ದೊಡನಾ ಭೂತೇಶನಿರದೆ ಕಣ್ಮರೆಯಾದಂ ॥ ೭೪ ॥

॥ ವೃ ॥

ನಗತನುಜಾತೆಯುಂ ಸಲೆ ನೆಗಳ್ತೆಯನೊಂದಿದ ತಂದೆಯಾಶೆಯುಂ।
ಮಿಗಿಲೆನಿಸಿರ್ದ ತನ್ನ ವಪುವುಂ ವಿಫಲತ್ವಮನಾಂತುವೆಂದು ತಾಂ॥
ಬಗೆದು ಸಖೀಜನರ್ಕಳಿದಿರಲ್ಲೊಗೆದೀ ವಿಧಕೃತ್ಯದಿಂದೆ ನಾಣ್,।
ಮಿಗೆ ನಡೆತಂದಳಾತ್ಮ ಗೃಹಕೆಂತುಟೊ ಕಷ್ಟದೆ ಶೂನ್ಯಚಿತ್ತದಿಂ॥೭೫॥

ವ|| ಆಸಮಯದೊಳ್ ತಳ್ವದೆ ತಂದೆಯೈತಂದು—

ಹರನುರುಕೋಪದಿಂ ಸುಗಿದು ಕಣ್ಗಳ ಮುಚ್ಚಿ ದಯಕ್ಕೆ ಪಾತ್ರೆಯಾ।
ಗಿರೆ ತನುಜಾತೆ ದಂತಗತಪಂಕಜಮಂ ಸುರದಂತಿಯೆಂತಿರಂ।
ತಿರೆ ನಿಡುದೋಳ್ಗಳಿಂದವಳನೈಸಲೆ ತಾಳ್ದು ಧರಾಧರಾಧಿಪಂ।
ವರಗೃಹಕೈದಿದಂ ಜವದೆ ದೀರ್ಘತೆಯೊಂದೆ ನಿಜಾಂಗ
ಮಾಕ್ಷಣಂ || ೭೬ ||

ಮದನದಹನನಾಮಕ ತೃತೀಯಸರ್ಗಂ
ಸಂಪೂರ್ಣಂ

ಚತುರ್ಥ ಸರ್ಗಂ.

ಕಂ|| ತದನಂತರದೊಳ್ ಮೂರ್ಛಾ।
ಸ್ಪದೆಯಾಗುತೆ ವಿವಶಳಾದ ಕಾಮವಧುಗದ॥
ಹೃದ ನವವೈಧವ್ಯದ ದುಃ।
ಖದ ಭೋಗಕ್ಕಿತ್ತುದೆಳ್ಚರಮುನಾ ದೈವಂ || ೧ ||

ತರುಣಿಯುವಳ್ ಮೂರ್ಛಾಂತದೊ।
ಳರಳ್ದಕ್ಷಿಯುನತ್ತಲಿತ್ತ ತಿರುಗಿಸುತಿರ್ದಳ್॥
ಪರಿಕಿಸಿ ತಣಿಯದದಕ್ಕಿ।
ನ್ನಿರವಾಯ್ತು ಪ್ರಿಯನ ದರ್ಶನಮದೆಂದರಿಯಳ್ || ೨ ||

ಜೀವಿತವಲ್ಲಭನೇ ನೀಂ।
ಜೀವದೊಳಿರ್ದಪೆಯೊ ಎನುತಮೆಳ್ದಿರದಿದಿರೊಳ್॥
ಆ ವಧು ಪುರುಷಾಕಾರದ।
ಕೇವಳಹರಕೋಪವಹ್ನಿಭಸ್ಮವ ಕಂಡಳ್ || ೩ ||

ಬಳಿಕಂ ಮುಗಳ್ದುಮವಳ್ ವಿ।
ಹ್ವಲೆಯಾಗಿಳೆಗುರುಳ್ದು ದೂಳಿಡಿಯೆ ಮೊಲೆಗಳ್ ಕುಂ||
ತಳಮಿರದೆ ಬಿರ್ಚೆ ವಿಪಿನ।
ಸ್ಥಳಮುಂ ಸಮದುಃಖಮೆಸಗುವಂತೆವೊಲತ್ತಳ್ || ೪ ||

ರಮಣೀಯತೆಯಿಂದಾವುದು।
ಪಮೆಯಾಯ್ತು ವಿಲಾಸಿಗಳ್ಗೆ ಭವದೀಯಂ ಗಾ॥
ತ್ರಮಿದೀ ದಶೆಯುಂ ಪೊರ್ದಿರೆ।
ಸಮನಿಕದಳಿವೆನಗೆ ಕಠಿಣರಲ್ತೆಂ ಪೆಣ್ಗಳ್ || ೫ ||

ಕ್ಷತಸೇತುಬಂಧಜಲಸಂ ।
ತತಿ ತಾಂ ಕಮಲಿನಿಯ ಬಿಸುಡುವಂತೆ ಕ್ಷಣದೊಳ್ ॥
ಹಿತಮುಳಿದು ಭವದಧೀನ ॥
ಸ್ಥಿತೆಯುಂ ಬಿಸುಟೆಲ್ಲಿ ನೀಂ ಪಲಾಯಿತನಾದೈ ॥ ೬

ಎನಗಪ್ರಿಯಮುಂ ನೀಂ ಮೇಣ್ ।
ನಿನಗಾಂ ಪ್ರತಿಕೂಲಮುಂ ನೆಗಳ್ದುದದಿಲ್ಲಂ ॥
ಅನಿಮಿತ್ತ್ಯಮಾಗಿಯೇ ದ ।
ರ್ಶನಮೀಯದುದೇಕೆ ವಿಲಪಿಸುವ ರತಿಗೀಗಳ್ ॥ ೭

ವ॥ ಇಂತಲ್ಲದೊಡೆ:—

ಸ್ಮರ ನೆನೆವೆಯೊ ಪರನಾಮುದೆ ।
ಕರೆವಿನಮುಡೆನೂಲೊಳಿರದೆ ಕಟ್ಟಿದುದಂ ಮೇಣ್ ॥
ಶಿರಮುತ್ಪಲದಿಂ ಪೊಡೆವಿನ ।
ಮುರುಳ್ದ ಕಿಂಜಲ್ಕವಕ್ಷಿಗೆಸಗಿದ ನೋವಂ ॥ ೮ ॥

ವ॥ ಹೇ ಸೂಕ್ತಿಸುಧಾರ್ಣವನೆ:—

ಹೃದಸ್ಥಿತೆಯೆಂದೆನಗಿ ।
ಷ್ಟದ ವಚನಮನೊರೆದುದನೃತಮೆಂಬಿನಮುಪಚಾ ॥
ರದ ಮಾತಲ್ಲದೊಡೀ ರತಿ ।
ಗೊದಗದದೇಕಳಿವು ನೀನುಳಿದೊಡಂ ತನುವಂ ॥ ೯ ॥

ವ॥ ಪ್ರಿಯಾವತಂಸ ನನಗೀ ವಿಚಾರದಿಂದೇಂ—

ಪರಲೋಕಕ್ಕೀಗಳೆ ನೀಂ ।
ತೆರಳ್ದ ಪಥಮೊಂದುತಿರ್ಪೆನಾಂ ಲೋಕಕೆ ಮೇಣ್ ॥
ದೊರೆದುದು ವಿಧಿಯಿಂ ಮೋಸಂ ।
ಶರೀರಿಗಳ ಸುಖಮೆ ನಿನ್ನಧೀನಮುದಲ್ತೇಂ ॥ ೧೦ ॥

ವ॥ ನಿಕ್ಕುವಂ ನೀನಿಲ್ಲದೊಡೆ ಇಲ್ಲಂ ಲೋಕಕ್ಕೆ ಸುಖಂ:—

ಇರುಳೊಳ್ ತಮದಿಂ ಮುಚ್ಚಿದ |
ಪುರಮಾರ್ಗದೆ ಘನನಿನಾದಕಂಜುವ ವನಿತೋ |
ತ್ಕರಮುಂ ಪ್ರಿಯಜನವಾಸ |
ಕ್ಕಿರದೊಂದಿಸಲಾರ್ಪನಾವನುಳಿದೊಡೆ ನಿನ್ನಂ ॥ ೧೧ ॥

ಪ್ರಮದೆಯರ ಕಣ್ಗೆ ಕೆಂಪಂ |
ಭ್ರಮಣಮುಮಂ ಕೊಟ್ಟು ನುಡಿಗೆ ವಿಸ್ಖಲನಮನೇ ॥
ಸಮನಿಪ ಮದ್ಯಮದಕೆ ತಾಂ |
ಸಮನಿಸದೇಂ ನಿಷ್ಫಲತ್ವಮಿರದಿರ್ದೊಡೆ ನೀಂ ॥ ೧೨ ॥

ವ। ಇಂತುಮಲ್ಲದೆ:—

ಪ್ರಿಯಸಖನ ನಿನ್ನ ತನುವಾ |
ರ್ತೆಯದೊಂದುಳಿದಿರ್ಪುದರಿದು ಚಂದ್ರಂ ವಿಫಲೋ ||
ದಯನೆನಿಸಿ ಕಷ್ಟದಿಂ ಕೃಶ |
ತೆಯನುಳಿವಂ ಪೋದೊಡಂ ಬಹುಳಮುಶರೀರಾ! ॥ ೧೩ ॥

ಹರಿತಾರುಣವರ್ಣದ ಸುಂ |
ದರಬಂಧನಯುತದ ಚೂತನವಸುಮಶರಗಳ್ ॥
ಪುರುಷಕಲಕಂಠಮಧುರ |
ಸ್ವರಸೂಚಿತಮಾಗುತಾರ್ಗೆ ಶರಮಕ್ಕುಂ ಪೇಳ್ ॥ ೧೪ ॥

ಧನುವಿನ ಗುಣಕೃತ್ಯಕೆ ಕಾಂ |
ತನೆ ನೀಂ ಪಲಸೂಳ್ ನಿಯೋಜಿಸಿದ ಭೃಂಗದ ತಿಂ ॥
ತಿಣಿಯಿದು ಕರುಣಾಸ್ವನದಿಂ |
ದನುಕರಿಸುವುದೆನ್ನ ದುರ್ಧ್ವರದ ರೋದನಮಂ ॥ ೫೧ ॥

ಪಡೆಯುತೆ ಮುಗುಳ್ದುಂ ಬಗೆಗೊ |
ಳ್ವೊಡಲಂ ನೀನೆಳ್ದು ಸುರತದೂತಿಯ ಕೃತಿಯುಂ ||
ಕುಡು ಸಾಜದೆ ಸವಿನುಡಿಯೊಳ್ |
ಕಡು ಜಾಣೆಗೆ ಕೋಕಿಲಾಂಗನೆಗೆ ಹೃದಯೇಶಾ || ೧೬ ||

ತಲೆವಾಗುತೆರೆದ ಕಂಪನ |
ಕಲಿತಾಲಿಂಗನದ ಪರಿಗಳಂ ಚಾರುರಹ ||
ಸ್ಥಲದಾ ಸುರತಂಗಳುಮಂ |
ಸಲೆನೆನೆವೆನಗಿಲ್ಲ ಶಾಂತಿಯದು ಮನ್ಮಥನೇ || ೧೭ ||

ರತಿಪಂಡಿತ ನಿನ್ನಿಂ ವಿರ |
ಚಿತವಾದ ವಸಂತಕುಸುಮದಾಭರಣಂ ಸಂ ||
ಸ್ಥಿತಮೆನ್ನಂಗದೊಳಿನ್ನುಮಿ |
ದತಿರುಚಿರಂ ನಿನ್ನ ದೇಹಮದು ಕಾಣದು ತಾಂ || ೧೮ ||

ಸದಯನೆ ನಿನ್ನ ನೆನೆದರಾ |
ವುದಕರೆಪಸದನವ ಮಾಡೆ ನೀಂ ಕ್ರೂರ ಸುರರ್ ||
ಅದನೆನ್ನೆಡದಡಿಯನಿದಂ |
ಪದಪಿಂ ಲಾಕ್ಷಾಸುರಂಜನವಗೈ ಬಾರಾ || ೧೯ ||

ಸುರನಿಲಯದಲ್ಲಿ ನಿನ್ನ ಚ |
ತುರೆಯರ್ ಸುರವನಿತೆಯರ್ಕಳೆಳಸದ ಮುನ್ನಂ ||
ಭರದೆ ಪತಂಗಾಧ್ವದೊಳೈ |
ತರುತಂ ಭವದಂಕದಲ್ಲಿ ಮಗುಳ್ವಾನಿರ್ಪೆಂ || ೨೦ ||

ರಮಣನೆ ನಿನ್ನಂ ನಾನನು |
ಗಮಿಸುವೆನಿದು ಸತ್ಯಮಾದೊಡಂ ಕ್ಷಣಮಾತ್ರಂ ||
ಸುಮಶರನನುಳಿದು ರತಿ ಜೀ |
ವಮನೊಂದಿದಳೆಂಬ ನಿಂದೆಯಿದ್ದು ಚಿರಮಿರ್ಕ್ಕುಂ || ೨೧ ||

ಇನೆಯು ಸುರಲೋಕನೊಂದಿದ |
ನಿನಗೆಂತಾಂ ಗೈಯ್ವೆನಂತ್ಯಮುಂಡನಮಂ ಪೇಳ್ ||
ತನುಜೀವಂಗಳೊಡನೆ ನೀ |
ನನೂಹ್ಯಮೆನಿಸಿರ್ಪ ಗತಿಯ ಪೊಂದಿದೆಯಲ್ತೇಂ || ೨೨ ||

ವ|| ಇಂತುಮಲ್ಲದೆಃ—

ಇರಿಸಿ ತೊಡೆಯಲ್ಲಿ ಬಿಲ್ಲಂ |
ಸರಳಂ ಸರಿಗೆಯ್ವುತಂ ವಸಂತನೊಡನೆ ನೀ ||
ನೊರೆದಾ ಕಿರುನಗೆನುಡಿಯಂ |
ಸರಸದ ಕಡೆಗಣ್ಣ ನೋಟಮುಮಂ ಸ್ಮರಿಪೇಂ || ೨೩ ||

ಪತಿಯೆ ನಿನಗಿಷ್ಟ ಮಿತ್ರಂ |
ಕೃತಸುಮಚಾಪನುಮೆನಿಪ್ಪ ಮಧುವೆಲ್ಲಿರ್ಪಂ ||
ಅತಿಕೋಪದ ಹರನಿಂ ಪ್ರಾ |
ಪಿತನಲ್ತೇನವನುಮಾತ್ಮಸಖಗತಗತಿಯಂ || ೨೪ ||

ವ|| ಕಾಮವಧುವಿಂತು ಪ್ರಲಪಿಸುತೆ ಶೋಕಾಕುಲಿತಳಾಗಿರೆ: —

ಬಳಿಕಂ ವಿಷಲಿಪ್ತಶರಂ |
ಗಳವೊಲ್ ತದ್ವಿಲಪಿತಾಕ್ಷರಂಗಳ್ ಹೃದಯ ||
ಕ್ಕಳಲೀಯೆ ಬಳಲ್ದ ರತಿಯಂ |
ಸಲೆ ಸಂತೈಸಲ್ಕೆ ಮುಂದೆ ಮಧು ನೈದೋರ್ದಂ || ೨೫ ||

ಪರಿಕಿಸಿ ರತಿಯುವನಂ ತ |
ನ್ನುರಮಂ ಸ್ತನಬಾಧೆಯುಪ್ಪವೊಲ್ ಪೊಡೆದುಕೊಳು ||
ತ್ತುರೆ ರೋದಿಸಿದಳ್ ತಾಂ ಪಡಿ |
ದೆರೆದಂತಳಲೊಗೆವುದಲ್ತೆ ತನ್ನವರಿದಿರೊಳ್ || ೨೬ ||

ಪರಿಕಿಸು ಬಸಂತ ಕೆಳೆಯನ ।
ಪುರವಸ್ಥೆಯ ನೀಂ ಕಪೋತವರ್ಣದೆ ಪುಡಿಗೂ ॥
ಡಿರುತಿರ್ಪ ದೇಹಭಸ್ಮವ ।
ಮರುತಂ ಕೊಂಡೊಯ್ವನೆಂದಳುತ್ತವಳೊರೆದಳ್ ॥ ೨೭ ॥

ಜಲಜಾಸ್ತ್ರನೆ ನೀನೀಗಳ್ ।
ಸಲೆ ದರ್ಶನವೀಯೊ ಮಧು ನಿರೀಕ್ಷಿಸಲೆಳಸಂ ॥
ಚಲಿಸಿದೊಡಂ ದಯಿತೆಯರೊಳ್ ।
ಚಲಿಸುವುದೇಂ ಕೆಳೆಯರಲ್ಲಿ ಪುರುಷ ಪ್ರೇಮಂ ॥ ೨೮ ॥

ಜಲರುಹತಂತುಗುಣದ ಕೋ ।
ಮಲಸುಮಶರದ ತ್ವದೀಯಧನುವಾಜ್ಞೆಗೆ ತಾ ॥
ನೊಳಗಾಯ್ತುಲ್ತೆ ಸುರಾಸುರ ।
ಕಲಿತಜಗಂ ನಿನ್ನ ಕೆಲದೊಳಿರೆ ಮಧುವೀತಂ ॥ ೨೯ ॥

ಎಲರಿಂದಾರಿದ ದೀಪದ ।
ವೊಲೀ ಭವನ್ಮಿತ್ರನಿರದೆ ಪೋದಂ ಮರಳಂ ॥
ಉಳಿದೇಂ ನೋಡೈ ನಾನಸ ।
ವಳದಳಲಿನ ಪೊಗೆಯನೊಂದಿ ಬತ್ತಿಯ ಪಾಂಗಿಂ ॥ ೩೦ ॥

ಸ್ಮರವಧೆಯ ಸಮಯದೊಳ್ ತಾಂ ।
ತೊರೆದೆನ್ನಂ ದೈವಮೆನಗೆ ಹಿಂಸಾರ್ಧಮನೇ ॥
ವಿರಚಿಸಿತನಪಾಯಾಶ್ರಯ ।
ಧರಣೀಜವ ದಂತಿ ಮುರಿಯೆ ಲತೆ ಬೀಳದೆ ಪೇಳ್ ॥ ೩೧ ॥

ವ|| ಆದು ಕಾರಣದಿಂದವಿಾಗಳ್:—

ನಾನೊರೆವ ಬಂಧು ಕೃತ್ಯವ ।
ನೀನೆಸಗು ಬಸಂತ ವಿವಶಳಾದೆನಗೆ ಬೃಹ ॥
ದ್ಭಾನುವ ದಾನವಗೈದು ।
ಪ್ರಾಣೇಶನ ಸನ್ನಿಧಾನದಲ್ಲಿರಿಸೆನ್ನಂ ॥ ೩೨ ॥

ತೆರಳ್ಗುಂ ಬೆಳ್ದಿಂಗಳ್ ಚಂ ।
ದಿರನೊಡನೆಳೆಮಿಂಚು ಮುಗಿಲಿನೊಡನಳಿಗುಂ ತಾಂ ॥
ತರುಣಿಯರನುಗಮಿಪರ್ ಪತಿ ।
ಸರಣಿಯನೆಂದರಿಗುಮಲ್ಪಚೇತನಚಯಮುಂ ॥ ೩೩ ॥

ಈ ಶುಭಪತಿತನುಭಸ್ಮವ ।
ಪೂಸುತ್ತಂ ನಾಡೆ ನನ್ನ ಕುಚಮಂಡಲಮಂ ॥
ಭೂಷಿಸುತಂ ಪೊಸ ತಳಿರ್ಗಳ ।
ಪಾಸಿನೊಳೆಂತಂತಿರೊಡಲನಿರಿಸುವೆನುರಿಯೊಳ್ ॥ ೩೪ ॥

ಅಲರ್ವಾಸಿನೊಳೆಮುಗೈಸಲೆ ।
ಪಲರ್ಮೆ ಸಾಯುಮನೊಡರ್ಚಿದೈ ಸೌಮ್ಯನೆ ನೀಂ ॥
ಘಳಿಲನೆ ಚಿತಿಗೈಯೆನಗೀ ।
ಗಳೆ ಕೈಗಳ ಮುಗಿದು ನಮಿಸಿ ಯಾಚಿಸುವೇಂ ನಾಂ ॥ ೩೫ ॥

ವ॥ ನಾನೆರೆದಂತುರೆ ಚಿತಿಯಂ ವಿರಚಿಸಿದ ಬಳಿಕ್ಕಂ—

ಕಂ॥ ಜ್ವಲನಮನೆನಗಿತ್ತದ ಮೆ ।
ಲ್ಲೆಲರಂ ಬೀಸುತ್ತೆ ಜವದೊಳುರಿಗೊಳಿಸೈ ನೀಂ ॥
ಉಳಿದೆನ್ನಂ ಮನ್ಮಥನರೆ ।
ಗಳಿಗೆ ಸುಖಂಬಡೆಯನೆಂದು ತಿಳಿಯದೆ ನಿನಗೇಂ ॥ ೩೬ ॥

ವಿರಚಿಸುತಮಿಂತು ನಮಗಿ ।
ರ್ವರಿಗಂ ಸಲಿಲಾಂಜಲಿಯುನದೊಂದನೆ ಕುಡು ನೀಂ ॥
ಪರದೊಳ್ ನಿನ್ನಯ ಕೆಳೆಯುಂ ।
ಸ್ಮರನೆನ್ನೊಡಗೊಂಡು ಕುಡಿವನಾ ಜಲಮಂ ತಾಂ ॥ ೩೭ ॥

ಪರಲೋಕವಿಧಿಯೊಳಂಬುಜ ।
ಶರಂಗೆ ಚಲಪಲ್ಲವಾಪ್ರಸುಮಮಂಜರಿಯುಂ ।
ನೆರೆ ನೀನರ್ಪಿಸು ನಿನ್ನಾ ।
ವರಮಿತ್ರಂ ಚೂತಕುಸುಮಸಂಪ್ರಿಯನಲ್ತೇಂ ॥ ೩೮ ॥

ವ॥ ಆ ಸಮಯದೊಳ್—

ತನುವುಳಿಯಲಿಂತು ತೊಡಗಿದ ।
ಮನಸಿಜಕಾಮಿನಿಯ ಕರುಣಿಸಿದಳಾಗಸದಿಂ ॥
ಜನಿಸಿದ ವಾಗ್ದೇವಿ ಮುನ್ಮಳೆ ।
ಯೊಣಗಿರೆ ಮಡು ನೊಂದ ಶಫರಿಯಂ ಕರುಣಿಸವೊಲ್ ।೩೯।

ವ॥ ಕರುಣಿಸಿದ ಪರಿಯದೆಂತೆನೆ:—

ಸ್ಮರಕಾಂತೆ ನಿನ್ನ ಹೃದಯೇ ।
ಶ್ವರನಚಿರದೆ ಸುಲಭನೆನಿಸುವಂ ಕೇಳಾತಂ ॥
ಪುರಹರಲೋಚನವೈಶ್ವಾ ।
ನರಂಗೆ ತಾಂ ಶಲಭನಾದ ಪರಿಯುಂ ಪೇಳ್ವೇಂ ॥ ೪೦ ॥

ಸ್ಮರನೆಸಗಿದ ವಿಕೃತಿಯೊಳಾ ।
ಸರಸಿಜಭವನೆಳಸಿ ಮಗಳೆನಿಪ ಸರಸತಿಯಂ ॥
ಸ್ಥಿರಮಂಗೈಯ್ದು ಮನವ ಮೋ ।
ಣೆರದವನಂ ಶಪಿಸೆ ಫಲಮನಿದನುಂಡನವಂ ॥ ೪೧ ॥

ಶಿತಿಕಂಧರನೇಗಳ್ ಪಾ।
ರ್ವತಿಯು ತಪಕ್ಕೊಲ್ದು ಲಗ್ನನಾಗುತ್ತವಳಂ॥
ಅತಿಸುಖಿಯಪ್ಪನೊ ಆಗಳ್।
ರತಿಪತಿಯುಮನವನ ತನುವಿನಿಂ ಕೂಡಿಸುವಂ ॥ ೪೨ ॥

ವ॥ ಸುಮಶರಂ ತನ್ನಿಂ ಮುನ್ನಿಂತು ಶಾಪಶಾಪಾಂತಂಗಳನಾಂತನೆಂಬುದಂ:—

ನುಡಿದನಿದಂ ಸ್ಮರಶಾಪದ।
ಕಡೆಯುಂ ತಾಂ ಧರ್ಮಯಾಚಿತಂ ಕಮಲಭವಂ॥
ಸಿಡಿಲಂ ಮುಳಿಯನೆರಡುಮುಂ॥
ಪಡೆಗುಂ ಜಲದಂಗಳುಂ ಜಿತೇಂದ್ರಿಯರಲ್ತೇಂ ॥ ೪೩ ॥

ಅದರಿಂ ಪರಿರಕ್ಷಿಸು ಮುಂ।
ದೊದಗುವ ಪತಿಸಂಗಕೀ ತನುವನೆಲೆ ಭದ್ರೇ॥
ನದಿಗರ್ಕಪೀತಜಲಕೇ।
ನೊದಗದೆ ಕಾರ್ಗಾಲದೊಳ್ ಪ್ರವಾಹದ ಕೂಟಂ ॥ ೪೪ ॥

ಇಂತೊಂದದೃಶ್ಯಮಾತ್ಮಂ।
ಕಂತುಪ್ರಿಯೆಗಳಿವ ಮತಿಯ ಕಳೆವಿನಮುದನೇ॥
ಸ್ವಾಂತದೆ ನಂಬಿ ಬಸಂತಂ।
ಸಂತೈಸಿದನವಳನ್ನೈದೆ ಸಾರ್ಥಕವಚದಿಂ ॥ ೪೫ ॥

ಬಳಿಕಂ ದುಃಖದೆ ಸೊರಗಿದ।
ಜಲಜಾಸ್ತ್ರ ಪ್ರಿಯೆ ವಿಪತ್ತಿನಂತವ ಪಗಲೊಳ್॥
ಬೆಳಗಳಿದು ಕುಂದಿದಿಂದುವ।
ಕಳೆಯಿರುಳನದೆಂತಿರಂತೆ ಕಾಯ್ದಿರುತಿರ್ದಳ್ ॥ ೪೬ ॥

ರತಿವಿಲಾಪನಾಮಕ ಚತುರ್ಥ ಸರ್ಗಂ
— ಸಂಪೂರ್ಣಂ —

ಪಂಚಮ ಸರ್ಗಂ.

ಕ॥ ಸ್ಮರನಂ ಕಣ್ಣಿದಿರಲ್ಲೀ।
ತೆರದಿಂ ಹರನುರುಪಿ ಬಯಕೆಗಳೆವಿನಮದ್ರೀ॥
ಶ್ವರಸುತೆ ಹೃದಯದೆ ರೂಪವ।
ಜರೆದಳ್ ಪ್ರಿಯಭಾಗ್ಯಮಲ್ತೆ ಲಾವಣ್ಯಫಲಂ ॥ ೧ ॥

ವಶವರ್ತಿಚಿತ್ತದಿಂ ತಪ।
ವೆಸಗುತವಳ್ ರೂಪಫಲವ ಪಡೆಯಲೆಳಸಿದಳ್॥
ಎಸಗೆ ಪೆರತೊಂದನೇಂ ಸಮ।
ನಿಸುಗುಮೆ ತದ್ವಿಧದ ಪ್ರೇಮಮುಂ ವಲ್ಲಭನುಂ ॥ ೨ ॥

ಮಗಳೀಶ್ವರನಂ ಮೆಚ್ಚಿಪ।
ಬಗೆಯಿಂ ತಪಕುಜ್ಜುಗಿಸುವುದಂ ಕೇಳ್ದುರದಿಂ॥
ಬಿಗಿಯಪ್ಪಿ ಮೇನೆಯವಳಂ।
ಮಿಗಿಲೆನಿಪಾ ವ್ರತವ ಬಿಡಿಸಲಿಂತು ವಚಿಸಿದಳ್ ॥ ೩ ॥

ವ॥ ಅದೆಂತನೆ:—

॥ ವೃ ॥

ಸದನದೊಳಿಷ್ಟಮುಂ ಸಲಿಪ ದೇವತೆಗಳ್ ನೆಲಸಿರ್ಕುಮಲ್ತೆ ನಿ।
ನ್ನದು ವಪುವೆಲ್ಲಿ ನೋಡೆ ತಪವೆಲ್ಲಿ ತನೂಭವೆ ಭೃಂಗಪಾದಮುಂ॥
ಮೃದುಲತರಂ ಶಿರೀಷಕುಸುಮಂ ಬಿಡದಂತಿರೆ ಪೊತ್ತುಕೊಳ್ವುದ।
ಲ್ಲದೆ ತಿಳಿ ನೀಂ ಪತಂಗಪದಭಾರವ ತಾನದು ಪೊತ್ತುಕೊಳ್ವುದೇ ॥೪॥

ಕಂ॥ ಒರೆದಿಂತು ತಾಯ್ಗೆ ತಪದಿಂ।
ಮರಳಿಸಲಸದಳಮದಾಯ್ತು ದೃಢಮನದವಳಂ॥
ತಿರುಗಿಪನೊಳನೇನಿಷ್ಟ।
ಸ್ಥಿರ ಚಿತ್ತವ ನಿಮ್ನಧರೆಗೆ ಪರಿಸ ಜಲಮುಮಂ ॥ ೫ ॥

॥ ವೃ ॥

ಚಲಿಸದ ಚಿತ್ತದದ್ರಿತನುಜಾತೆ ನಿಜಾಶೆಯು ಬಲ್ಲ ತಂದೆಯಂ।
ಫಲಜನನಾಂತಮಸ್ಪ ತಪಮಂ ವಿಧಿಯಿಂ ನೆಗಳಲ್ಕೆ ಕಾನನ॥
ಸ್ಥಲದೊಳಗೊಲ್ದು ವಾಸಿಸುವುದಂ ಬಳಿಯಲ್ಲಿರುತಿರ್ಪ ತನ್ನಯಾ।
ಕೆಳದಿಯ ವಕ್ತ್ರದಿಂದೆ ಸಲೆ ಯಾಚಿಸಿದಳ್ ದಿನವೊಂದರಲ್ಲಿ ತಾಂ॥೬॥

ಇದು ತಕ್ಕಾಗ್ರಹಮೆಂದು ಪೂಜ್ಯತಮನಾದಾ ತಂದೆ ತಾಂ ಪೊರ್ದೆ ಸಂ।
ಮುದಮಂ ಗೌರಿ ತದೀಯಸಮ್ಮತಿಯನೊಂದುತ್ತಂ ಕರಂ ಸೇರ್ದಳಾ॥
ವುದು ಗೌರೀಶಿಖರಾಭಿಧಾನದೆ ತಪಃ ಕಾಲೋತ್ತರಂ ಲೋಕಮ।
ಧ್ಯದೆ ವಿಖ್ಯಾತಿಯನಾಂತುದಾ ಶಿಖರಮಂ ಭಾಸ್ವನ್ಮಯೂ
ರೌಘಮಂ ॥ ೭ ॥

ವ॥ ಹಿಮನಗದ ತಚ್ಛಿಖರಮಂ ಪೊರ್ದಿದ ಸಮನಂತರದೊಳ್

ಕ॥ ಚಲಿಸಿ ಕುಚಮಧ್ಯಗಂಧವ।
ತೊಲಗಿಪ ಹಾರಮನವಳ್ ತೊರೆದು ನಿಶ್ಚಲೆ ಬ॥
ಲ್ಕೊಲೆಯಿಂ ಕಟ್ಟುಚರ್ಮವ ವ।
ಲ್ಕಲಮಂ ಬಾಲಾರ್ಕವರ್ಣಮಂ ತಾಂ ತಳೆದಳ್ ॥ ೮ ॥

ಬೆಳಗಿದುದವಳ ಮೊಗಂ ಜಡೆ।
ಯೊಳಮಂದದ ಕುರುಳ್ಗಳಿಂದ ಮೊಪ್ಪುವ ಪಾಂಗಿಂ॥
ಅಳಿಮಾಲೆಯಿನೆಂತಿರೆ ಶೈ।
ವಲದೊಳಮಂತೆಸೆಯದಿರ್ಪುದೇಂ ಪಂಕೇಜಂ ॥ ೯ ॥

ವ್ರತಕೆ ಪೊಸತಾಗಿ ಭೂಧರ ।
ಸುತೆ ತಾಳ್ದ ತ್ರಿಗುಣಮೌಂಜಿಯದು ಪುಟ್ಟಿಸುತಂ ॥
ಪ್ರತಿನಿಮಿಷಂ ಪುಳಕಮನರು ।
ಣತೆಯಿತ್ತುದು ತತ್ಪನೀತೆಯುಡೆನೂಲೆಡೆಯೋಳ್ ॥ ೧೦ ॥

ತೊರೆದು ವಿಮುಕ್ತಸುರಾಗಾ ।
ಧರಮಂ ಸ್ತನರಾಗರಕ್ತಕಂತುಕಮುಮನಾ ॥
ಗಿರಿಜೆಯು ಕುಶಕ್ಷತಾಂಗುಳಿ ।
ಕರಮಾಂತುದದಕ್ಷಸೂತ್ರಸಖ್ಯಮನಾಗಳ್ ॥ ೧೧ ॥

ಪೊರಳೆ ವರಶಯನ ಮಧ್ಯದೆ ।
ಸುರಿದ ಕುರುಳ್ಪೂಗೆ ಬಳಲ್ದಳಾವಳವಳೆ ತಾಂ ॥
ಬರಿನೆಲದೊಳೆ ತಲೆಗಿಂಬಾ- ।
ಗಿರೆ ನಳಿದೋಳ್ ಮಲಗುತಂತೆ ಕುಳ್ಳಿರುತಿರ್ಪಳ್ ॥ ೧೨ ॥

ಹರಿಣಿಗಳೊಳ್ ಚಲದೃಷ್ಟಿಯು ।
ವರಲತೆಗಳೊಳುರುವಿಲಾಸಚೇಷ್ಟೆಯುನಿಂತಾ ॥
ಗಿರಿಜೆ ನಿಯಮಸ್ಥೆಯೆರಡರೊ ।
ಳೆರಡಂ ಮೇಣ್ ತೆಗೆದುಕೊಳ್ಳಲಿಟ್ಟಳೆನಿಸುಗುಂ ॥ ೧೩ ॥

ಅಲಸದೆ ಗಿಡುಗಳ ತಾನೇ ।
ಕಲಶಸ್ತನಪಯುವನೆರೆದು ಬೆಳೆಯಿಸಿದಳವಳ್ ॥
ತೊಲಗಿಸನಾ ಪ್ರಥಮಭವಂ ।
ಗಳೊಳಿಟ್ಟ ತನೂಜವತ್ಸಲತೆಯಂ ಗುಹನುಂ ॥೧೪॥

ಕೆಳದಿಯರ ಮುಂದಿರದೆ ಕ ।
ಣ್ಗಳನಳೆವಳ್ ಮಿಗಗಳಕ್ಷಿಗಳಿನೀ ಪರಿಯಿಂ ॥
ಸಲಿಗೆಯೊಳಿರ್ಪಂತವುಗಳ ।
ಸಲೆ ಪೊರೆಗುಂ ತಿನಿಸುತಂಜಲಿಯ ಧಾನ್ಯವ ತಾಂ ॥ ೧೫ ॥

ವ|| ಇಂತುಮಲ್ಲದೆ:—

ನಿಂದು ಸಲೆ ಬೇಳ್ದು ನಾರುಡೆ ||
ಯಿಂದೊಪ್ಪುತೆಯೋದುತಿರ್ಪ ಗಿರಿಜೆಯ ಬಳಿಯೊಳ್ ||
ಬಂದುದು ಕಾಣಲೆಳಸಿ ಮುನಿ |
ವೃಂದಂ ವಯದೆಣಿಕೆ ಧರ್ಮವೃದ್ಧರೊಳುಂಟೇಂ || ೧೬ ||

ತೊರೆಯೆ ಮೃಗಂಗಳ್ ವೈರವ |
ತರುಗಳ್ ಸತ್ಕರಿಸೆ ಸುಫಲದಿಂದತಿಥಿಗಳಂ ||
ಸ್ಫುರಿಸೆ ನವೋಟಜದನಲಂ |
ಪರಿಪಾವನಮಾಯ್ತು ತತ್ತಪೋವನಮವಳಾ ||೧೭||

ಮೊದಲ ತಪಕ್ಕಿಷ್ಟಾರ್ಥಮ |
ದೊದಗದುದಂ ತಿಳಿದು ಗೌರಿ ತನ್ನಯ ತನುವಾ ||
ಮೃದುತೆಯ ಗಣಿಸದೆ ಬಹುಕಠಿ |
ಣದ ತಪಮಂ ಮಾಳ್ಪುದಕ್ಕೆ ತೊಡಗಿದಳಾಗಳ್ || ೧೮ ||

|| ವೃ ||

ಗಣಿಸಲ್ ಕಂದುಕಕೇಳಿಯಿಂದೆಯುಮುದಾವಳ್ ಪೊರ್ದುಗುಂ ಕ್ಲೇಶಮಂ |
ಮುನಿಗಳ್ ಮಾಳ್ಪತಿತೀವ್ರಮಪ್ಪತಪಮಂ ಕೈಕೊಂಡಳಾ ತನ್ವಿ ತಾಂ||
ಕನಕಾಂಭೋರುಹದಿಂದೆ ಗೈದುದು ವಲಂ ತದ್ದೇಹಮಿಂತಿರ್ಪ ಕಾ |
ರಣದಿಂ ಮಾರ್ದವಮುಂ ಕಠೋರತೆಯುಮುಲ್ಲಿರ್ಕುಂ ಸ್ವಭಾವೋದ್ಭವಂ || ೧೯ ||

ಕ|| ಜ್ವಲಿಪ ಚತುರ್ವಹ್ನಿಯ ನಡು |
ನೆಲೆಯೊಂದುತೆ ಗೆಲ್ದು ಕಣ್ಗೆಡಿಪ ಕಡುಬಿಸಿಲಂ ||
ಚಲಿಸದ ದಿಟ್ಟಿಯೊಳರ್ಕನ |
ಸಲೆ ನೋಳ್ಪಳ್ ಬೇಸಗೆಯೊಳವಳ್ ಕಿರುನಗೆಯಿಂ || ೨೦ ||

ಇಂತರ್ಕಕಿರಣದಿಂದಂ- ।
ಸಂತಪ್ತಂ ತನ್ಮುಖಂ ಸರೋಜದ ಸಿರಿಯಂ ॥
ಆಂತಿರೆ ತದ್ದೀರ್ಘಸುನೇ ।
ತ್ರಾಂತಂಗಳೆ ಮೆಲ್ಲಮೆಲ್ಲನಾಂತವು ಕರ್ಪಂ ॥ ೨೧ ॥

ಎರೆಯದೆ ದೊರೆದುದಕಂ ಶಶ- ।
ಧರನಮೃತದ ಕರಮುದಶನಸಾಧನಮಾಯ್ತು ॥
ಗಿರಿರಾಜಾತ್ಮಜೆಗದು ತಾಂ ।
ತರುಜೀವನವೃತ್ತಿಭಿನ್ನಮಾಗದೆಯಿರ್ಕುಂ ॥ ೨೨ ॥

ರವಿರೂಪದ ಮೇಣ್ ಕಾಷ್ಠೋ ।
ದ್ಭವರೂಪದ ವಿವಿಧವಹ್ನಿಯಿಂ ತಪ್ತೆಯುವಳ್ ।
ನವಜಲದಿಂ ನಾಂದುರೆ ಬಾ ।
ಷ್ಪವನೂರ್ಧ್ವಕೆ ಬಿಟ್ಟಳವನಿಯೊಡನೆಯೆ ಕಾರೋಳ್ ॥೨೩॥

ವ॥ ಆಸಮಯದೊಳ್,

ನವಜಲಬಿಂದುಗಳಗಭವೆ ।
ಯೆವೆಯೊಳ್ ಕ್ಷಣಮಿರ್ದು ತುಟಿಯ ತಾಡಿಸುತನುರೋ ॥
ಭವಭಾಗಕೆ ಬಿಳ್ದೊಡೆದು ।
ತ್ರಿವಳಿಗಳಿಂ ಜಗಳ್ದು ಪೊಕ್ಕುಳಾಂತುವು ಚಿರದಿಂ ॥೨೪॥

ಎಲರೊಡನೆ ಬಿಡದೆ ಸುರಿಯುವ ।
ಮಳೆಯೊಳ್ ಬಯಲಲ್ಲಿ ಶಿಲೆಯೊಳೊರಗಿರ್ದುಮೆಯಂ ॥
ಸೆಳೆಮಿಂಚುಗಣ್ಣೆನೀಕ್ಷಿಪ ।
ವೊಲೊಪ್ಪುಗುಂ ತತ್ತಪಕ್ಕೆ ಸಾಕ್ಷ್ಯದ ನಿಶೆಗಳ್ ॥೨೫॥

ಇದಿರಲ್ಲೊಂದೊಂದಂ ವಿರ ।
ಹದೆ ಕರೆಯುವ ಕೋಕಮಿಥುನದೊಳ್ ಕೃಪೆಯಿಡುತಂ ॥
ಉದಕನಿವಾಸದೆ ಕಳೆದಳ್ ।
ಸದಯೆ ಹಿಮೋತ್ಕಿರಸಮೀರಪೌಷ ನಿಶೆಗಳಂ ॥ ೧೬ ॥

ಗಿರಿಸುತೆ ಹಿಮವೃಷ್ಟಿಕ್ಷತ ।
ಸರೋಜಸಂಪದದ ಜಲಕೆ ಕಮಲಘಟನೆಯಂ ॥
ಸರಸಿಜಗಂಧದ ಚಲಿತಾ ।
ಧರದಳಮುಖದಿಂದೆ ಗೆಯ್ದಳೆನಿಸುಗುಮಿರುಳೊಳ್ ॥ ೧೭ ॥

೯| ಇಂತು ಕಠಿಣತಪನೆಸಗಿದ ಕಾರಣದಿಂದೆ:—

ತಪಕೆ ಪರೋತ್ಕರ್ಷಂ ಪಾ ।
ದಪದತ್ತಣೆಸುರುಳ್ದ ಪರ್ಣದಶನವುದಸುವಂ ॥
ಉಪಯೋಗಿಸದಿರ್ದುದರಿಂ ।
ದಪರ್ಣೆಯೆಂದೆಂಬರಾ ಸುಮುಖಿಯಂ ವೃದ್ಧರ್ ॥ ೧೮ ॥

ಬಳಲಿಸಿ ಮೃಣಾಳಿಕಾಕೋ ।
ಮಲದೇಹಮನೀವಿಧವ್ರತದೆ ಪಗಲಿರುಳಾ ॥
ಲಲಿತೆ ಕಠೋರವಪುಗಳಿಂ ।
ಗಳಿಸಿದ ತಪಸಿಗಳ ತಪನ ಕೀಳಾಗಿಸಿದಳ್ ॥ ೧೯ ॥

ಇಂತಿರ್ಪಿನಮೊಂದು ದಿವಸಂ:—

॥ ವೃ ॥

ಮಿಗದೊವಲಂ ಪಲಾಶದ ಸುಯಷ್ಟಿಯುಮಂ ತಳೆಯುತ್ತೆ ಮಾತಿನೊಳ್ ।
ಮಿಗಿಲೆನಿಸುತ್ತೆ ವೈದಿಕದ ತೇಜದೆ ತಾಂ ಜ್ವಲಿಸಂತೆ ತೋರುತಂ ॥
ನಗತನುಜಾತೆಯಾಶ್ರಮುವ ಪೊಕ್ಕನದೋರ್ವಜಟಾನಿಭೂಷಿತಂ ।
ಬಗೆವಿನಮಾದಿಯಾಶ್ರಮುಮೆ ಆಕೃತಿಗೊಂಡಿರದೊಲ್ಪು ಪೊಕ್ಕವೊಲ್ ।

ಅತಿಥಿಪ್ರಿಯೆ ಪಾರ್ವತಿಯುಂ ।
ನ್ನತಮಾನಾರ್ಚನೆಯೊಳವನ ತಾನಿದಿರ್ಗೊಂಡಳ್ ॥
ಅತಿಗೌರವಕೃತಿಯಂ ನಿ ।
ರ್ಜಿತಚಿತ್ತರ್ ಮಾಳ್ಪರಾತ್ಮಸಮರೊಳಿತರರೊಳ್ ॥ ೩೦ ॥

ಕ್ರಮಕೃತಸೇವೆಯ ಕೊಂಡು ।
ಶ್ರಮಮಂ ಕ್ಷಣಮೈದೆ ಕಳೆವವೋಲಿರ್ದವನಾ ॥
ಉಮೆಯಂ ಸರಳಾಕ್ಷಿಯೊಳೇ ।
ಸಮೀಕ್ಷಿಸುತೆ ನುಡಿಯತೊಡಗಿದಂ ಸಕ್ರಮದಿಂ ॥ ೩೧ ॥

ವ॥ ನುಡಿದ ಪರಿಯದೆಂತೆನೆ—

ಸುಲಭಮೆ ಸಮಿತ್ಕುಶಂ ನಿ ।
ರ್ಮಳಕೃತಿಗುದಕಮದು ಮಜ್ಜನಾರ್ಹಮೆ ನಿನ್ನೀ ॥
ಬಲಕನುಗುಣಮಿರ್ಪುದೆ ತಪ ।
ಮೆಳೆಯಳೆ ತನುವಲ್ತೆ ಧರ್ಮಸಾಧನಮಾದ್ಯಂ ॥ ೩೨ ॥

ಚಿರದಿಂ ಲಾಕ್ಷಮನುಳಿದೊಡ ।
ಮರುಣತೆಯಿಂದೆಸೆವ ನಿನ್ನ ತುಟಿಗೆಣೆಯುಂ ನೀ ॥
ನೆರೆದುದಕದೆ ಪುಟ್ಟಿದುದುಂ ।
ವರವಲ್ಲೀಪಲ್ಲವಮಿದು ಸಲೆ ವರ್ಧಿಪುದೇಂ ॥ ೩೪ ॥

ಚಲದಕ್ಷಿಗಳಿಂದೆ ಭವ ।
ದ್ವಿಲೋಚನಸಾಮ್ಯವಭಿನಯಿಸುವೀ ಮಿಗಗಳ್ ॥
ಒಲವಿಂ ಕೈಯ ಕುಶಂಗಳ ।
ಸೆಳೆಯೆ ಮನಂ ಕದಲದಿರ್ಪುದೇಂ ಕುಮುದಾಕ್ಷೀ ॥ ೩೫ ॥

ದುರಿತಾಚರಣಮನೆಸಗದು।
ಸುರೂಪಮೆಂಬುಕ್ತಿ ಸತ್ಯಮಾಯತನೇತ್ರೇ॥
ಪರಿಕಿಸೆ ನಿನ್ನಯ ಶೀಲಂ।
ಪರಮತಪೋಧನರೊಳಂ ಪ್ರಮಾಣಮೆನಿಸುಗುಂ ॥ ೩೬॥

॥ ವೃ ॥

ಗಿರಿತನುಜಾತೆ! ನಿರ್ಮಲಮೆನಿಪ್ಪ ಭವಚ್ಚರಿತಂಗಳಿಂ ಧರಾ।
ಧರವರನೀತನನ್ವಯಸಮನ್ವಿತನೆಂತು ಪುನೀತನಂತೆ ತಾಂ॥
ಪರಕಿಪೊಡಲ್ತು ಸಪ್ತಋಷಿಗಳ್ ಮಿಗೆ ಪೂಜಿಸುತಿತ್ತಲರ್ಗಳಿಂ।
ನೆರೆ ನಗುವಂತಿರಿರ್ಪ ದಿವವಿಚ್ಯುತಗಾಂಗಜಲಂಗಳಿಂದೆಯುಂ॥೩೭॥

ನೀನರ್ಥಕಾಮಯುಗಮಂ।
ಮಾನಸದಿಂದುಳಿದು ಧರ್ಮಮೊಂದರ ಸೇವಾ॥
ಧೀನದೊಳಿರೆ ನನಗೀಗಳ್।
ತಾನದು ಮಿಗಿಲೆನಿಸಿದತ್ತು ವರ್ಗತ್ರಯದೊಳ್ ॥ ೩೮ ॥

ವ॥ ಇಂತುಮಲ್ಲದೆ:—

ವರ ಸತ್ಕೃತಿಯುಂ ನಿನ್ನಿಂ।
ದುರೆ ಪೊರ್ದಿದ ನನ್ನನನ್ಯನೆನದಿರು ಸುಮುಖೀ॥
ಅರಿದರ್ ಸಜ್ಜನಸಖ್ಯಂ।
ದೊರೆದಪುದದು ಸಪ್ತಪದದೊಳೆಂದು ಕಥಿಸುವರ್ ॥ ೩೯ ॥

ಪರಮತಪಸ್ವಿನಿ ಸಹನಾ।
ಕರೆ ನಾಂ ದ್ವಿಜಸಹಜಚಾಪಲದೆ ನಸುಕೇಳ॥
ಲ್ಕರೆ ವಾಂಛಿಪುದಂ ಪೇಳ।
ಲ್ಕರುಹಳ್ ನೀನೆನಗೆ ಗುಪ್ತಮಲ್ಲದೊಡದು ತಾಂ ॥ ೪೦ ॥

ನಳಿನಭವಕುಲದೆ ಜನನಂ ।
ತ್ರಿಲೋಕಸೌಂದರ್ಯನಿಲಯಮಿದು ತನು ಪೆರತೊಂ ॥
ದೆಳಸದ ಸಂಪತ್ಸೌಖ್ಯಂ ।
ತೊಳಪ ನವಂ ಹರೆಯಮಿನ್ನದೇಂ ತಪದ ಫಲಂ ॥ ೪೧ ॥

ಧೀರಾಂಗನೆಯರ್ಗೊದಗುವು ।
ದೀ ರೀತಿಯ ವೃತ್ತಿಯಸದಳದ ಮನದಳಲೋಳ್ ॥
ತೋರದು ನಿನ್ನೋಳದು ಸುವಿ ।
ಚಾರಾಧ್ವಕಡರ್ದ ನನ್ನ ಚಿತ್ತಕೆ ತನ್ವೀ ॥ ೪೨ ॥

ಅಳಲ ತಿರಸ್ಕೃತಿಗಿದು ರೂ ।
ಪೊಳಗಾಗದು ಪಿತನ ಗೃಹದೊಳಿಲ್ಲಸಮಾನಂ ॥
ಬಳಿಸೇರದು ಪರಧರ್ಷಣ ।
ಮೊಳೆಯಳೆ ಫಣಿಮಣಿಗೆ ಕೈಯನೀಡುವನೊಳನೇಂ ॥ ೪೩ ॥

ತೊರೆದಾಭರಣಂಗಳ ನೀಂ ।
ಹರೆಯದೆ ವಾರ್ಧಕ್ಯವಲ್ಕಲವ ಧರಿಸಿದುದೇಂ ॥
ವರಶಶಿತಾರೆಗಳಿಂ ತ ।
ಳ್ತಿರುಳರುಣನ ಸಂಜೆಯಲ್ಲಿ ಪೊರ್ದುಗುಮೇಂ ಪೇಳ್ ॥ ೪೪ ॥

ಬಯಸಿರೆ ದಿವಮುಂ ವಿಫಲಂ ।
ಪ್ರಯಾಸಮಿದು ಪಿತನ ತಾಣಮೇ ಸುರರೆಡೆ ನೋಡ್ ॥
ಬಯಕೆಯಿರೆ ವರನೊಳೀ ವೃ ।
ತ್ತಿಯ ಬಿಡು ಮಣಿಯರಸದದನೆ ಅರಸುವರಲ್ತೇ ॥ ೪೫ ॥

ಎಳಸಿದುದಂ ಬಿಸುಸುಯ್ಲಿದು ।
ತಿಳಿಸಿದೊಡಂ ಪುಗುವುದೆನ್ನ ಬಗೆ ಸಂಶಯದೊಳ್ ॥
ಎಳಸಲ್ತಕ್ಕವನಿಲ್ಲವ ।
ನೆಳಸಿದೊಡಂ ನಿನಗದೆಂತು ದುರ್ಲಭನೆನಿಪಂ ॥ ೪೬ ॥

ಕಲವಮಾಗ್ರಪಿಂಗಲದ ಜಡೆ ।
ವಿಲಸತ್ಕರ್ಣಾವತಂಸಶೂನ್ಯಕಪೋಲ ।
ಸ್ಥಲದೊಳ್ ಜೋಲ್ದಿರೆಯಿದ ನೀ ।
ನೆಳಸಿದವಂ ಗಣಿಸನಯ್ಯೊ ಕಠಿಣಾತ್ಮನವಂ || ೪೭ ||

ವೃ||

ಮಿಗೆ ಕೃಶವಾಗೆ ದೇಹಮಿದು ಮಾಳ್ಪ ಮುನಿವ್ರತದಿಂದೆ ಸೂರ್ಯನಿಂ |
ದೊಗೆದಿರೆ ಕರ್ಪು ಭೂಷಣದ ತಾಣಗಳಲ್ಲಿ ಗಿರೀಂದ್ರಪುತ್ರಿ ನೀಂ ||
ಪಗಲ ಶಶಾಂಕರೇಖೆಗೆಣೆಯಾಗಿರುತಿರ್ಪುದನೈದೆ ನೋಡುತುಂ ||
ಬಗೆವೊಡದಾವ ಚೇತನನ ಮಾನಸನೊಂದದತೀವದುಃಖಮಂ ||೪೮||

ವ|| ಇಂತುಮಲ್ಲದೆ—

ಕಂ|| ಸವಿನೋಟದೊಳಂ ಕೊಂಕಿ ।
ರ್ದನೆಯೊಳಮೊಪ್ಪಿರ್ದ ನಿನ್ನ ಕಣ್ಗಾತ್ಮೀಯಾ ||
ಸ್ಯವ ಚಿರದೆ ತೋರದಾ ತ್ವ |
ದ್ಭವನಂ ವಂಚಿಸಿತು ರೂಪನುದನೆಂದರಿವೇಂ || ೪೯ ||

ಎನಿತುದಿನಂ ಬಳಲ್ದಪೆ ನೀ ।
ನೆನಗಂ ಪೂರ್ವಾಶ್ರಮಾರ್ಜಿತದ ತಪಮಿರ್ಕುಂ ||
ವನಜಾಕ್ಷಿ ತದರ್ಧದೆ ಪಡೆ ।
ಮನದಿಷ್ಟದ ವರನನವನ ನೋಡಲ್ಕೆಳಸೇ || ೫೦ ||

ಒಳಗುಟ್ಟಿಂ ದ್ವಿಜನಿಂತೈ |
ಸಲೆ ಕೇಳ್ದಿನಮುಸಿರಲಾರದೆಯೆ ಹೃದ್ಗತಮಂ ||
ಬಳಿಯಿರ್ಪ ಕೆಳದಿಯುಂ ಕ ।
ಜ್ಜಲರಹಿತಾಕ್ಷಿಯ ಮರಳ್ಚುತವಳೀಕ್ಷಿಸಿದಳ್ || ೫೧ ||

ವ|| ಇಂತೀಕ್ಷಿಸಿದ ಗೌರಿಯ ಹೃದಯಮಂ ತಿಳಿದು:—

ವನಜವ ಕೊಡೆಗೆಯ್ವಂತಿರೆ |
ತನುವನಿವಳ್ ತಪಕೆ ಕೊಟ್ಟುದೇಕೆಂದರಿಯಲ್ ||
ಮನಮೊಳಸಿರ್ದೊಡೆ ತಿಳಿ ಸ |
ಜ್ಜನ ನೀನೆಂದವಳ ಕೆಳದಿ ವಿಪ್ರಂಗೊರೆದಳ್ || ೫೨ ||

ವ|| ಅದೆಂತೆನೆ:—

ಉರುಸಂಪದದ ಚತುರ್ದಿ |
ಗ್ವರರಿಂದ್ರಾದಿಗಳ ಗಣಿಸದೀ ಮಾನಿನಿ ತಾಂ ||
ಸ್ಮರನಂ ಗೆಲ್ದ ಸುರೂಪಕೆ |
ಮರುಳಾಗದ ಹರನ ಪತಿಯನಾಗಿಸಲೆಳಸಳ್ || ೫೩ ||

ವ|| ಇಂತೆಳಸುತಿವಳ್ ಪಿತೃಗೃಹದೊಳಿರುತಿರ್ಪಿನಂ:—

ಅಂದಾಹೃಂಕೃತಿಗಳ್ಕುತೆ |
ಪಿಂದೆಗೆದು ಪುರಾರಿಯಲ್ಲಿ ವಿಫಲಮೆನಿಸುತಂ ||
ಬಂದೆದೆಯ ಚುರ್ಚಿ ಕೃಶತೆಯ |
ನೊಂದಿಸಿತಿವಳಂ ವಿನಷ್ಟತನುಕಾಮಶರಂ || || ೫೪ ||

ಅದು ಮೊದಲಿಂ ಪಿತೃಗೃಹದೊಳ್ |
ಮದನವ್ಯಥೆ ಪೆರ್ಚೆ ತಿಲಕಚಂದನಮಲಕ ||
ಕ್ಕೊದಗಿಸೆ ದೂಸರತೆಯನೀ |
ಸುದತಿಗಣಂ ಸೌಖ್ಯಮಿಲ್ಲ ಹಿಮಶಿಲೆಗಳೊಳಂ || ೫೫ ||

ಹರಚರಿತವ ಕೀರ್ತಿಸುವವ |
ಸರದೆ ಸಬಾಷ್ಪಗಲಗಲಿತ ಪದದಿಂದೆ ವನಾಂ ||
ತರಗೀತಸಖಿಯರಂ ಕಿ |
ನ್ನರಿಯರನೀ ಗಿರಜೆ ತಾಂ ಪಲರ್ನೆಯಳಿಸಿದಳ್ || ೫೬ ||

ಇರುಳ ಕಡೆಜಾವದಲ್ಲಿವ |
ಳರೆಗಳಿಗೆಯೆ ಕಣ್ಣಮುಚ್ಚಿ ಕರಿಗೊರಲನೆ ನೀಂ ||
ತೆರಳುವುದೆಲ್ಲಿಗೆನುತಮೆ |
ಳ್ಚರವಡೆದಳ್ ಬಯಲ ಕೊರಳನಪ್ಪಿದ ಭುಜದಿಂ || ೫೭ ||

ಅರಿದರ್ ಸರ್ವಸ್ಥಿತನೆಂ |
ದೊರೆಗುಂ ನಿನ್ನಲ್ತೆ ಭಾವಗತೆಯನಿವಳನೆಂ ||
ತರಿಯದುದೆಂದೀ ಮುಗ್ಧಳ್ |
ಕರಲಿಖಿತೇಶ್ವರನ ಜರೆಗುಮೇಕಾಂತದೆ ತಾಂ || ೫೮ ||

ಅರಸಿಯುಮರಿಯದೆ ವಿಧ್ಯಂ |
ತರಮಂ ತಲ್ಲೋಕನಾಥಸಂಪ್ರಾಪ್ತಿಗಿವಳ್ ||
ಗುರುವನುಮತಿಯಿಂ ನನ್ಮೊಡ |
ನುರುತಪನೆಸಗಲ್ಕೆ ಸಾರ್ದಳೀ ವನದೆಡೆಯುಂ || ೫೯ ||

ವ|| ಇದುವರೆಗವಿಲ್ಲಿ ಕಠಿಣತಪನೆಸಗಿದೊಡಂ—

ಕಂ|| ಕೆಳದಿಯಿನೇ ಜನ್ಮವ ತಾಂ |
ತಳೆದು ತಪಃಸಾಕ್ಷಿಯೆನಿಸಿದೀ ತರುಚಯಮುಂ ||
ಫಲಿಸಿತು ಮೊಳೆತುದದಿಲ್ಲಂ |
ಶಲಾಧರೋತ್ತಂಸವಿಷಯವಾಂಛಿತಮಿವಳಾ || ೬೦ ||

ಕೆಳದಿಯರೀ ತಪಃ ಕೃಶೆಯನೀಕ್ಷಿಸುಗುಂ ಜಲಪೂರ್ಣನೇತ್ರದಿಂ।
ಸಲಿಪೆ ಸುಸೇವೆಯಂ ಸುಲಭನಾಗದ ಶಂಭುವದೆಂದು ನಮ್ಮಯಿಊ॥
ಲಲಿತೆಯು ತಾನನುಗ್ರಹಿಸನೋ; ಮಳೆಯಿಲ್ಲದೆ ಸುಟ್ಟ ಕೃಷ್ಟಭೂ।
ತಲವ ಸುರಾಧಿನಾಯಕನನುಗ್ರಹಿಸಂತಿರೆ ಕಾಣೆನಾನಿದಂ ॥ ೬೧ ॥

ಹೃದಯುಜ್ಜ್ವಳಿಂತು ಸಲೆ ತದ್।
ಹೃದಯಸ್ಥಮನುಸುರೆ ನೈಷ್ಠಿಕವಿಲಾಸಿಯುವಂ॥
ಮುದವನೊಂದಿದುದಂ ತೋರದೆ।
ಯಿದು ಹಾಸ್ಯವೊ ನಿಜವೊ ಎಂದು ಗೌರಿಯ ಕೇಳ್ವಂ ॥ ೬೨ ॥

ವ॥ ಇಂತು ಕೇಳ್ದನಂತರಂ:—

ಮುಡಿಸಿದ ಕೈಬೆರಳಗ್ರದೆ।
ಪಿಡಿದು ಸ್ಫಟಿಕಾಕ್ಷಮಾಲೆಯಂ ಕಷ್ಟದೆ ತಾಂ॥
ನುಡಿಯಲ್ ತೊಡಗಿದಳದ್ರಿಜೆ।
ತಡೆದೆನಿತೋ ಪೊಳ್ತನೀ ತೆರದೊಳತಿಮಿತಿಯಿಂ ॥ ೬೩ ॥

ಶ್ರುತಿವಿದ್ವರ ನಿನ್ನಿಂದಂ।
ಶ್ರುತಮಿದು ನಿಜಮಿೂ ಜನಕ್ಕಪೇಕ್ಷಿತಮುತ್ಕೃ॥
ಷ್ಟತಪದಸಂಪ್ರಾಪ್ತಿ ತಪಃ।
ಕೃತಿಸಾಧ್ಯಮುದಲ್ತೆ ಬಯಕೆಗವಿಷಯಮೊಳದೇ ॥ ೬೪ ॥

ವ॥ ಪಾರ್ವತಿಯಿಂತು ಹೃದ್ಗತಮಂ ತಿಳುಪೆ:—
ಅರಿದಿರ್ಪೆ೯ಂ ಹರನಂ ನೀಂ।
ಮರಳ್ದುಮುವನಾಶೆಯಾಂತೆ ತಿಳಿದು ತದಶುಭಾ॥
ಚರಣಪ್ರಿಯುನಂ ನಿನ್ನನು।
ಸರಣಕ್ಕನುಮತಿಸಲಾರೆನೆಂದಂ ವಿಪ್ರಂ ॥ ೬೫ ॥

ಪರಿಣಯಸೂತ್ರಯುತಂ ತ್ವ ।
ತ್ಕರಮಿದು ಮೊದಲಭವನುರಗವಲಯಾನ್ವಿತದಿಂ ॥
ಕರದಿಂ ಪಿಡಿವುದ ಸಹಿಸುವ ।
ಪರಿಯಂತತಿಹೀನವಸ್ತುಗೆಳಸಿದ ತನ್ವೀ ॥ ೬೬ ॥

ಅರಸಂಚೆಯ ಚಿಹ್ನದೆ ತೊಂ ।
ಮೆರೆವ ವಧೂವಸ್ತ್ರಮರುಣಬಿಂದುವ ಸುರಿವಾ ॥
ಕರಿಚರ್ಮಮಿವೆರಡೆಂದುಂ ।
ಸರಿಗೂಡಲ್ತಕ್ಕುವೇನಣಂ ಯೋಚಿಸು ನೀಂ ॥ ೬೭ ॥

ವರಗೃಹದೆ ಪರೆಪಿದಲರೊಳ್ ।
ಚರಿಸುವ ನಿನ್ನಯ ಸುರಾಗರಂಜಿತಪದದಾ ॥
ಕುರುಪಂ ಶವಕೇಶಾನ್ವಿತ ।
ಪರೇತಧರೆಯಲ್ಲಿ ನೋಡಲಿಚ್ಛಿಸನರಿಯುಂ ॥ ೬೮ ॥

ತ್ರಿಣಯನ ವಕ್ಷಂ ಸುಲಭಮ ।
ದೆನಿಸಿದೊಡಂ ನಿನಗೆ ಮಸಣಬೂದಿಗೆ ಹರಿಚಂ ॥
ದನಪದಕುಚಯುಗಮಿದು ನೆಲೆ ।
ಯೆನಿಪುದು ಪೇಳಿದರಿನನ್ಯಮನುಚಿತಮುಂಟೇ ॥ ೬೯ ॥

ಮೊದಲೆ ಪರಿಹಾಸಮಿನ್ನೊಂ ।
ದೊದಗುಗುಮಿಭರಾಜವಾಹನಾರ್ಹಳೆನಿಪ ನೀಂ ॥
ಮುದುವೆಯುದಾದೊಡನೇರುವ ।
ಮುದಿಯೆತ್ತಂ ನೋಡಿ ನಗುವರಲ್ತೇಂ ಸುಜನರ್ ॥ ೭೦ ॥

ಜನಿಸಿದುದು ಶೋಚನೀಯತೆ ।
ಪಿನಾಕಿಸಂಪ್ರಾಪ್ತಿಗೆಳಸಿದೆರಡರ್ಕೀಗಳ್ ॥
ಮಿನುಗುವ ಶಶಿಯಾ ಕಳೆಗಂ ।
ಜನತೆಯ ನೇತ್ರಕ್ಕೆ ಜೊನ್ನಮೆನಿಸಿದ ನಿನಗಂ ॥ ೭೧ ॥

ತನುವೊ ವಿರೂಪಾಕ್ಷಿಗಳೆಡೆ ।
ಜನನಮುದಜ್ಞಾತಮುರುಪುವುದು ದಿಗ್ವಸನಂ ॥
ಧನಮುಂ ವರರಲ್ಲರಸುವ ।
ಗುಣವೊಂದುಂ ಹರನೊಳುಂಟೆ ಬಾಲಮೃಗಾಕ್ಷೀ ॥ ೭೨ ॥

ಮರಳಿಸು ಚಿತ್ತಮನೀವಿಧ ।
ಮರೀಪ್ಸಿತದಿನೆಲ್ಲಿ ಪೂತೆ ನೀನಾ ಮಲಿನಾ ॥
ಕರನೆಲ್ಲಿ ಮಸಣಸೂಲಕೆ ।
ವರವೈದಿಕಯೂಪಪೂಜೆಗೆಯ್ವರೆ ಸುಜನರ್ ॥ ೭೩ ॥

ನುಡಿವಿನಮಿಂತು ವಿರೋಧದ ।
ನುಡಿಯುಂ ದ್ವಿಜನಾಗಳಾಂತಕೋಪದೆ ತುಟಿಗಳ್ ॥
ನಡುಗೆ ನಿಡುವುರ್ಬು ಗಂಟಿಡೆ ।
ಕಡೆಗೆಂಪಿನ ಕಣ್ಣನಗಜೆ ತಿರುಗಿಸುತುಂ ತಾಂ ॥ ೭೪ ॥

ಒರೆದಳವಂಗೀಶನ ನಿಜ ।
ವರಿಯದೆ ನೀನಿಂತು ನನಗುಸುರ್ದಪೆ ಮಹಿತಾ ॥
ತ್ಮರ ಚರಿತಮನೂಹ್ಯಮನಿ ।
ತರಸಾಮಾನ್ಯಂ ವಿರೋಧಿಸುಗುಮದನಲ್ಪರ್ ॥ ೭೫ ॥

ವೃ॥

ಎಡರೆಡೆಗೊಳ್ಪುದಂ ಕಳೆದುಕೊಳ್ವುದಕೆಂದೊ ಸುಸಂಪದಂಗಳಂ ।
ಪಡೆವುದಕೆಂದೊ ಸೇವಿಸುಗುಮುಲ್ತೆ ಜನಂ ಮಿಗೆ ಮಂಗಳಂಗಳಂ ॥
ಒಡರಿಸುತಾಶೆಯುಂ ಹೃದಯವೃತ್ತಿಯನೇ ಕೆಡಿಪೀ ಶುಭಂಗಳಿಂ ।
ಪಡೆಯುವುದಾವುದೋ ನಿರಭಿಲಾಷೆಯ ಲೋಕಶರಣ್ಯಶಂಕರಂ ।೭೬

ವ|| ಇಂತುಮಲ್ಲದೆ—

ಬಡವನೆನಿಸಿರ್ದ ಸಿರಿಯುಂ ।
ಕುಡುವಂ ಮಸಣದೊಳೆ ವಾಸಿಸುತ್ತಂ ಲೋಕ ॥
ಕ್ಕೊಡೆಯುಂ ಭೀಮಾಕೃತಿಯುಂ ।
ಪಡೆದುಂ ಶಿವನೆನಿಪನವನ ನಿಜವರಿದವರಾರ್ || ೭೭ ||

ಉರಗಮನೊ ಭೂಷಣಮನೋ ।
ಕರಿಚರ್ಮಮನೋ ದುಕೂಲಮನೊ ಕಮಲಜನಾ ||
ಶಿರಮನೊ ಪೆರೆಯನೊ ಧರಿಸುವ ।
ನರಿಯಲಸಾಧ್ಯಮುದು ವಿಶ್ವಮೂರ್ತಿಯ ಪರಿಯುಂ || ೭೮ ||

ಪರಿಪೂತಮುಕ್ಕುಮಾಶಂ ।
ಕರಸಂಗಮನಂಟೆ ಚಿತೆಯ ಭಸ್ಮಂ ನಿಸದಂ ||
ಧರಿಸುಗುಮುತ್ತೇಂ ವಿಬುಧರ್ ।
ಶಿರದೊಳದಂ ತಾಂಡವಾಭಿನಯವಿಚ್ಯುತಮುಂ || ೭೯ ||

ಮದದಿಗ್ಗಜವಾಹನಸುರ ।
ಪದವಿಭು ತಲೆವಾಗಿ ಪುಲ್ಲಮಂದಾರಪರಾ ||
ಗದೆ ಕೆಂಪಾಗಿಸುವಂ ವೃಷ ।
ಭದೆ ಗಮಿಪಾ ಬಡವನಡಿವೆರಳ್ಗಳನರಿಯೈ || ೮೦ ||

ವೃ||

ಚ್ಯುತಮತಿಯಾಗಿ ದೋಷಮನೆ ಪೇಳ್ವುದಕಿಚ್ಛಿಸುತಿರ್ಪ ನೀನುಮಾ ।
ಶಿತಿಗಲನುದ್ಭವಂ ತಿಳಿಯದೆಂಬ ಸುವಾಕ್ಯಮುದೊಂದನಾಡಿದೈ ||
ಶ್ರುತಿವಿದರಾತ್ಮಯೋನಿಗಮದಾವನ ಕಾರಣನೆಂದು ಪೇಳ್ವರೋ ।
ಸುತಸುಚರಿತ್ರನಾ ಶಶಿವಿಭೂಷನ ಜನ್ಮಮದೆಂತು ಗೋಚರಂ ||೮೧||

ವ|| ಇಂತೆಂದೊರೆದಾ ಗಿರಿರಾಜನಂದಿನಿ ಮತ್ತಂ—

ಕಲಹಂ ಸಾಕು ಶಿವಂ ನೀಂ ।
ತಿಳುಪಿದ ತೆರದಿಂದಮಿರ್ಕೆ ಭಾವೈಕರಸಾ ।
ಕಲಿತಂ ಮನ್ಮನಮುವನೊಳ್ ।
ನೆಲಸಿದುದೆಣಿಸುವರೆ ನಿಂದ್ಯಮಂ ಕಾಮಚರರ್ || ೮೨ ||

ಸ್ಫುರಿತಾಧರವಟುವೀತಂ ।
ಮರಳ್ದುಂ ಮಾತಾಡಲೆಳಪನಾಳಿಯೆ ತಡೆ ನೀಂ ||
ಪರತರಪೂಜ್ಯರ ನಿಂದಿಸು ।
ವರಲ್ಲದೆಯೆ ಕೇಳ್ವ ಜನಮುಮೊಂದುಗುಮಘಮಂ || ೮೩ ||

ವ|| ಇಂತೆಂದು ಮತ್ತಮಿರದೆ:—

ಬಿಡು ನಾನೇ ಪೋಪೆಂ ಬೇ ।
ರೆಡೆಗೆನುತುಂ ಬಾಲೆ ಜಾರುತಿರೆ ಕುಚವಸನಂ ||
ನಡೆಯೆ ವೃಷಧ್ವಜನಾಕೆಯ ।
ತಡೆದಂ ನಸುನಗುತೆ ತೋರಿ ನಿಜರೂಪವ ತಾಂ || ೮೪ ||

ವ|| ಆ ಸಮಯದೊಳ್:—

ಮೃಡನಂ ಕಂಡು ನಡುಗಿ ಬೆಮ ।
ರಿಡಿದಂಗದ ಗೌರಿಯೆತ್ತಿತಡಿಯುಂ ಪಥದೊಳ್ ||
ತಡೆಯೆ ನಗಂ ವ್ಯಾಕುಲತೆಯ ।
ಪಡೆಯುವ ನದಿಯಂತೆ ಪೋಗಳಲ್ಲಿಯೆ ನಿಲ್ಲಳ್ || ೮೫ ||

ಲಲಿತೆ ನಿನಗಿಂದು ಮೊದಲಾ ।
ನಲಘುತಪಃಕ್ರೀತದಾಸನೆನೆ ಶಿವನಾಗಳ್ ||
ಉಳಿದಳ್ ತಪದಳಲನವಳ್ ।
ಫಲದಿಂದಂ ಮರಳ್ದು ಪೊಸತೆನಿಸದೇಂ ಕ್ಲೇಶಂ || ೮೬ ||

ಫಲೋದಯನಾಮಕ ಪಂಚಮಸರ್ಗಂ

— ಸಂಪೂರ್ಣಂ —

ಷಷ್ಠಸರ್ಗಂ.

ವ|| ದೇವದೇವಾನುಗ್ರಹಾನಂತರದೊಳ್:—

ಕಂ|| ಗಿರಿಕುಲನಾಥಂ ನನ್ನಂ |
ನೆರೆ ದಾನಂಗೆಯ್ವನಾತನನೆ ಯಾಚಿಪುದೆಂ ||
ದರುಪಲ್ಕೆ ಗೌರಿ ರಹದೊಳ್ |
ಪರಮಾತ್ಮನ ಬಳಿಗೆ ಕಳುಪಿದಳ್ ನಿಜಸಖಿಯಂ || ೧ ||

ಕೆಳದಿಯಿನಿಂತು ತಿಳುಪಿ ಧವ |
ನೊಳಳ್ತಿವಟ್ಟಗಜೆಯೊಪ್ಪಿದಳ್ ತಾಂ ಪೆಣ್ಗೋ ||
ಗಿಲೆಯಂ ಕೂಗಿಸುತಂ ಮಧು |
ವೊಳೊಲ್ದ ವರಚೂತಯಷ್ಟಿಯವೊಲಂತಿಕದೊಳ್ || ೨ ||

ಅಂತೆಯೆ ಮಾಡುವೆನೆಂದಾ |
ಕಂತುಹರಂ ಪೇಳ್ದದೆಂತೊ ಕಷ್ಟದೆ ಗೌರೀ ||
ಚಿಂತೆಯನುಳಿಯುತೆ ತೇಜನು |
ನಾಂತೆಸೆವಾ ಸಪ್ತಋಷಿಗಳಂ ಚಿಂತಿಸಿದಂ || ೩ ||

ವ|| ಇಂತು ಚಿಂತಿಸಿದ ಕ್ಷಣದೊಳ್:—

ಸುರಪಥಮಂ ನಿಜಕಾಂತಿನಿ |
ಕರದಿಂ ಬೆಳಗಿಸುತರುಂಧತಿಯನೊಡಗೊಂಡಾ ||
ಪರಮತಪೋಧನರಾ ಪ್ರಭು |
ವರನಿದಿರೊಳ್ತ್ವರಿತದಿಂದೆ ನೈದೋರ್ದರ್ ತಾಂ || ೪ ||

ವ|| ವೈದೋರ್ದ್ಧ ಋಷಿವರರದೆಂತಿರ್ದರೆನೆ:—

ಉರುತಟಸುರಕುಜದಲರ್ಗಳ ।
ಸುರೆ ಚಿಮ್ಮುವ ವೀಚಿಮಾಲೆಯೊಳ್ ನೋಣಾಶಾ ||
ಕರಿಮದಗಂಧದೊಳೊಪ್ಪುವ ।
ಸುರಸರಣಿಸರಿತ್ಪ್ರವಾಹದೊಳ್ ಮಿಂದಿರ್ದರ್ || ೫ ||

ಪೊಸಮುತ್ತಿನ ಜನಿವಾರಂ ।
ಮಿಸುನಿಯ ವಸ್ತ್ರಂ ಸುಮಣಿಯ ತಾವಡಮುಂ ಶೋ||
ಭಿಸೆ ವನ್ಯಾಶ್ರಮವೊಂದು ।
ತ್ತೆಸೆವಾ ಸುರತರುಗಳಂತೆ ರಾಜಿಸುತಿರ್ದರ್ || ೬ ||

ವ|| ಇಂತಿರ್ದ್ದಿವರ ಮಹಿಮೆಯುದೆಂತೆನೆ:—

ಬಾಗಿರೆ ಪತಾಕೆ ಕೆಳಗಣ ।
ಭಾಗದೆ ವಾಜಿಗಳ ನಡೆಸುವಾ ರವಿ ತಾನೇ ||
ಬಾಗಿ ನಮಿಸುತ್ತೆ ನೋಲ್ಪಡೆ ।
ಗಾಗಿಸಿದಕ್ಷಿಗಳಿನೀಕ್ಷಿಸುಗುಮಿವರಂ ತಾಂ || ೭ ||

ವ|| ಇಂತು ಸೂರ್ಯಭಗವಂತನಿಗಂ ಪೂಜ್ಯರಾಗಿರ್ದು ಮತ್ತಂ:—

ಪ್ರಳಯಾಂತದೊಳ್ ವರಾಹಂ ।
ಸಲೆದಾಡೆಯೊಳೆತ್ತೆ ಭುಜದಿನದನಪ್ಪಿದ ಭೂ ||
ಲಲನೆಯೊಡನಾ ಸುದಂಷ್ಟ್ರದ ।
ನೆಲೆಯೊಳ್ ವಿಶ್ರಾಂತರಾಗಿ ತಾಂ ಕಣ್ಗೊಳಿಕುಂ || ೮ ||

ಸರಸಿಜಗರ್ಭನನಂತರ ।
ಮುರೆ ತತ್ಸರ್ಗಾವಶೇಷಪೂರ್ಣತೆಯುಂ ತಾಂ ।
ವಿರಚಿಸಿ ಪುರಾಣವಿದರಿಂ ।
ಪುರಾತನಬ್ರಹ್ಮರೆಂದು ಪೊಗಳಿಸಿಕೊಳ್ಳ್ಗುಂ || ೯ ||

ಭವಭವದೆ ಗೈದ ಪರಿಪಾ ।
ಕವನೊಂದಿದ ವಿಮಳತರತಪಂಗಳ ಫಲಮಂ ॥
ತನೆ ಭೋಗಿಸುತುಂ ಮತ್ತೆ ತ ।
ಪನ ಬಿಡದಂತೆಸಗುತುಂ ವಿರಾಜಿಸುತಿರ್ಕುಂ ॥ ೧೦ ॥

ವ॥ ಈ ದೃಶಮಹಿಮಾನ್ವಿತರಾಗಿ ಮುನಿಪುಂಗವರಿರೆ:—

ಇಂತಿರ್ಪವರ ನಡುವೆ ನಿಜ ।
ಕಾಂತಾಂಘ್ರಿಸಮರ್ಪಿತೇಕ್ಷಣದ ಪತಿಭಕ್ತಿ ॥
ಸ್ವಾಂತೆಯರುಂಧತಿಯಾಕೃತಿ ।
ಯಾಂತ ತಪಃಫಲದ ಮಾಳ್ಕೆಯಿಂ ಕರಮೆಸೆದಳ್ ॥ ೧೧ ॥

ಹರನೀಕ್ಷಿಸಿದನವಳನಾ ।
ವರಮುನಿಗಳುಮಂ ಸಮಾನಗೌರವದಿಂ ಸಂ ॥
ತರ ಚರಿತಮೆ ಸಂಪೂಜ್ಯಮು ।
ದಿರದು ಸ್ತ್ರೀಪುಂಸಭೇದಮೆಂಬುದು ನಿಸದಂ ॥ ೧೨ ॥

ಪಿರಿದಾಯ್ತು ಸತಿಯ ಪಡೆವಾ ।
ದರಮುಭವಂಗಾ ಅರುಂಧತಿಯ ದರ್ಶನದಿಂ ॥
ಪರಿಕಿಸೆ ಧರ್ಮಾಚರಣೆಗೆ ।
ವರಪತ್ನೀಜನಮೆ ಮೂಲಕಾರಣಮಲ್ತೇಂ ॥ ೧೩ ॥

ಅಗತನುಜೆಗಾಗಿ ಶಿವನೀ ।
ಬಗೆಯಿಂದಂ ಧರ್ಮಮಾರ್ಗಪಲ್ಲಡಿಯಿಡೆ ತಾಂ ॥
ಮೊಗದೋರಿತು ಜನನೇಷ್ಟಂ ।
ಬಗೆಯೊಳ್ ಪೂರ್ವಾಪರಾಧಭೀತಸ್ಮರನಾ ॥ ೧೪ ॥

ಬಳಿಕಂ ಪ್ರೀತಿಯೊಳಂಗದೆ ।
ಪುಳಕಂಗಳ್ ಮೂಡೆ ತಜ್ಜಗದ್ಗುರುವಂ ತಾಂ॥
ಸಲೆ ಪೂಜಿಸಿ ಸರ್ವರ್ ಮುನಿ ।
ತಿಲಕರ್ ವೇದಪ್ರವಕ್ತೃಗಳ್ ನುಡಿದರಿದಂ ॥ ೧೫ ॥

ವ॥ ನುಡಿದ ನುಡಿಯುದೆಂತೆನೆ:—

ಸಲೆ ವೇದವನೋದಿದ ಮೇಣ್ ।
ಜ್ವಲನಂಗುರಿ ಹವಿಯನಿತ್ತ ತಪಮುಂಗೈದಿ ॥
ರ್ದಲಘುತರಫಲಮುದೆಲ್ಲಂ ।
ಫಲಿಸಿದುದೀ ಸಮಯದಲ್ಲಿ ನಮಗೆಲೆ ಗಿರಿಶಾ ॥ ॥ ೧೬ ॥

ಭುವನತ್ರಯದಧ್ಯಕ್ಷನೆ ।
ಭವದೀಯಂ ಚಿತ್ತಮೋ ಮನೋರಥಕದು ತಾ ॥
ನವಿಷಯಮೆನಿಪುದು ನಮ್ಮಂ ।
ತವೆ ನೀನಾ ಹೃದಯದೆಡೆಯೊಳಿರಿಸಿದೆಯಲ್ತೇಂ ॥ ೧೭ ॥

ಅನಘನೆ ನೀನಿರ್ಪೆಯದಾ ।
ವನ ಮನದೊಳವನೆ ಧನ್ಯತಮನೆನೆ ಶ್ರುತಿಕಾ ॥
ರಣನಾಗಿ ತೊಳಪ ನಿನ್ನಯ ।
ಮನದಲ್ಲಿರ್ಪವನ ವಿಷಯಮಂ ಪೇಳ್ವುದದೇಂ ॥ ೧೮ ॥

ರವಿಶಶಿಗಳಿನುನ್ನತಮೆನಿ ।
ಸುವ ತಾಣದೊಳೈದೆ ವಾಸಿಪೆವು ವಲಮೀಗಳ್ ॥
ತವೆ ಪೊರ್ದಿದೆವತ್ಯುಚ್ಚಪ ।
ದವ ನಮ್ಮಂ ನೆನೆದ ನಿನ್ನನುಗ್ರಹದಿಂದಂ ॥ ೧೯

ಘನವಂತರೆಂದು ನಮ್ಮಂ ॥
ಗಣಿಸೆವು ನೀನಿತ್ತ ಗೌರವದೆ ಬಹುತರದಿಂ ||
ಜನಿಯಿಸುಗುಮಲ್ತೆ ತಾಂ ಸ ।
ಜ್ಜನದಾದರಮಾತ್ಮಗುಣದೊಳುರೆ ನಂಬುಗೆಯುಂ ॥ ೨೦ ॥

ತ್ರಿಣಯನ ಸೀನುರೆ ನಮ್ಮಂ ।
ನೆನೆದುದರಿಂದೆಮ್ಮೊಳೊಗೆದ ಸಂಮೋದಮನಾವ್ ॥
ನಿನಗಿನ್ನೇಕೊರೆವುದದಂ ।
ತನುಭೃದ್ಗಣದಂತರಾತ್ಮನೇ ನೀನಲ್ತೇ ॥ ೨೧ ॥

ನೀನೆಮ್ಮ ಕಣ್ಗೆ ಕಂಡೊಡ ।
ಮೇನಪ್ಪುದು ತಿಳಿಯುದೆಮಗೆ ನಿನ್ನಯ ನಿಜವೇ ॥
ನೀನೇ ಕರುಣಿಸಿ ಪೇಳ್ವುದ ।
ದೇನೆಂಬುದ ಮತಿಗಗೋಚರಂ ನೀಂ ಶಿವನೇ ॥ ೨೨ ॥

ಕಾಣುವ ನಿನ್ನಯ ಮೂರ್ತಿಯಿ ।
ದೇನೀ ನಿಖಿಲಪ್ರಪಂಚಮಂ ಸೃಜಿಸುವುದೋ ॥
ಮೇಣದನೇಂ ರಕ್ಷಿಸುವುದೊ ।
ತಾನದ ಸಂಹರಿಪುದೋ ನಿರೂಪಿಸೆಮಗಿದಂ ॥ ೨೩ ॥

ಅತಿಗುಹ್ಯಮೆನಿಸಿದೀ ಪ್ರಾ ।
ರ್ಥಿತವಿಷಯಂ ಪೋಕೆ ದೇವ ನಿನ್ನಿಂದಂ ಚಿಂ ॥
ತಿತರಾಗಿ ಬಂದ ನಮ್ಮಯ ॥
ಕೃತಿಯಾವುದು ಮಾಳ್ಪುದದನೆ ನೀಂ ಬೆಸಸೀಗಳ್ ॥ ೨೪ ॥

ತದನಂತರದೊಳ್ ಮೌನಿಯ ।
ಬಿದುವ ತನುಪ್ರಭೆಯ ತನ್ನ ವಿಶದಮೆನಿಸಿದಾ ॥
ರದನಾಂಶುಗಳುರೆ ವರ್ಧಿಸೆ ।
ಸದಪಿಂ ಮಾರ್ನುಡಿದನಿಂತು ತತ್ಪರಮೇಶಂ ॥ ೨೫ ॥

ಮುನಿವರರೇ, ಸ್ವಾರ್ಥಂಗಳ್ ।
ನನಗಾವವು ಕೃತಿಗಳಿಲ್ಲ ನಿಮಗಿದು ವಿದಿತಂ ॥
ತನುವೆಂಟುಂ ನನ್ನ ಪರಾ ।
ರ್ಥನಿಮಿತ್ತ್ಯಸ್ಥಿತಿಯ ಸೂಚಿಸುಗುಮಲ್ತೇಂ ತಾಂ ॥ ೨೬ ॥

ಪರಹಿತದೆನ್ನಂ ಬೇಡಿದು ।
ದರಿಪೀಡಿತಸುರಕುಲಂ ಸುತೋತ್ಪಾದನಮಂ ॥
ಎರೆವಂತಿರೆ ತಾಂ ತೃಷ್ಣಾ ।
ತುರಚಾತಕನಿಕರಮಂಬುಧರಮಂ ಮಳೆಯಂ ॥ ೨೭ ॥

ಅದರಿಂದಾತ್ಮಜನಂ ಪಡೆ ॥
ವುದಕಗಜೆಯ ಸಂಗ್ರಹಣಮನಿಚ್ಛಿಸುವೇಂ ಯಾ ।
ಗದ ಕರ್ತೃವಗ್ನಿಯಂ ಪಡೆ ।
ವುದಕರಣಿಯ ಸಂಗ್ರಹಿಪುದನೆಳಸುವ ತೆರದಿಂ ॥ ೨೮ ॥

ನನಗೆಂದುಮೆಯಂ ಹಿಮವಂ ।
ತನ ಬಳಿಯಂ ಪೊರ್ದಿ ಯಾಚಿಪುದು ನೀಮವನಂ ॥
ಜನಿಪುದೆ ವೈಕಲ್ಯಂ ಸ ।
ಜ್ಜನದಿಂ ಸಂಘಟಿತಮಾದ ಸಂಬಂಧದೊಳಂ ॥ ೨೯ ॥

ಅತಿಶಯಸಮುನ್ನತಂ ಮೇಣ್ ।
ಸ್ಥಿತಿವಂತಂ ಭೂಧುರಂಧರಂ ತಾನೆನಿಪಾ ॥
ಕ್ಷಿತಿಧರನಾಥನೊಡನೆ ಬಂ ।
ಧುತೆಯೊಂದಿದ ನಾನವಂಚಿತಂ ತಿಳಿಯಿರಿದಂ ॥ ೩೦ ॥

ಮಗಳಂ ಬೇಡುವ ವಿಷಯದೆ ।
ನಗಪತಿಯೊಡನೊರೆವ ನುಡಿಯ ನುಡಿಯೇಂ ನಿಮಗಾಂ ॥
ಮಿಗೆ ಬೋಧಿಪರಲ್ತೇಂ ಸಾ ।
ಧುಗಳಾ ಆಚಾರಮಂ ಭವದ್ವಿರಚಿತಮಂ ॥ ॥ ೩೧ ॥

ಕೃತಿಗಿದಕಾರ್ಯಗಳೆನಿಪರುಂ ।
ಧತಿಯುಂ ತಾಂ ಸಾಯುಗೆಯ್ಯಲರುಹಳೆನಿಸುವಳ್ ॥
ಚತುರತ್ವಮದೀ ವಿಧ ಸ ।
ತ್ಕೃತಿಯಲ್ಲಿ ಪುರಂಧ್ರಿಯರ್ಕಳೊಳ್ ಮಿಗೆ ತೋರ್ಕುಂ ॥ ೩೨ ॥

ವ। ಇಂತಿರ್ಪ ಕತದಿಂದೀ ಸಮಯದೊಳ್:—

ಲಲಿತರಗಳೆ:—

ಆಶಿಸಿದ ಕಾರ್ಯಸಿದ್ಧಿಗೆ ಹಿಮಾಲಯನಾ ।
ಓಷಧಿಪ್ರಸ್ಥಪಟ್ಟಣಕೆ ಪೋಪುದು ನೀವ್ ॥
ತೋಷದಿಂ ಮರಳ್ದು ಕೂಡುವೆಡೆ ನೋಡೆ ಮಹಾ ।
ಕೋಶಿಯೆಂಬೀ ನದಿಯ ಸುಪ್ರಪಾತಮಿದೇ ॥ ೩೩ ॥

ವ॥ ಇಂತೊರೆವಿನಂ:—
ಆದಿಯ ಯೋಗಿಯೆನಿಸಿದಾ ।
ಮಾದೇವಂ ಮದುವೆಯುಳ್ತಿಯಿಂತೊಂದೆ ಸರೋ ॥
ಜೋದರಜಾತರವರ್ ತನು ।
ಗಾದ ಸತೀಗ್ರಹಣಲಜ್ಜೆಯುಂ ತ್ಯಜಿಸಿರ್ದರ್ ॥ ೩೪ ॥

ಬಳಿಕಮಿದಕ್ಕನುಮತಿಯುಂ ।
ತಳೆದಾ ಮುನಿಮಂಡಲಂ ತೆರಳ್ದುದು ಮೊದಲೇ ॥
ಸಲೆ ಸಂಕೇತಮನೆಸಗಿದ ।
ನೆಲೆಯುಂ ಭಗವಂತನುಂ ಬಿಡದೆ ತಾಂ ಸಾರ್ದಂ ॥ ೩೫ ॥

ಮುನಿಕುಲತಿಲಕರವರ್ಗಳ್ ।
ಮನೋಗತಿಯ ವೇಗದಿಂದಮುಸಿನೀಲಮನಾ ॥
ಘನಪಥಮನೇರಿ ಹಿಮಮಂ ।
ತನ ನಗರಿಯನಿರದೆ ಪೊರ್ದಿದರ್ ತಾವಾಗಳ್ ॥ ೩೬ ॥

ವ|| ಅಗಪತಿಯ ನಗರಿಯದೆಂತು ಬಗೆಗೊಳುತಿರ್ದುದೆನೆ—

ಕಂ|| ಧನದ ಸಮೃದ್ಧಿಗೆ ನೆಲೆವನೆ।
ಯೆನಿಪಲಕಾಪುರವ ಕಿತ್ತು ತಂದಿರಿಸಿದರೆಂ ||
ದೆನೆ ತುಂಬೆ ಸಗ್ಗಮುಳಿದಾ।
ಜನಮುಂ ತಂದಿಲ್ಲಿ ಬಿಟ್ಟರೋ ಎನಲೆಸೆಗುಂ || ೩೭ ||

ವ|| ಮತ್ತಮಾ ಪಟ್ಟಣಂ—

ಬಳಸಿರೆ ಗಂಗಾಪೂರಂ।
ಜ್ವಲಿತೌಷಧಿನಿಕರವೊಪ್ಪೆ ವಪ್ರಾಂತರದೊಳ್ ||
ತೊಳತೊಳಗುತ್ತಿರೆ ಮಣಿಶಿಲೆ।
ಗಳ ಸಾಲಂ ಹೃದ್ಯಮಾಯ್ತು ಸಂವರಣದೊಳಂ || ೩೮ ||

ಕರಿಗಳ್ ಕೇಸರಿಭಯಮುಂ।
ತೊರೆದಿರ್ಕುಂ ಬಿಲದೆ ಪುಟ್ಟುಗುಂ ತುರಗಂಗಳ್ ||
ಪುರಜನರೊ ಯಕ್ಷರುಂ ಕಿಂ।
ಪುರುಷರ್ ವನೆದೇವತೆಗಳೆ ವನಿತೆಯರದರೊಳ್ || ೩೯ ||

ಜಲದಾಸಕ್ತಶಿಖರಯುತ।
ನಿಲಯಪ್ರತಿಗರ್ಜಿತಂಗಳಾಗಿಸೆ ಮುರಜಂ |
ಗಳ ರವದ ಸಂಶಯಮುನದ |
ತೊಲಗಿಸುಗುಂ ತಾಳತಾಡನಂ ತತ್ಪುರದೊಳ್ || ೪೦ ||

ವ|| ಇಂತುಮಲ್ಲದೆ—

ಪುರಜನದ ಯತ್ನಮಿಲ್ಲದೆ।
ಸುರತರುಗಳ್ ಚಲಿತವಿಟಪವಸನಂಗಳ್ ಮುಂ ||
ದಿರಯುಂತ್ರಧ್ವಜಶೋಭೆಯು |
ನುರೆ ನಿರ್ಮಿಸುತಿರ್ಕುಮಾ ಮಹೀಧರಪುರಿಯೊಳ್ || ೪೧ ||

ವ|| ಮತ್ತಮಾಪುರದಲ್ಲಿ:—

ಪಳುಂಕಿನ ಕರುಮಾಡಂಗಳ ।
ನಿಲಸಿತಪಾನಸ್ಥಲಂಗಳೋಳುಡುಗಳ ಮಾ ||
ರ್ಪೊಳಪುಗಳಿರುಳೊಳ್ ಪುಷ್ಪಂ ।
ಗಳ ಮೋಣ್ ಮುತ್ತುಗಳ ಸೊಬಗನಾಂತೆಸೆದಿರ್ಕುಂ || ೪೨ ||

ಜಲದಾವೃತಮಪ್ಪ ದಿನಂ ।
ಗಳ ರಾತ್ರಿಯೊಳೋಷಧಿ ಪ್ರಭೆಯೆ ತಾಂ ಮಾರ್ಗಂ ||
ಗಳನ್ನೈಸಲೆ ಬೆಳಗಿಸುತಿರೆ ।
ತಿಳಿಯರ್ ಕಳ್ತಲೆಯನಲ್ಲಿ ಕಾಂತಾರ್ಥಿನಿಯರ್ || ೪೩ ||

ಅಲ್ಲಿ ವಯಂ ತರುಣತೆಯುಳಿ ।
ದಿಲ್ಲಂ ಕುಸುಮೇಷುಗನ್ಯನೆನಿಸಿದ ಕಾಲಂ ||
ಇಲ್ಲಂ ದೀರ್ಘಸುಷುಪ್ತಿಯು ।
ದಿಲ್ಲಂ ರತಿಖೇದಜನಿತನಿದ್ರಾಭಿನ್ನಂ || ೪೪ ||

ಚಲಿಸೆ ತುಟಿ ಪುರ್ವು ಗಂಟಿಡೆ ।
ಲಲಿತಾಂಗುಳಿತರ್ಜನಂಗಳಿಂ ಮುಳಿದ ಸುಕೋ ||
ಮಳೆಯರ್ ಪ್ರಸನ್ನತೆಯ ತಾಂ ।
ತಳೆವನ್ನೆಗಮಪರನಲ್ಲಿ ಬೇಡುವರಿನೆಯರ್ || ೪೫ ||

ವ|| ಇಂತುಮಲ್ಲದೆ:—

ಸುರತರುಗಳೆಲ್ಲಿ ವಿದ್ಯಾ ।
ಧರಪಾಂಥರ್ ಪವಡಿಪುದಕೆ ನೆರಳೀವವೊ ಆ ||
ಸುರಭಿಯುತಗಂಧಮಾದನ ।
ಗಿರಿಯೋ ತತ್ಪುರದ ಬಾಹ್ಯಮುಪವನಮೆನಿಕುಂ || ೪೬ ||

ನೆರೆ ಕಂಡಿಂತಿರ್ಪಾ ಹಿಮ ।
ಗಿರಿವರ ಪಟ್ಟಣವ ದಿವ್ಯ ಮುನಿಗಳವರ್ ತಾಂ ॥
ಸುರನಗರೋದ್ದೇಶದೆ ಸಲೆ ।
ವಿರಚಿಪ ಪುಣ್ಯಂ ಸುವಂಚಕಮದೆಂದರಿದರ್ ॥ ೪೭ ॥

ವಿಲಿಖಿತ ವೈಶ್ವಾನರ ನಿ ।
ಶ್ಚಲಜಟೆಗಳಿನೆಸೆವ ಮುನಿಗಳವರಗಪತಿಯಾ ॥
ನಿಲಯದೊಳಿಳಿದರ್ ಜವದಿಂ ।
ಸಲೆ ಮೊಗವೆತ್ತೀಕ್ಷಿಸುತಿರೆ ಬಾಗಿಲದಾಳ್ಗಳ್ ॥ ೪೮ ॥

ಬಾನತ್ತಣಿನೈಸಲೆ ವೃ ।
ದ್ಧಾನುಕ್ರಮದಿಂದೆ ಮುಂದುವರಿದಿಳಿದ ಮುನಿ ॥
ಶ್ರೇಣಿಯದು ವಾರಿಸಂಗತ ।
ಭಾನುಪ್ರತಿಬಿಂಬಪಂಕ್ತಿವೊಲ್ ರಾಜಿಸುಗುಂ ॥ ೪೯ ॥

ವ॥ ಇಂತು ವಿರಾಜಿಸುತ್ತಿರೆ:—

ಪೊಡವಿಯ ಬಾಗಿಸುತುರುಬಲ ।
ದಡಿಗಳ ಭಾರದೆ ಗಿರೀಂದ್ರನರ್ಘ್ಯೋದಕಮಂ ॥
ಪಿಡಿದೈಸಲೆ ತಾಂ ದೂರಕೆ ।
ನಡೆತಂದಿದಿರ್ಗೊಂಡನಾ ಸುಪೂಜ್ಯ ಮುನಿಗಳಂ ॥ ೫೦ ॥

ಸುರತರುಬೃಹದ್ಭುಜಂ ಧಾ ।
ತುರಾಗಲಸದಧರನುನ್ನತಂ ಸಾಜದೊಳೇ ॥
ಸ್ಫುರಿತಶಿಲೋರಸ್ಕನುಮಾ ।
ಗಿರ್ಯುತ್ತಂ ಹಿಮವಂತನೆಂಬುದಂ ತಿಳಿಸುತೆ ತಾಂ ॥ ೫೧ ॥

ಗಿರಿರಾಜನವಂ ಕ್ರಮದಿಂ ।
ವಿರಚಿಸಿ ಸತ್ಕಾರಮಂ ಸುಪಥಮಂ ತಾನೇ ॥
ನೆರೆ ತೋರಿಸುತಾ ನಿರ್ಮಳ ।
ಚರಿತ್ರರಂ ಪುಗಿಸಿದಂ ನಿಜಾಂತಃಪುರದೊಳ್ ॥ ೫೨ ॥

ಅಲ್ಲಿ ಸುವೇತ್ರಾಸನದೊಳ್ ।
ಕುಳ್ಳಿರಿಸುತವ್ಯೆದೆ ತನ್ನುನೀಶ್ವರರಂ ತಾಂ ॥
ಕುಳ್ಳಿರ್ದೀ ವಿಧಮೆನಿಸಿದ ।
ಸೊಲ್ಲಂ ಕೈಮುಗಿದು ಪೇಳ್ದನಗವರನವರೊಳ್ ॥ ೫೩ ॥

ಅವಿತರ್ಕಿತೋಪಪನ್ನಂ ।
ಭವದೀಯಂ ದರ್ಶನಂ ಘನೋದಯರಹಿತಂ ॥
ನವವೃಷ್ಟಿಯಾಗಿ ಕುಸುಮೋ ।
ದ್ಭವಮಿಲ್ಲದ ಸುಫಲಮಾಗಿ ನನಗಿದು ತೋರ್ಕುಂ ॥ ೫೪ ॥

ಭವದೀಯಾನುಗ್ರಹದಿಂ ।
ದವಿವೇಕಂ ಜ್ಞಾನಿಯಾದವೋಲ್ ಕಾರ್ಬೊನ್ನಂ ॥
ತವೆ ಚಿನ್ನಮಾದವೋಲ್ ಮೋಕ್ಷ್ ।
ಭುವಿಯಿಂ ದಿವವೊಂದಿದಂತೆವೋಲಾದೇಂ ನಾಂ ॥ ೫೫ ॥

ಇಂದುಮೊದಲ್ ನಾಂ ಚೇತನ ।
ವೃಂದವ ಪರಿಶುದ್ಧಿಗೆಯ್ವ ತೀರ್ಥಮೆನಿಸಿದೇಂ ॥
ಬಂದು ಮಹಾತ್ಮರ್ ನಲವಿಂ ।
ನಿಂದೆಡೆಯೇ ತೀರ್ಥಮೆಂದು ಕಥಿಸುಗುಮಲ್ತೇಂ ॥ ೫೬ ॥

ಸಲೆ ತಿಳಿದೆನೆರಡರೊಳೆ ನಿ ।
ರ್ಮಳತನು ನಾನಾದೆನೆಂದು ವಿಪ್ರೋತ್ತಮರೇ ॥
ತಲೆಯೊಳ್ ಬೀಳುವ ಗಂಗಾ ।
ಜಲದೊಳ್ ಭವದೀಯಧೌತಪಾದಾಂಬುವೊಳಂ ॥ ೫೭ ॥

ಎರಡುಂ ಮುತ್ತನುಗಳ್ ಭವ ।
ದುರುಕರುಣೆಯ ಭಾಗವೆರಡನೊಂದಿದವೆಂಬೇಂ ॥
ಚರವಪು ನಿಮ್ಮಾಳ್ತನಮುನ ।
ಚರದೇಹಂ ಚರಣಚಿಹ್ನಮುಮನಾಂತುದರಿಂ ॥ ೫೮ ॥

ದಿಶೆಗಳ ಕೊನೆಯೊಳ್ ತಾಂ ವ್ಯಾ ।
ಪಿಸಿದೊಡಮೆನ್ನವಯುವಂಗಳಿವು ನೋಳ್ಪೊಡೆ ನೀ ॥
ಮೆಸಗಿದನುಗ್ರಹಮಿದು ಜನಿ ।
ಯಿಸಿದತಿಮುದವೊಂದುವುದಕೆ ಕಿರಿಯುವೆನಿಸುಗುಂ ॥ ೫೯ ॥

ದರಿಯ ತಮುಮಲ್ಲದೆನ್ನಂ ।
ತರದಾ ರಜಮುಂ ಬಳಿಕ್ಕೆ ತಮುಮುಂ ಭಾಸ್ವಂ ॥
ತರ ನಿಮ್ಮ ದರ್ಶನದೆ ತಾಂ ।
ಪರಿಹೃತನಾಯ್ತಲ್ತೆ ಪರಮಪೂತಚರಿತರೇ ॥ ೬೦ ॥

ಇರದಲ್ತೆ ನಿಮುಗೆ ಕಜ್ಜಮು ।
ದಿರೆಯುಂ ನೆರವೇರದಿರ್ಪುದೇಂ ತಾಪಸರೇ ॥
ಇರದೆನ್ನಂ ಪಾವನನಂ ।
ವಿರಚಿಸುವುದಕೆಂದೆ ನಿಮ್ಮ ಬರವಾಯ್ತೆಂಬೇಂ ॥ ೬೧ ॥

ಇದು ತಾನಿಂತಿರ್ದೊಡಮಾ ।
ವುದನಾದೊಡಮೊಂದ ಬೆಸಸಲರುಹರ್ ನೀಂ ಮಾ ॥
ಳ್ಪುದನೊರೆದೊಡೆ ಕಿಂಕರಜನ ।
ಕದೆ ತಮ್ಮ ಪ್ರಭುಗಳಿತ್ತನುಗ್ರಹಮಕ್ಕುಂ ॥ ೬೨ ॥

ಇದೊ ನಿಮ್ಮವನಾಂ ಸತಿಯಿವ ।
ಳಿದೊ ಕುಲಜೀವಿತದ ಕನ್ಯೆಯೀಕೆಯಿವರಿನ ॥
ಪ್ಪುದುಕಜ್ಜಮೇನದಿರದೊರೆ ।
ವುದು ಬಾಹ್ಯದ ವಸ್ತುವೆನಗದೇಯುಮೆ ಇಲ್ಲಂ ॥ ೬೩ ॥

ನುಡಿವಿನಮಿಂತುರೆ ಮೂರ್ನುಡಿ ।
ಗುಡುವ ಗುಹಾಮುಖದೆ ಪೂರ್ವಕಥಿತಾರ್ಥಮನೇ ॥
ಬಿಡದಂತಿರದನೆರಡು ಸೂಳ್ ।
ನಡೆ ವಚಿಸುವಸಂತೆ ಕಂಡನಾ ಹಿಮವಂತಂ ॥ ೬೪ ॥

ಬಳಿಕಮುದಾಹರಿಪರ್ಥಂ ॥
ಗಳೊಳಗ್ರೇಸರತೆಯೊಂದಿದಂಗಿರಸನನ್ನೈ ॥
ಸಲೆ ತಾಂ ಪ್ರೇರಿಸೆ ತನ್ಮುನಿ ।
ತಿಲಕರ್ ನಗಪತಿಗೆ ಪೇಳ್ದನವನೀ ತೆರದಿಂ ॥ ೬೫ ॥

ಒರೆದುದಿದೆಲ್ಲಮುಮಿದರಿಂ ।
ಪಿರಿದುಂ ನಿನ್ನಲ್ಲಿ ಕಾಣ್ದಪುದು ಗಿರಿರಾಜಾ ॥
ಸರಿಯಾದ ಸಮುನ್ನತಿಯುಂ ।
ಧರಿಸಿರ್ಕುಂ ನಿನ್ನ ಚಿತ್ತಮುಂ ಶಿಖರಂಗಳ್ ॥ ೬೬ ॥

ಒರೆಗುಂ ಸ್ಥಾವರರೂಪದ ।
ಹರಿಯೆಂದೇ ನಿನ್ನನಿದು ಸಮಂಜಸಮೆನಿಕುಂ ॥
ಧರಿಸಿರ್ಕುಮಲ್ತೆ ಸಚರಾ ।
ಚರಜಂತುಗಳಾಶ್ರಯತೆಯ ನಿನ್ನಯ ಜಠರಂ ॥ ೬೭ ॥

ಧರಣಿಗೆ ನೀಂ ಪಾತಾಳದ ।
ವರೆಗಂ ಪಾದಾವಲಂಬನಮನೆಸಗದೊಡಾ ॥
ಉರಗೇಂದ್ರಂ ಬಿಸಕೋಮಲ ।
ತರಫಣೆಗಳೊಳೆಂತು ಧರಿಸುಗುಂ ತದ್ಧರೆಯಂ ॥ ೬೮ ॥

ಅವಿಭಿನ್ನವಿಮಳಸಂತಾ ।
ನವನೊಂದುತೆ ಕಡಲ ತೆರೆಯ ತಡೆಯಿಲ್ಲದೆ ನಿ ॥
ನ್ನವು ತೀರ್ಥಗಳುಂ ನದಿಗಳ್ ।
ತವೆ ಲೋಕವ ಪಾವನಂಗೊಳಿಕುಮುಮುಳತೆಯಿಂ ॥ ೬೯ ॥

ಹರಿಚರಣದಿಂದೆ ಜನ್ಮವ ।
ಧರಿಸಿದ ಕತದಿಂದೆ ಗಂಗೆ ಸುತ್ಯಳೆನಿಸಿದಂ ||
ತಿರೆ ಮುರಳ್ವಂ ತಾನುನ್ನತ ।
ಶಿರಸ್ಕನಿಂ ನಿನ್ನಿನೊಗೆದು ಪೊಗಳಿಸಿಕೊಳ್ಗುಂ ॥ ೭೦ ॥

ಕೆಳಗಂ ಮೇಲೆಡಬಲಕಂ ।
ಸಲೆ ಪರ್ಬಿದ ಮಹಿಮೆ ಹರಿಗೆ ಮೂರಡಿಯಿಡುವಾ ॥
ಗಳೆ ಸಂಪ್ರಾಪ್ತಮೆನಿಸಿದುದು ।
ತಿಳಿವೊಡೆ ನಿನಗಿರ್ಕುಮುಲ್ತೆ ಸಾಜದೊಳದು ತಾಂ ॥ ೭೧ ॥

ಮಿಸುಪಧ್ವರಭಾಗವ ಭುಂ ।
ಜಿಸುವಮರರೊಳೆಡೆಯುಸಾಂತ ನಿನ್ನಿಂದಂ ಸಂ ॥
ಧಿಸಿತಲ್ತೇಂ ಮೇರುವಿನಾ ।
ಮಿಸುನಿಯ ಶೃಂಗದ ಸಮುನ್ನತಿಗೆ ವಿಫಲತ್ವಂ ॥ ೭೨ ॥

ಸ್ಥಿರದ ಕಳೇವರದೊಳ್ ನೀ ।
ನಿರಿಸುತ್ತುಂ ಪೂರ್ಣಕಠಿಣತೆಯ ಮೇಣ್ ನಿನ್ನೀ ॥
ಚರವಪುವೊಳ್ ಪೂಜ್ಯರ ಸ ।
ತ್ಕರಿಸುವ ಸದ್ಭಕ್ತಿನಮ್ರತೆಯನಿರಿಸಿದೆಯೈ ॥ ೭೩ ॥

ಅದರಿಂದಂ ನಮ್ಮಾಗಮ ।
ನದ ಕಾರ್ಯವ ಕೇಳು ನಿನ್ನದೇ ಅದು ಕಜ್ಜಂ ॥
ಪದಪಿಂ ಶ್ರೇಯಮ ನಿನಗೊರೆ ।
ವುದರಿಂದಿದರಲ್ಲಿ ಭಾಗವೆಮಗಣಮಿರ್ಕುಂ ॥ ೭೪ ॥

ಸ್ಫುರದಣಿಮಾದ್ಯಷ್ಟಗುಣಾ ।
ಕರನುಂ ಪುರುಷಾಂತರಾತಿದುರ್ಲಭಮೆನಿಪೀ ||
ಶ್ವರನೆಂಬುನ್ನತಪದದಿಂ ।
ನೆರೆ ಶೋಭಿಸುತಾವನರ್ಧಚಂದ್ರನ ಧರಿಕುಂ ॥ ೭೫ ॥

ಸರಣಿಯೊಳಶ್ವಂಗಳ್ ತಾಂ ।
ವರೂಥಮಂ ವಹಿಸುವಂತೆ ಸಂಕಲಿತಪರ ॥
ಸ್ಪರಸಾಮರ್ಥ್ಯದ ಭೂಮ್ಯಾ ।
ದ್ಯುರುತನುವಿಂ ಜಗವ ವಹಿಸಿ ರಾಜಿಪನಾವಂ ॥ ೭೬ ॥

ವರಯೋಗೀಂದ್ರರ್ ಭೂತೋ ।
ತ್ಕರಾಂತರಾತ್ಮನನದಾವನಂ ಬಿಡದುರೆ ತಾಂ ॥
ಅರಸುಗುಮಾವನ ಪದದೊಳ್ ।
ಮರುಭವದಂಜಿಕೆಯೆ ಇಲ್ಲನೆಂಬರೊ ವಿಬುಧರ್ ॥ ೭೭ ॥

ವರದಂ ತ್ರಿಭುವನಕರ್ಮನಿ ।
ಕರಸಾಕ್ಷಿಯುಮೆನಿಪ ಶಂಭುವವನೀಗಳ್ ತಾಂ ॥
ವರಿಸಲ್ಕೆಳಪಂ ನಿನ್ನ ಕು ।
ವರಿಯಂ ಕೇಳ್ ನಮ್ಮ ಮುಖದ ಮಾತುಗಳಿಂದಂ ॥ ೭೮ ॥

ಮುಡಿಯೊಡನರ್ಥಮನೆಂತಾ ।
ಮೃಡನೊಡನಾತ್ಮಜೆಯನಂತೆ ಯೋಜಿಸುವುದು ನೀಂ ॥
ಪಡೆದಾತಂ ಕನ್ಯೆಯ ತಾಂ ।
ಕುಡೆ ಸದ್ಭರ್ತೃವಿಗೆ ದುಃಖಕೆಡೆಯೆನಿಸುವನೇಂ ॥ ೭೯ ॥

ವ॥ ಇಂತುಮಲ್ಲದೆ:—

ಎನಿತಿರ್ಕುಂ ಸ್ಥಿರಚರಚೇ ।
ತನಜಾಲಮಿದನಿತಕಂ ಭವನ್ನಂದಿನಿಯೇ ॥
ಜನನಿಯೆನಿಸಿರ್ಕೆ ಸಕಲಾ ।
ವನಿಗಂ ತಾಂ ಜನಕನಲ್ತೆ ಚಂದ್ರವಿಭೂಷಂ ॥ ೮೦ ॥

ಸುರರೆಲ್ಲರ್ ಶಿತಿಕಂಠಂ ।
ಗೆರಗಿದ ಬಳಿಕಾತ್ಮಮೌಳಿಮಣಿಗಳ ಕಿರಣೋ ॥
ತ್ಕರದಿಂದಂ ತಾವಿೞಕೆಯು ।
ಚರಣಂಗಳ್ಗೆಸಗುತಿರ್ಕೆ ಮಿಗೆ ರಂಜನಮಂ ॥ ೮೧ ॥

ಕುಡುಗೂಸೀ ಪಾರ್ವತಿ ನೀಂ ।
ಕುಡುವವ ನಾಂ ಬೇಡುವರ್ ವರಂ ಪರಮೇಶಂ ॥
ಪಡೆದೀ ಸಾಮುಗ್ರಿಯೊಳೇಂ ।
ಪಡೆಯದೆ ಪೇಳ್ ನಿನ್ನ ವಂಶಮಧಿಕೋನ್ನತಿಯಂ ॥ ೮೨ ॥

ಪೊಗಳಿಸಿಕೊಳುತಮುದಾರಂ ।
ಪೊಗಳದೆ ಮೇಣ್ ನಮಿಸಿಕೊಳುತೆ ನಮಿಸದೆಯಿರ್ಪಾ ॥
ಜಗದೇಕಗುರುವಿಗಂ ಸಲೆ ।
ಮಗಳಂ ಕೊಡುವುದರಿನಿರದೆ ನೀಂ ಗುರುವಾಗಾ ॥ ೮೩ ॥

ಸುರಮುನಿವರನೀ ತೆರದಿಂ ।
ಜೊರೆವಿನಮಾಗೌರಿ ಪಿತನ ಪಕ್ಕದೊಳಾಗಳ್ ॥
ಶಿರಮಂ ಬಾಗಿಸಿ ಲೀಲಾ ।
ಸರಸಿಜಪತ್ರಂಗಳೆಣಿಕೆಗೆಯ್ಯುತ್ತಿರ್ದಳ್ ॥ ೮೪ ॥

ಬಗೆಗಿಚ್ಚೆ ಪೂರ್ಣಮಿರ್ದೊಡ ।
ಮುಗಪತಿ ತಾಂ ಮೇನೆಯಾನನವ ಪರಿಕಿಸಿದಂ ॥
ಬಗೆವೊಡೆ ಕನ್ಯಾರ್ಥದ ಕ ।
ಜ್ಜಗಳೊಳ್ ಗೃಹಿಗಳ್ಗೆ ಗೃಹಿಣಿಯರೆ ಕಣ್ಣಲ್ತೇಂ ॥ ೮೫ ॥

ಪತಿಗಭಿಮತಮೆನಿಸಿದಾ ।
ಕೃತಿಗೆಲ್ಲಕೆ ಮೇನೆಯುಂ ಸುಸಮ್ಮತಿಯಿತ್ತಳ್ ।
ಪತಿಭಕ್ತಿಶೀಲೆಯರ್ಗೇಂ ।
ಪ್ರತಿಕೂಲಮೆನಿಪ್ಪುದೇ ನಿಜಪ್ರಿಯುನಿಷ್ಟಂ ॥ ೮೬ ॥

ಮುನಿವಚನದನಂತರದೊಳ್ ।
ಮನದಲ್ಲಿದಕುತ್ತರಮಿದು ತಕ್ಕುದೆನುತೆ ತಾಂ ॥
ನೆನೆದು ಶುಭಾಲಂಕಾರದ ।
ತನುಜಾತೆಯ ಕರವ ಪಿಡಿಯುತಾ ಹಿಮವಂತಂ ॥ ೮೭ ॥

ವ॥ ಅದೇಂಗೆಯ್ದನೆನೆ:—

ತನುಭವೆ ಬಾ ನಿನ್ನಂ ತ್ರಿಭು ।
ವನಮೂರ್ತಿಶಿವಂಗೆ ಭಿಕ್ಷಮಾಗಿಸುವೇಂ ನಾಂ ॥
ಮುನಿತಿಲಕರಿವರ್ ಯಾಚಕ ।
ರೆನಗಿದೊ ಸಂಪ್ರಾಪ್ತಮಾಯ್ತು ಗೃಹಮೇಧಿಫಲಂ ॥ ೮೮ ॥

ಇಂತೊರೆದು ಮಗಳೊಡನೆ ಹಿಮ ।
ವಂತಂ ನೋಡುತ್ತೆ ಮುನಿಗಳಂ ತ್ರ್ಯಂಬಕನಾ ॥
ಕಾಂತೆಯಿವಳ್ ನಿಮಗೆಲ್ಲ ।
ರ್ಗಂ ತಾನೊಲವಿಂ ನಮಸ್ಕರಿಸಳೆಂದುಸುರ್ದಂ ॥ ೮೯ ॥

ವ॥ ಆ ಸಮಯದೊಳ್:—

ಮುನಿಗಳ್ ತಮ್ಮಿಷ್ಟಾರ್ಥಕ ।
ರಣದಿಂದಮುದಾರಮಪ್ಪ ಗಿರಿವಚದಭಿನಂ ॥
ದನಮಂ ಗೆಯ್ದು ಫಲೋನ್ಮುಖ ।
ಮೆನಿಸಿದಾಶಿಷಮನಂಬಿಕೆಗೆ ತಾಮಿತ್ತರ್ ॥ ೯೦ ॥

ಪತಿಗೈವ ಸಮಾಸಕ್ತಿ ।
ಸ್ಥಿತಿಯೊಳ್ ಪೊನ್ನೋಲೆ ಜಾರೆ ಕಿವಿಯಿಂದಂ ನಾ ॥
ಣ್ಚುತಮಿಪ್ಪುರ್ವಿನೆಯುಂ ತದರುಂ ।
ಧತಿ ತನ್ನಯ ತೊಡೆಯನೇರಿಸಿದಳಾದರದಿಂ ॥ ೯೧ ॥

ತನಯಾಪ್ರೇಮುದೆ ತಾಂ ಕಂ ।
ಬನಿದುಂಬಿದ ಕಣ್ಣ ತಜ್ಜನನಿಯುಳಲುಮುನಾ ।।
ಮುನಿಪತ್ನಿ ಕಳೆದಳನ್ಯಾಂ ।
ಗನೆಯೊಂದದ ವರನ ಗುಣದ ಸಂಕೀರ್ತನದಿಂ || ೯೨ ||

ವ|| ಇಂತಾದ ಬಳಿಕ್ಕಂ:—

ತ್ರಿಣಯುನ ಬಂಧು ವಿವಾಹ ।
ಕ್ಕನುಕೂಲದ ತಿಥಿಯ ಕೇಳೆ ವಲ್ಕಲಧರರಾ ||
ಮುನಿಗಳ್ ಮೂರು ದಿನದ ಮುಂ |
ದಿನ ದಿವಸಮುದೆಂದು ಪೇಳ್ದು ಪಯುಣಂಗೊಂಡರ್|| ||೯೩||

ಗಿರಿವರನಿಂ ಬೀಳ್ಕೊಂಡಾ ।
ಪುರಹರನಂ ಸಾರ್ದವಂಗೆ ಕೃತಿಶಿದ್ಧಿಯ ತಾಂ ||
ನೆರೆ ಪೇಳ್ದು ತನ್ಮುನೀಂದ್ರರ್ |
ಸುರಮಾರ್ಗಕ್ಕಡರ್ದರಾಂತು ವಿಭುವನುಮತಿಯುಂ || ೯೪ ||

ವ|| ತದನಂತರದೊಳ್:—

ಗಿರಿಜಾಸಮಾಗಮೋತ್ಸುಕ ।
ಹರನುಂ ಕಷ್ಟದೊಳೆ ತದ್ದಿನಂಗಳ ಕಳೆದಂ ||
ಸ್ಥಿರನನೆ ಬಿಡದೀ ಭಾವೋ ।
ತ್ಕರಮನ್ಯನ ಚಲಿತಮನನ ವಿಕೃತಿಗೊಳಿಸದೇಂ || ೯೫ ||

ಫಲೋದಯುನಾಮುಕ ಷಷ್ಠಸರ್ಗಂ

— ಸಂಪೂರ್ಣಂ —

ಸಪ್ತಮ ಸರ್ಗಂ.

ವ|| ಋಷಿಪ್ರೋಕ್ತದಿನತ್ರಯಾನಂತರದೊಳ್:—

ಕಂ|| ಹಿಮವಂತನಾತ್ಮಬಾಂಧವ |
ಸಮೇತನಮೃತಾಂಶುವೃದ್ಧಿಪಕ್ಷದೆ ತಾಂ ಸ ||
ಪ್ತಮಶುದ್ಧಿಯ ತಿಥಿಯೊಳುಪ |
ಕ್ರಮಿಸಿದನಾತ್ಮಜೆಯ ಲಗ್ನದೀಕ್ಷಾಕೃತಿಯಂ || ೧ ||

ಗೃಹಗೃಹದೊಳೊಲ್ದು ಪಾಣಿ |
ಗ್ರಹಣದ ಶುಭವಸ್ತು ಸಂಗ್ರಹದೆ ತೊಡಗಿರ್ದಾ ||
ಗೃಹಿಣಿಯರಿಂ ತಳ್ತೊಂದೇ |
ಗೃಹಕೆಣೆಯಾಯ್ತವನ ಪುರಮುಮಂತಃಪುರಮುಂ || ೨ ||

ಸುರತರುಸುಮಸಂಕೀರ್ಣಸು |
ಸರಣಿಯ ಮೇಣ್ ಚೀನವಸನಕೇತನಚಯದಾ ||
ವರಹೇಮತೋರಣದ ತ |
ತ್ಪುರಮೆಸೆದುದು ತಾಂ ಸ್ಥಲಾಂತರದ ಸಗ್ಗದವೋಲ್ || ೩ ||

ಸುತವೃಂದದಿಂದೊರ್ಡಂ ಪಾ |
ರ್ವತಿಯೊರ್ವಳೆ ಚಿರದೆ ನಷ್ಟಲಬ್ಧಳೊ ಮತ್ತಂ ||
ಮೃತಿಯಿಂದೆಳ್ದಳೊ ಎನೆ ನಿಜ |
ಪಿತೃಗಳ್ಗಸುವೆನಿಸಿದಳ್ ಸಮೀಪಿಸೆ ಲಗ್ನಂ || ೪ ||

ವ|| ಗೌರಿಯಿಂತು ಜನನೀಜನಕರ ಜೀವವಾದುದಲ್ಲದೆ:--

ಪಡೆದು ಪರಕೆಗಳ ತೊಡೆಯಿಂ ।
ತೊಡೆಗೇರುತೆ ತೊಡವನೊಂದರಿಂದೊಂದನವಳ್ ||
ಪಡೆಯುತೆ ಸುತಾದಿ ಭಿನ್ನತೆ ।
ಗೆಡೆಯ ತದನ್ವಯದ ನೇಹಕೊಂದೆಡೆಯಾದಳ್ || ೫ ||

ವ|| ತದನಂತರದೊಳ್:—

ಶಶಿಯುಕ್ತೋತ್ತರತಾರೆಯ ।
ದೆಸೆಯೆ ಸುಮೈತ್ರದ ಮುಹೂರ್ತದೊಳ್ ಬಂಧುಗಳಾ ।
ದಸಿಯರ್ ಪತಿಸುತವತಿಯರ್ ।
ರಸಾಧರಾತ್ಮಜೆಯ ತನುಗಲಂಕೃತಿಗೆಯ್ದರ್ || ೬ ||

ವ|| ಅದೆಂತೆನೆ:—

ವರಸರ್ಷಪಯುತ ದೂರ್ವಾಂ ।
ಕುರದೊಳ್ ನಿರ್ನಾಭಿವಿಮಳಕೌಶೇಯದೊಳಂ ||
ಸ್ಫುರದಿಷುವಿನೊಳಂ ತಳ್ತುರೆ ।
ಮೆರೆದುದದಭ್ಯಂಗವೇಷಮುದ್ರಿತನುಜೆಯಾ || ೭ ||

ತವೆ ಧರಿಸುತೆ ತದ್ಗಿರಿಸುತೆ ।
ವಿವಾಹವಿಧಿನೂತ್ನಶರವ ಬಹುಳದ ಕಡೆಯೊಳ್ ||
ರವಿಕರಮನೊಂದಿ ತಾಂ ಬೆಳ ।
ಗುವ ಶಶಿಕಳೆಯಂತಿರ್ದೆದೆ ಬೆಳಗಿದಳಾಗಳ್ || ೮ ||

ಒಡಲೆಣ್ಣೆಗಳೆದು ಲೋಧ್ರದ ।
ಪುಡಿಯಿಂ ಮೇಣ್ ನಾಂದ ಪರಿಮಳ ದ್ರವ್ಯದೆ ಮೈ ||
ದೊಡೆದುಡಿಸಿ ಜಳಕದುಡುಗೆಯ |
ನಡೆಯಿಸಿದರ್ ಸ್ನಾನಗೇಹಕವಳಂ ಪೆಣ್ಗಳ್ || ೯ ||

ಮರಕತಶಿಲೆಯಿಂ ಪಾಸಿದ ।
ವರಮುಕ್ತಾಫಲದೆ ಚಿತ್ರಿಸಿದ ತದ್ಗೃಹದೊಳ್ ॥
ಗಿರಿಜೆಗೆ ಪೊಂಗೊಡಗಳ ನೀ ।
ರೆರೆದರ್ ನೆರೆ ಪೊಣ್ಮುತಿರ್ಪಿನಂ ತೂರ್ಯರವಂ ॥ ೧೦ ॥

ಗಿರಿಭವೆ ಮಂಗಳಮಜ್ಜನ ।
ಪರಿಪೂತಳ್ ಪತಿಸಿತಾಂಬರಮನುಟ್ಟೆಸೆದಳ್ ॥
ಧರೆ ಮಿಂದು ಮುಗಿಲ ಜಲದಿಂ ।
ದರಲ್ದ ಕಾಶಪ್ರಸೂನತತಿಯಿನೆಸೆವವೋಲ್ ॥ ೧೧ ॥

ಮಿಸುಗುವ ವಿತಾನದಮಲಾ ।
ಸನದ ಲಸದ್ರತ್ನಮಯಚತುಸ್ತಂಭದ ಶೋ ॥
ಭನವೇದಿಕೆಯೆಡೆಗೆ ಸತೀ ॥
ಜನರಲ್ಲಿಂದವಳ ತೋಳ್ಪಿಡಿದು ಕರೆತಂದರ್ ॥ ೧೨ ॥

॥ ವೃ ॥

ಗೌರಿಯಂ ಸಲೆ ಪೂರ್ವವಕ್ತ್ರದೊಳಲ್ಲಿ ಕುಳ್ಳಿರಿಸುತ್ತೆ ತಾಂ ।
ನಾರಿಯರ್ ಕುಳಿತಿರ್ದು ಮುಂಗಡೆಯಲ್ಲಿ ಸಾಜದೆ ಪೊಳೆವ ತ॥
ಚ್ಚಾರುರೂಪಮುದ್ಯದೆ ತಮ್ಮಯ ಕಣ್ಗಳಂ ಸೆಳೆದಿರ್ಪಿನಂ ।
ಸಾರಭೂಷಣಮಿರ್ದೊಡಂ ಬಳಿಯೊಳ್ ವಿಲಂಬಿಸಿದರ್ಕ್ಷಣಂ ॥೧೩॥

ಕಳೆಯುತೆ ಧೂಪದೆ ತಣ್ಪನ ।
ವಳ ಲಸದಂತಃಪ್ರಸೂನಕೇಶಾಂತಮನೈ ॥
ಸಲೆ ಬಂಧಿಸಿದಳ್ ದೂರ್ವಾ ।
ಕಲಿತದ ಸಿತಗುಡಸುಪುಷ್ಪಮಾಲೆಯಿನೊರ್ವಳ್ ॥ ೧೪ ॥

ತನುಗೆ ಸಿತಾಗರುವರಲೇ।
ಪನವುಂ ರೋಚನದ ಚಿತ್ರಮುಮುನೆಸಗುವಿನಂ॥
ನಿನುಗಿಂದುಮೆ ಕೋಕಾಂಕವು।
ಳಿನದ ಸುರಾಪಗೆಯ ಕಾಂತಿಯುಂ ನೀರಿರ್ದಳ್ ॥ ೧೫ ॥

ಅಳಿಯುಕ್ತನಳಿನಮುಮನಾ।
ಜಲಧರಲೇಖಾನ್ವಿತೇಂದುಬಿಂಬಮುನವಳಾ॥
ಅಲಕಲಸದಾನನದ ಸಿರಿ।
ಪಳಿದುಪಮೋಕ್ತಿಪ್ರಸಕ್ತಿಯುನೆ ಕಳೆದುದು ತಾಂ ॥ ೧೬ ॥

ಸೆಳೆದುದು ಕಣ್ಣಂ ಲೋಧ್ರಸು।
ವಿಲೇಪನದ ರಚಿತರೋಚನಾರುಣಗಂಡ॥
ಸ್ಥಲದ ಸುವರ್ಣೋತ್ಕರ್ಷವ।
ತಳೆಯುತೆ ಕರ್ಣಾರ್ಪಿತಂ ಯವಾಂಕುರಮುವಳಾ ॥ ೧೭ ॥

ನುತಗಾತ್ರಿಯ ಸಿಕ್ಥಕಶೋ।
ಭಿತರಾಗದ ಸನ್ನಿಹಿತಸುಲಾವಣ್ಯಫಲಾ॥
ನ್ವಿತದ ಸುರೇಖೆಯ ಮೆಲ್ವುಟಿ।
ಯತಿಶೋಭೆಯ ಪೆರ್ಚಿಸಿದುದು ತಾಂ ಸ್ಪಂದನದಿಂ ॥ ೧೮ ॥

ಚರಣಂಗಳ ರಂಜನಮುಂ।
ವಿರಚಿಸಿ ಪತಿಶಿರದ ಚಂದ್ರಕಳೆಗೀ ಪದದಿಂ॥
ನೆರೆ ತಾಡಿಸೆಂದು ನಗೆಯಿಂ।
ಪರಸಿದ ಸಖಿಗುಸುರದಗಜೆ ಮಾಲ್ಯದೆ ಪೊಡೆದಳ್ ॥ ೧೯ ॥

ಗಿರಿಜೆಯ ಕುಮುದದಳಾಂಬಕ।
ದುರುಕಾಂತಿಯ ಕಂಡು ಸಿಂಗರಿಪವರ್ ಶೋಭಾ॥
ಕರಮಲ್ಲದೊಡಂ ಮುಂಗಳ।
ಕರಮೆಂದರಿದವಳ ಕಣ್ಗೆ ಕಾಡಿಗೆಯಿಟ್ಟರ್ ॥ ೨೦ ॥

ತೊಡವುಗಳ ತೊಡುತವಳ್ ಪೂ।
ಬಿಡುತೊಪ್ಪುವ ಬಳ್ಳಿಯಂತೆ ಮೂಡುವುಡುಗಳಿಂ॥
ದೊಡಗೂಡಿದ ನಿಶೆಯಂತಿರೆ।
ತಡಿಸಾರ್ವ ಖಗಂಗಳುಳ್ಳ ನದಿಯೆಂತೆಸೆದಳ್ ॥ ೨೧ ॥

ಅವಳಾತ್ಮಶೋಭೆಯಂ ತಾಂ।
ತವೆ ಪರಿಕಿಸಿ ಚಲಿಸದಕ್ಷಿಯಿಂ ಕನ್ನಡಿಯೊಳ್॥
ಶಿವನೆಡೆಯೊಂದಲೆಳಸಿದಳ್।
ಧವದರ್ಶನಮುಲ್ತೆ ಕಾಮಿನೀವೇಷಫಲಂ ॥ ೨೨ ॥

ಬೆರಳೆರಡರೊಳಾಂತು ಶುಭಾ।
ಕರಾರ್ದ್ರಹರಿತಾಲಮಣಿಶಿಲೆಗಳಂ ಮಗಳಾ ॥
ವರಕರ್ಣದಂತಪತ್ರ।
ಸ್ಫುರಿತಾನನವೆತ್ತಿ ಪಿಡಿಯುತಂ ತಾನಾಗಳ್ ॥ ೨೩ ॥

ಗಿರಿಜಾಕುಚೋದಯಾದಿಯಿ।
ನುರೆ ವೃದ್ಧಿಯನಾಂತ ಮೊದಲ ಬಯಕೆಯೆನಿಸಿದಾ ॥
ಪರಿಣಯದೀಕ್ಷಾತಿಲಕವ।
ಧರಿಸಿದಳಾ ಮೇನೆ ತನ್ಮುಖದೆ ಮುದಭರದಿಂ ॥ ೨೪ ॥

ವ॥ ಇಂತು ತಿಲಕವಿಟ್ಟನಂತರದೊಳ್:—

ಜಲಪೂರ್ಣಮಾಗೆ ಕಣ್ಗಳ್।
ನೆಲೆದಪ್ಪುತೆ ಕಟ್ಟತೊಡಗೆ ದಾದಿ ಬೆರಳ್ಗಳಿಂ॥
ಸಲೆ ಸರಿಗೊಳಿಸೆ ಜನನಿ ಮಂ।
ಗಳದೂರ್ಣಾಸೂತ್ರಮಂ ಸುತೆಗೆ ಬಂಧಿಸಿದಳ್ ॥ ೨೫ ॥

ಧರಿಸಿ ಪೊಸದುಗುಲವವಳಾಂ |
ತಿರೆ ನವದರ್ಪಣವ ಫೇನಲಸದಮೃತಜಲಾ ||
ಕರತೀರದಂತೆ ರಾಕಾ |
ಹರಿಣಾಂಕಾನ್ವಿತ ಶರದ್ರಜನಿಯೆಂತೆಸೆದಳ್ ॥ ೨೬ ॥

ಕೃತಿದಕ್ಷೆ ಮಾತೆ ತನ್ನಯ ।
ಸುತೆಯಂ ವಂಶಪ್ರತಿಷ್ಠೆಯಂ ನಿಜಗೃಹದ ।
ರ್ಚಿತದೇವತೆಗಳ್ಗೆರಗಿಸಿ ।
ಪತಿವ್ರತಾಂಘ್ರಿಗಳ ಪಿಡಿಸಿದಳ್ ಕ್ರಮದಿಂದಂ ॥ ೨೭ ॥

ಪರಸೆ ಪ್ರಣತೆಗುಮೆಗವರ್ |
ವರನ ಪ್ರೇಮಮುನಖಂಡಿತಮನೊಂದೆನುತುಂ ||
ಹರನರ್ಧಾಂಗವ ಪಡೆಯುತೆ ।
ಕಿರಿದೆನಿಸಿದಳಾಕೆ ಬಂಧುಗಳ ಪರಕೆಯನೇ ॥ ೨೮ ॥

ವೃ॥

ಬಗೆವೊಡೆ ಸಭ್ಯನುಂ ಚತುರನೆಂದೆನಿಪಾ ನಗವೃಂದವಲ್ಲಭಂ |
ಮಗಳ ವಿವಾಹಕೃತ್ಯವ ನಿಜೇಚ್ಛೆಗನ್ಯೆಸಿರಿಗೊಪ್ಪುವಂತೆವೋಲ್ ||
ಮುಗಿಸಿ ಸುಬಂಧುಮಿತ್ರಜನಸಂಕುಲಯುಕ್ತಸಭಾಂತರಾಳದೊಳ್|
ಮಿಗೆ ಮುದಮಿರ್ದನಾ ವೃಷಭವಾಹನನಾಗಮ ನಕ್ಕೆ ಕಾದು ತಾಂ||

ವ|| ಆ ಹಿಮವಂತನಿಂತಿರ್ಪಿನಮಿತ್ತಂ:—

ವರರಜತಾಚಲದೊಳ್ ಪುರ |
ಹರನಿದಿರೊಳ್ ಸಪ್ತಮಾತೃಕೆಯರಿರಿಸಿದರಾ ||
ದರದಿಂದಂ ತತ್ಪೂರ್ವಸು ।
ಪರಿಣಯಕನುರೂಪಮಪ್ಪ ಭೂಷಣಚಯಮಂ ॥ ೩೦ ॥

ಅವರಲ್ಲಿಟ್ಟಾದರದಿಂ ।
ಶಿವನಾ ಶುಭಮಂಡನಂಗಳಂ ಮುಟ್ಟುವಿನಂ ॥
ಭವನಾ ಮೊದಲಿನ ವೇಷಮೆ ।
ವಿವಾಹಕನುಕೂಲರೂಪಮಾಂತೆಸೆದುದು ತಾಂ ॥ ೩೧ ॥

ವ॥ ಅದೆಂತೆನೆ:—

ವರಭಸಿತಮೆ ಸಿತಗಂಧಂ ।
ಕರದ ಕಪಾಲಮದೆ ವಿಮಲಮುಕುಟಂ ಮತ್ತಂ ॥
ಕರಿಚರ್ಮಮೆ ರೋಚನವಿ ।
ಸ್ಫುರಿತಾಂಕಾಂಚಲದ ದುಗುಲಮಾಗೆಸೆದಿರ್ಕುಂ ॥ ೩೨ ॥

ಹರನ ನಿಟಿಲಾಸ್ಥಿಮಧ್ಯದ ।
ವರಪಿಂಗಕನೀನಿಕಾನ್ವಿತದ ಲೋಚನಮೇ ॥
ಹರಿತಾಳಸುತಿಲಕಕ್ರಿಯೆ ।
ಗುರೆ ತಾನನುಕೂಲಪಕ್ಷಮಾಂತೆಸೆದಿರ್ಕುಂ ॥ ೩೩ ॥

ಕರಮುಖ್ಯಸ್ಥಾನದೊಳಾ ।
ಭರಣತ್ವಮನಾಂತ ಪಾವುಗಳ ತನುಮಾತ್ರಂ ॥
ಧರಿಸಿತು ರೂಪಾಂತರಮಂ ।
ಪರಿಣಮಿಸದೆ ಪೋಯ್ತು ತತ್ಫಣಾಮಣಿರುಚಿ ತಾಂ ॥ ೩೪ ॥

ಪಗಲೊಳಮೆಸೆಯೆ ಕಿರಣಕಾಂ ।
ತಿಗಳೆಳೆತನದಿಂದೆ ಕರ್ಪುರಕಾಣದ ಕತದಿಂ ॥
ಮಿಗೆ ಮೆರೆವಿಂದು ತಲೆಯೊಳಾ ।
ವಗಮಿರೆ ಶರ್ವಂಗದೇಕೆ ಚೂಡಾರತ್ನಂ ॥ ೩೫ ॥

ವರಮುಹಿಮೆಯೊಳಿಂತುತ್ತಮ ।
ತರವೇಷಮನೆಸಗಿಕೊಳುತಮುಚ್ಚರಿಗಳಿಗಾ ॥
ಕರನಭವಂ ಪ್ರಮುಥರ್ ತಂ ।
ದುರುಖಡ್ಗದೊಳಾತ್ಮಬಿಂಬಮುಂ ಪರಿಕಿಸಿದಂ ॥ ೩೬ ॥

ವ॥ ಇಂತು ವೈವಾಹಿಕವೇಷವೊಪ್ಪೆ ತದನಂತರದೊಳ್:—

ವೃ॥

ಪುಲಿಯ ಸುಚರ್ಮದಾಸ್ತರಣಮುಂ ಧರಿಸಿರ್ದುರುಶ್ವೃಷ್ಮದಾವೃಷಂ।
ಸಲೆ ಕಿರಿದಾಗಿಸುತ್ತಿರೆ ಸುಭಕ್ತಿಯೊಳಾತ್ಮಬೃಹಚ್ಛರೀರಮುಂ ॥
ವಿಲಸಿತಮಪ್ಪ ತದ್ರಜತಶೈಲಮನೇರುವ ಪಾಂಗಿನಿಂದದಂ ।
ನಲವಿನೊಳೇರಿ ನಂದಿಭುಜದಾಶ್ರಯದಿಂ ಪೊರಮಟ್ಟನೀಶ್ವರಂ ।೩೭।

ಹರನನನುಗಮಿಪ ಮಾತೃಕೆ ।
ಯರಾತ್ಮವಾಹಪ್ರಕಂಪಚಲಕುಂಡಲೆಯರ್ ॥
ಸುರಪಥಕಬ್ಜಾಕರತೆಯ ।
ವಿರಚಿಸಿದರ್ ಕಾಂತಿಪಟಲರೇಣುವದನದಿಂ ॥ ೩೮ ॥

ಪೊಂಬೆಳಗಿನ ಮಾತೃಕೆಯರ ।
ಬೆಂಬಿಡದ ಕಪಾಲಕುಂಡಲದ ಕಾಳಿಯವಳ್ ॥
ಮುಂಬರಿದ ತಟಿತ್ತಿನ ನೀ ।
ಲಾಂಬುದಮಾಲೆಯ ಬಲಾಕಿನಿಯ ಪೋಲ್ತಿರ್ದಳ್ ॥ ೩೯ ॥

ಬಳಿಕೆ ಶಿವನಗ್ರಗತಗಣ ।
ಕುಲಕೃತಮಂಗಳಸುವಾದ್ಯರವಮೆ ವಿಮಾನಂ ॥
ಗಳ ತುದಿಯುಂ ಮುಟ್ಟುತೆ ಸಲೆ ।
ತಿಳಿಸಿದುದಮರರ್ಗೆ ಸೇವೆಗೈವವಸರಮುಂ ॥ ೪೦ ॥

ವ॥ ಆ ಸಮಯದೊಳಮರರ್ಕಳ್ ಸಲ್ಲಿಸಿದ ಸೇವೆಯದೆಂತೆನೆ:—

ರವಿ ವಿಶ್ವಕರ್ಮನಿರ್ಮಿತ ।
ನವಾತಪತ್ರವ ಶಿವಂಗೆ ಪಿಡಿವಿನಮುದರಾ ॥
ಸುವಿಮಳವಸನವುದಂತಿಕ ।
ಭವನಮೌಳಿಗೆ ಬೀಳ್ವ ಗಂಗೆಯಂತಿರೆ ಪೊಳೆಗುಂ ॥ ೪೧ ॥

ವ॥ ಮತ್ತಮಾಗಳ್:—

ತನುಭೃದ್ಗಂಗಾಯಮುನೆಯು ।
ರನಘಂಗೆಸಗುತ್ತೆ ಚಾಮರದ ಸೇವೆಯ ತಾಂ ॥
ಧುನಿಯಾಕೃತಿಯನುಳಿದೊಡಂ ।
ಮಿಸುಗಿದರುರೆ ಚರಿಸುವಂಚೆಗಳನುಳಿಯದವೋಲ್ ॥ ೪೨ ॥

ಹವಿಯಿಂ ವಹ್ನಿಯನೆಂತಿರೆ ।
ಶಿವಮಹಿಮೆಯನಂತೆ ತಮ್ಮ ಜಯರವದಿಂದಂ ॥
ತವೆ ಸಂವರ್ಧಿಸುತಂ ಶಂ ।
ಭುವ ಮುಂದೈತಂದರಬ್ಜಭವನುಂ ಹರಿಯುಂ ॥ ೪೩ ॥

ವ॥ ಹರಹರಿವಿರಿಂಚಿಗಳಲ್ಲಿಸಿತುಂ ಭೇದಮಿಲ್ಲಮದೆಂತೆನೆ:—

ವರಮೂರ್ತಿಯೊಂದೆ ತಾಂ ಮೂ ।
ದೆರನಾಯ್ತುವರಲ್ಲಿ ಪಿರಿದು ಕಿರಿದುಗಳಿಲ್ಲಂ ॥
ಹರನೊರ್ಮೆ ಹರಿಗೆ ಹರಿಯುಂ ।
ಹರಂಗೆ ವಿಧಿಯುವರ್ಗೆ ವಿಧಿಗಮುವರ್ಗಳುಮಾದ್ಯರ್ ॥ ೪೪ ॥

ವ|| ಮತ್ತಮಾಗಳ್:—

|| ವೃ ||

ತೊರೆಯುತೆ ಛತ್ರಚಾಮರಸುವಾಹನಮುಖ್ಯಮನೆಲ್ಲಮಂ ಸುರೇ |
ಶ್ವರಮುಖರಾದ ಲೋಕಪರಿಪಾಲಕರಾಂತು ವಿನೀತವೇಷಮಂ ||
ಕರುಣಿಸು ಶಂಭುದರ್ಶನಮನೆಂದುರೆ ನಂದಿಗೆ ಸನ್ನೆಗೈಯೆ ತಾ |
ನರುಪಲಮಂ ಕರಂಮುಗಿದು ಕುಂಬಿಡುತಿರ್ಕುಮಮರ್ ಮಹೇಶನಂ ||

ಶಿರಮಲ್ಲಾಡಿಸಿ ಪದ್ಮೋ |
ದರನಂ ನುಡಿಯಿಂದೆ ವಿಷ್ಣುವಂ ನಗೆಯಿಂದಂ ||
ಸುರಪತಿಯಂ ನೋಟದೊಳೇ |
ಸುರರಂ ತಕ್ಕಂತೆ ಗೌರವಿಸಿದಂ ವಿಭು ತಾಂ || ೪೬ ||

ವ|| ತದನಂತರದೊಳ್:—

ಹರನಿದಿರೊಳ್ ವಿಜಯಾಶಿಯು |
ವಿರಚಿಪ ಸಪ್ತರ್ಷಿಗಳ್ಗೆ ನಿಮ್ಮಂ ಮೊದಲೀ ||
ಪರಿಣಯಯಜ್ಞದ ಋತ್ವಿ |
ಗ್ವರರಾಗಳ್ ಯಾಚಿಸಿರ್ಪೆನೆಂದಂ ನಗುತಂ || ೪೭ ||

ವ|| ಸರ್ವರನಿಂತಾದರಿಸಿದನಂತರಂ ಪಯಣಂಗೊಂಡು:—

ಅಸಮಪುರಜಯಮ ವಿಶ್ವಾ |
ವಸುಮುಖ್ಯರ್ ನಿಪುಣಗಾಯಕರ್ ಪಾಡುತಿರಲ್ ||
ವಿಷಯವಿಕಾರವಿದೂರಂ |
ಶಶಿಶೇಖರನಿರದತಿಕ್ರಮಿಸಿದಂ ಪಥಮಂ || ೪೮ ||

ವೃ ॥

ಸುರಪಥದಲ್ಲಿ ಚಾರುಗತಿಯಾ ವೃಷಭಂ ಸಲೆ ಪೊತ್ತು ಶಂಭುವಂ ।
ತೆರಳ್ವುದು ತೀರಭೇದನದೊಳಂಟಿದ ಪಂಕಮನೆಂತಿರಂತೆ ಕಿ ॥
ಕ್ಕಿರಿದ ಮುಗಿಲ್ಗಳಂ ಕೊಡಪುತಂ ನಿಡುಗೋಡುಗಳಿಂಪಲರ್ಮೆಯಿಂ।
ಚರಮನೆ ಪುಟ್ಟಿಸುತ್ತಿರೆ ನಿಬದ್ಧಸುವರ್ಣಸುಕಿಂಕಿಣೀಗಣಂ ॥ ೪೯ ॥

ಕಂ॥ ನೆರೆ ಮುಂಗಡೆಗಡದರ್ಾ ಶಂ ।
ಕರ ದೃಷ್ಟಿಯ ಹೇಮರಜ್ಜು ತನ್ನೆಳೆದುದೆನಲ್ ॥
ಅರೆಗಳಿಗೆಗೆ ಮುಟ್ಟಿದುದಗ ।
ವರರಕ್ಷಿತಪುರವ ರಿಪುಗಭೇದ್ಯವ ವೃಷಭಂ ॥ ೫೦ ॥

ನಗರಸಮೀಪದೆ ಪೌರರ್ ।
ಮೊಗವೆತ್ತಳ್ತಿಯೊಳೆ ನೋಡುತಿರೆ ಜಲಧರನೀ ॥
ಲಗಲಂ ನಿಜಬಾಣಾಂಕದ ।
ಗಗನಾಧ್ವದಿನಿಳಿದು ಭೂನಿಕಟತಲನಾಂತಂ ॥ ೫೧ ॥

ಹರನಾಗಮನದೆ ಮುದಿತಂ ।
ಗಿರಿರಾಜಂ ಫುಲ್ಲವೃಕ್ಷಕಟಕಂಗಳಿನೆಂ ॥
ತಿರೆ ಬಂಧುಗಳೇರಿದ ವರ ।
ಕರಿಗಳಿನಂತಿರೆ ತದೀಶ್ವರನನಿದಿರ್ಗೊಂಡಂ ॥ ೫೨ ॥

ತೆರೆದ ಪುರದ್ವಾರದೆ ಸುರ ।
ಗಿರಿಗಳ ವರ್ಗಂಗಳೆರಡು ಸೇತುವದು ಸಡಿ ॥
ಲ್ದಿರೆ ಕೂಡುವ ಪೂರಂಗಳ ।
ತೆರದಿಂ ಕೂಡಿದವು ದೂರಕಡದಿರ್ರೆ ಘೋಷಂ ॥ ೫೩ ॥

ಭುವನತ್ರಯಕಂ ವಂದ್ಯನ ।
ಭವನೆಸಗಿದ ನತಿಗೆ ನಾಣ್ಚುತಂ ಭೂಧರನಾ ॥
ಶಿವಮಹಿಮೆಯಿಂದೆ ಮೊದಲೇ ।
ತವೆ ಬಾಗಿದ ತನ್ನ ಶಿರವನರಿಯದೆಯಿರ್ದಂ ॥ ೫೪ ॥

ಘನಮುದಯೋಗದೊಳರಳ್ದಾ ।
ನನಶೋಭೆಯೊಳಳಿಯನಗ್ರಗತನಾಗಿ ನಗಾ ॥
ಗ್ರಣಿಯಾಗುಲ್ಫವಿಕೀರ್ಣಾ ।
ಪಣಸಥಸುಮದಾತ್ಮಪುರದೆ ಪುಗಿಸಿದನವನಂ ॥ ೫೫ ॥

ಆ ಸಮಯದೊಳೀಶನ ನೋ ।
ಳ್ಪಾಶೆಯೊಳುಳಿದಿತರ ಕೃತಿಯ ಪುರಸುಂದರಿಯರ್ ॥
ಪ್ರಾಸಾದಂಗಳ ಸಾಲೋಳ್ ।
ವಾಸಿಸುತೀವಿಧದ ಚೇಷ್ಟೆಯೊಳ್ ತೊಡಗಿರ್ದರ್ ॥ ೫೬ ॥

ವ॥ ಅದೆಂತೆನೆ:—

ತಡೆಯದೆ ದರ್ಶನಮಾರ್ಗಕೆ ।
ನಡೆತರುತುಂ ಜಗುಳ್ವ ಪೂಸರದ ಬಿಡುಮುಡಿಯುಂ ॥
ಪಿಡಿದೊರ್ವಳ್ ಕರದಿಂದಾ ।
ಯೆಡೆಯೊಂದುವವರೆಗಮರಿಯಳದ ಕಟ್ಟುವುದಂ ॥ ೫೭ ॥

ಪೆರಳೊರ್ವಳ್ ಸಿಂಗರಿಪಳ ।
ಕರದಿಂ ಕಿಳ್ತಾರ್ದ್ರರಾಗದಡಿಯುಂ ತೊರೆದಾ ॥
ವರಮಂದಗತಿಯ ಜಾಲದ ।
ವರೆಗಂ ಲಾಕ್ಷಾಂಕಮೆಸಗಿದಳ್ ತಾಂ ಪಥದೊಳ್ ॥ ೫೮ ॥

ಬಲನೇತ್ರಮನಂಜನದಿಂ ।
ದಲಂಕರಿಸಿ ವಾಮನಯದಾ ಸಿಂಗರಮಂ ॥
ಉಳಿದು ಗವಾಕ್ಷಸಮೀಪಕೆ ।
ಶಲಾಕೆಯಂ ಪಿಡಿದೆ ನಡೆದು ಬಂದಳದೊರ್ವಳ್ ॥ ೫೯ ॥

ದಿಟ್ಟಿಯ ಜಾಲಾಂತರದೆಡೆ ।
ಗಟ್ಟುತೆ ಪೋಗುತಿರೆ ಸಡಿಲ್ದ ನೀವಿಯನೊರ್ವಳ್ ॥
ಕಟ್ಟದೆ ನಿಂತಳ್ ಪಿಡಿಯುತೆ ।
ಯುಟ್ಟುದ ಪೊರ್ಕುಳವನಡರೆ ಕಂಕಣರುಚಿಗಳ್ ॥ ೬೦ ॥

ತರುಣಿಯದೊರ್ವಳ್ ರಶನೆಯೊ ।
ಳರೆಸೇರಿಸಿ ಮಣಿಗಳಂ ಜವದೊಳೇಳುತನ್ವೈ ॥
ತರೆ ತಾನಡಿಗಡಿಗವು ಜಗು ।
ಳ್ದಿರೆ ಬೆರಳಲ್ಲುಳಿದುದೊಂದೆದಾರಮುದಾಗಳ್ ॥ ೬೧ ॥

ಅಲಘುಕುತೂಹಲದಾ ಪೆ ।
ಣ್ಗಳ ಮಧುಗಂಧದ ಚಲಾಕ್ಷಿಮಧುಪದ ಮೊಗಗಳ್ ॥
ತ್ರೊಳಗಿದವು ಗವಾಕ್ಷಂಗಳ ।
ನಳಿನಾಭರಣಂಗಳಂತೆನೋಳ್ಪರ್ಗಾಗಳ್ ॥ ೬೨ ॥

ಪ್ರಸರಿಪ ಜೊನ್ನದೆ ಪಗಲೊಳ ।
ಮೆಸಗುತೆ ಸೌಧಾಗ್ರಪಂಕ್ತಿಗಿಮ್ಮಡಿ ಬೆಳಗಂ ॥
ಶಶಿಧರನೊಂದಿದನಾಗಳ್ ।
ಲಸಿತಧ್ವಜತೋರಣಾನ್ವಿತದ ನೃಪಪಥಮಂ ॥ ೬೩ ॥

ಅನುಪಮರೂಪದ ಶಿವನಂ ।
ಘನತೃಷ್ಣೆಯೊಳೀಕ್ಷಿಸುತ್ತೆ ವಿಷಯಾಂತರಮಂ ॥
ನೆನೆಯರ್ ಪೆಣ್ಗಳಪರ ಕ ।
ಣ್ಣನೆ ಶೇಷಹೃಷೀಕವೃತ್ತಿ ಪೊಕ್ಕವೊಲಾಗಳ್ ॥ ೬೪ ॥

ವ|| ಆ ಸಮಯದೊಳ್:—

ಗಿರಿಜೆ ಮೃದುತನುವೊಳಂ ದು ।
ಶ್ಚರತಪವೀತಂಗೆ ಮೆಚ್ಚಿ ಗೈದುದುಚಿತಮೊ ||
ಪುರುಷನ ದಾಸ್ಯವ ಪಡೆವಳೆ ।
ನಿರುಪಮಧನ್ಯೆಯೆನೆ ತೊಡೆಯನಾಂಪಳ ಮಾತೇಂ || ೬೫ ||

ಮನಮಂ ಸೆಳೆವಾಕೃತಿಯು ಮಿ ।
ಥುನಕಿದಕನ್ಯೋನ್ಯಸಂಗಮಂ ಗೆಯ್ಯದೊಡಾ ||
ವನಜಭವಂಗೀ ಯುಗ್ಮದ ।
ಘನರೂಪವಿಧಾನಯತ್ನಮಫಲಮೆನಿಸದೇಂ || ೬೬ ||

ವಲಮುರೆ ಪೆರ್ಚಿದ ಕಿನಿಸಿಂ ।
ಜಲಜಾಸ್ತ್ರನ ತನುವ ಸುಟ್ಟುದಿಲ್ಲೀ ದೇವಂ ||
ಸಲೆ ಕಂಡೀತನನವನೇ ।
ತಳೆದತಿಲಜ್ಜೆಯೊಳೆ ತೊರೆದನಂಗವನೆಂಬೇಂ || ೬೭ ||

ಗಿರಿರಾಜಂ ಮನಮೆಳಸಿದ ।
ಹರಸಂಬಂಧವ ಸುದೈವದಿಂ ಪಡೆದಂ ಭೂ ||
ಭರಧಾರಣೋಚ್ಚಮೀತನ ।
ಶಿರಮುಚ್ಚೈಸ್ತರಮೆನಿಸುಗುಮಿನ್ನೆಲೆ ಸಖಿಯೇ || ೬೮ ||

ವ|| ಪುರಾಂಗನೆಯರೀತೆರದಿಂ ತಮ್ಮೊಳ್ ನುಡಿಯುತ್ತಿರ್ಪಿನಂ:—

ಪುರಸುಂದರಿಯರ ಕರ್ಣಮ ।
ಧುರವಚಗಳನಿಂತು ಕೇಳುತೊಂದಿದ ನಭವಂ ||
ಗಿರಿಗೃಹಮಂ ಕೇಯೂರೋ ।
ತ್ಕರಚೂರ್ಣೀಕೃತಸುಲಾಜಮುಷ್ಟಿ ಸಹಿತಮಂ || ೬೯ ||

ಶರದಭ್ರದಿನಿನನೆಂತಂ ।
ತಿರೆ ವೃಷಭದಿನಿಳಿದು ಹರಿಗೆ ಕೈಗೊಟ್ಟು ಶಿವಂ ॥
ಸರಸಿಜಗರ್ಭಂ ಮುಂದೈ ॥
ತರೆ ನಗಪತಿವಿವಿಧಕಕ್ಷ್ಯದೆಡೆಯೊಳವೊಕ್ಕಂ ॥ ೨೦ ॥

ಗಿರಿಶನ ಬೆನ್ನೊಳೆ ಪೊಕ್ಕರ್ ।
ಗಿರಿನಿಲಯುಮನಿಂದ್ರಮುಖ್ಯಸುರರುಂ ಪ್ರಮಥರ್ ॥
ವರಸಪ್ತರ್ಷಿಮುಖಮುನೀಂ ।
ದ್ರರುಮುತ್ತಮಯತ್ನಮಂ ಫಲಾಳಿ ಪುಗುವವೊಲ್ ॥ ೨೧ ॥

ಅಮಳಾಸನಸ್ಥನಾಗಿಯು ।
ಸಮನೇತ್ರಂ ಕೊಂಡನಲ್ಲಿ ವಿಧಿಪೂರ್ವಕದಿಂ ॥
ಹಿಮನಗನಿತ್ತ ಮಣಿಯುತಾ ।
ರ್ಘ್ಯಮುಮಂ ಮಧುಪರ್ಕಮುಂ ನವಾಂಬರಯುಗಮುಂ ॥ ೨೨ ॥

ಅವರೋಧನಮ್ರಜನರಾ ।
ಸುವಸ್ತ್ರಭೂಷಿತನ ವಧುವೆಡೆಗೆ ಸೇರಿಸಿದರ್ ॥
ನವಚಂದ್ರಕರಂಗಳ್ ಫೇ ।
ನವನಾಂತಬ್ಧಿಯ ತಟಾಂತಿಕಕೆ ಸೇರಿಸವೋಲ್ ॥ ೨೩ ॥

ಪರಿವರ್ಧಿತಮುಖಶಶಿರುಚಿ ।
ಗಿರಿಜೆ ಶರದ್ರನೆಯ ಪೋಲೆ ತಳ್ತವಳಿಂದಂ ॥
ಹರನಮಳಚಿತ್ತಜಲದೊಳ ।
ಮರಳ್ದ ಕಣ್ಣೈದಿಲೋಳ್ ಜಗವ ಪೋಲ್ತಿರ್ದಂ ॥ ೨೪ ॥

ಬೆದರ್ದಿದಿರ ನೋಟದೊಳ್ ನಸು ।
ಕದಲದೆಯಿರ್ದೊಡನೆ ಮರಳುವನ್ಯೋನ್ಯಸತೃ ॥
ಷ್ಣದ ದಂಪತಿಯಕ್ಷಿದ್ವಯ ।
ಕೊದಗಿತು ಸಂಕೋಚಮನಾಗಳೊಂದಿದ ನಾಣಿಂ ॥ ೨೫ ॥

ಹರಭಯದೆ ಗೌರಿಯಂಗದೆ ।
ಶರೀರವಡಗಿಸಿದ ಮದನನಾದ್ಯಂಕುರದಂ ॥
ತಿರೆ ತೋರ್ಪರುಣಾಂಗುಳಿ ತ ।
ತ್ಕರಮಂ ಗುರುವೀಯೆ ಪಿಡಿದನದನೆಣ್ಮಯ್ಯಂ ॥ ೩೬ ॥

ಗಿರಿಜೆಗೆ ರೋಮೋದ್ಗಮಮೊದ ।
ಗಿರೆ ಶಿವನಂಗುಲಿಗಳೊಂದೆ ಬೆಮರನದಾಗಳ್ ॥
ಕರಸಂಸ್ಪರ್ಶನ ಮವರೊಳ್ ।
ಸರಿಗೆಯ್ದುವೊಲಾಯ್ತು ಮನ್ಮಥಾವಸ್ಥಿತಿಯಂ ॥ ೭೭ ॥

ಪರಿಣಯಕಾಲದೊಳಿವರೀ ।
ರ್ಶ್ವರ ಸನ್ನಿಧಿಯಿಂದಮನ್ಯದಂಪತಿಗಳ್ ತಾಂ ॥
ಧರಿಸುವರತಿಕಾಂತಿಯನೆನೆ ।
ಪೆರತಿನ್ನೇನೊರೆವುದಿವರ ಶೋಭೆಯ ಪರಿಯಂ ॥ ೭೮ ॥

ಜ್ವಲಿಸುವ ವೈಶ್ವಾನರನಂ ।
ಬಲಗೊಳ್ಳುತೆ ದಂಪತಿಗವರ್ ಕಣ್ಗೊಳಿಕುಂ ॥
ತೊಳಗುವ ಮೇರುವ ಸುತ್ತಂ ।
ಸಲೆ ತಿರುಗುವ ತಳ್ತ ಪಗಲಿರುಳ್ಗಳ ತೆರದಿಂ ॥ ೭೯ ॥

ದೊರೆದನ್ಯೋನ್ಯಸ್ಪರ್ಶದೊ ।
ಳುರೆ ಕಣ್ಗಳ ಮುಚ್ಚಿದವರ ವಹ್ನಿಯ ಸುತ್ತಲ್ ॥
ತಿರುಗಿಸಿ ಮೂರ್ಮೆ ಪುರೋಹಿತ ।
ನುರಿವಗ್ನಿಗೆ ಕೊಡಿಸಿದಂ ಸುಲಾಜೆಯನುಮೆಯಿಂ ॥ ೮೦ ॥

ವ|| ತದನಂತರದೊಳ್ಃ—

ಗುರುವಾಕ್ಯದೆ ವಧುವಂಜಲಿ |
ಪರಿಮಳಿತಸುಲಾಜಧೂಮವಿರಿಸಲ್ ಮೊಗದೊಳ್ ||
ನೆರೆ ಕದಪಿಗಡರ್ದ ಶಿಖೆಯಿಂ |
ದರಗಳಿಗೆಯದೆಸೆದುದವಳ ಕಿವಿನೈದಿಲವೋಲ್ || ೮೧ ||

ಕದಪು ನಸುಸಾಂದು ಕೆಂಪಾಂ |
ತುದು ಕಿವಿಯ ಯವಾಂಕುರಮದು ಕಂದಿತು ಮೇಣ್ ಜಾ ||
ರಿದುದು ಕಣ್ಣಂಜನಂ ತ |
ದ್ವನದೊಳಾಚಾರಧೂಮಮುಮಂ ಗ್ರಹಿಸುವಿನಂ || ೮೨ ||

ಸುತೆ ವಹ್ನಿಯಿವಂ ಮದುವೆಯ |
ಕೃತಿಗೈಸಲೆ ಸಾಕ್ಷಿ ನಿರ್ವಿಚಾರದೆ ಮಾಡೀ ||
ಪತಿಪರಮಾತ್ಮನನೊಡಗೂ |
ಡುತೆ ಧರ್ಮಮನೆಂದು ಪೇಳ್ದನಗಜೆಗೆ ವಿಪ್ರಂ || ೮೩ ||

ವ|| ಇಂತು ಪೇಳೆ:—

ಗುರುವಚನಮನದು ಕಣ್ಗಳ |
ವರೆಗಮುರಳ್ಚಿರ್ಪಕಿವಿಗಳಿಂದುಮೆ ಕುಡಿದಳ್ ||
ಗುರುಸಂತಾಸಮನೊಂದಿಡ |
ಧರೆ ಜಲಧರದಾದಿಸಯಮನೀಂಟುವ ಪಾಂಗಿಂ || ೮೪ ||

ಧ್ರುವನುಂ ಪ್ರಿಯದರ್ಶನನುಂ |
ಧವನಾಧ್ರುವವೀಕ್ಷಿಸೆಂದುಸುರೆ ಗಿರಿಸುತೆ ಕ ||
ಷ್ಟವನೊಂದಿ ನಾಣ್ಚುತಂ ವದ |
ನವನೆತ್ತೀಕ್ಷಿಸಿದೆನೆಂದು ಮೆಲ್ಲನೆ ನುಡಿದಳ್ || ೮೫ ||

ವರವಿಧಿಯರಿದ ಪುರೋಹಿತ ।
ನುರೆ ಪರಿಣಯಕೃತಿಯನಿಂತು ಮುಗಿಸೆ ಕಮಲನಿ ॥
ಷ್ಮರಗತ ಪಿತಾಮಹಂಗಿರ ।
ದೆರಗಿದರಖಿಳರ್ಗೆ ಪಿತೃಗಳಾ ದಂಪತಿಗಳ್ ॥ ೮೬ ॥

ಜಡಜಭವಂ ಕಲ್ಯಾಣಿಯೆ ।
ಪಡೆ ವೀರಾತ್ಮಜನನೆಂದುಮೆಗೆ ಪರಸುತೆ ತಾಂ ॥
ನುಡಿಗೊಡೆಯನಾದೊಡಂ ತ ।
ನ್ಮೃಡನಂ ಪರಸುವುದು ತೋರದೆಯೆ ಜಡನಾದಂ ॥ ೮೭ ॥

ವ॥ ತದನಂತರದೊಳ್:—

ಕೃತಸಮಲಂಕಾರಾನ್ವಿತ ।
ಚತುರಶ್ರಸುವೇದಿಯೊಂದಿ ಕನಕಾಸನಸಂ ॥
ಸ್ಥಿತರಾಗಿ ಲೌಕಿಕಾದ್ರಾ ।
ಕ್ಷತೆಯಾರೋಪಣವನಾಂತರಾ ದಂಪತಿಗಳ್ ॥ ೮೮ ॥

ವ॥ ಆ ಸಮಯದೊಳ್:--

ಸಲೆ ಪಿಡಿದಳ್ ಲಕ್ಷ್ಮಿಯುಮ ।
ರ್ಗಳ ಮೇಲೆ ಸುನಾಳದಂಡದಬ್ಜದ ಕೊಡೆಯಂ ॥
ತಳೆದಿರೆ ಮುತ್ತಿನ ಮಾಲೆಯ ।
ಬೆಳಗಂ ತದ್ದಳದ ತುದಿಯ ಜಲಬಿಂದುಚಯಂ ॥ ೮೯ ॥

ಸರಸತಿ ತದ್ದಂಪತಿಗಳ ।
ನುರೆನುತಿಸಿದಳೆರಡು ತೆರದ ಭಾಷೆಯೊಳಂ ತಾಂ ॥
ವರ ಸಂಸ್ಕೃತದೆ ವರೇಣ್ಯನ ।
ವರನಂ ಪ್ರಾಕೃತದೆ ಸುಖಸುಬೋಧದೆ ವಧುವಂ ॥ ೯೦ ॥

ವ|| ಇಂತು ನುತಿಸಿದನಂತರಂ:—

ಎಸೆಯೆ ಲಲಿತಾಭಿನಯಮುಂ ।
ರಸಾರ್ಹರಾಗಂ ಸುವೃತ್ತಿಸಂಧ್ಯನುಕೂಲಂ ॥
ಮಿಸುಪಪ್ಸರರೈದೆ ಪ್ರಯೋ ।
ಗಿಸಿದ ಸುನಾಟಕವ ನೋಡಿದರ್ ಕ್ಷಣಮಿರ್ರ್ವರ್ || ೯೧ ||

ಬಳಿಕಂ ಮಕುಟಸುಬದ್ಧಾಂ ।
ಜಲಿಗಳ್ ಸುರರೆರಗಿ ತತ್ಪ್ರಿಯಾನ್ವಿತ ಶಿವನಂ ॥
ಜಲಜಾಸ್ತ್ರಂ ಶಾಪಾಂತದೆ ।
ಕಳೇಬರವನೊಂದಿ ಸೇವಿಪುದ ಯಾಚಿಸಿದರ್ ॥ ೯೨ ॥

ಉಳಿದು ಮುಳಿಸಂ ಹರಂ ತ ।
ನ್ನೊಳ ಮವನಂಬುಗಳನೆಸೆವುದನುಮೋದಿಸಿದಂ ॥
ಫಲಿಸನೆ ಸಮಯವರಿತು ತಾಂ ।
ತಿಳಿಸಿದ ಕೃತಿವಿದರ ಬಿನ್ನಪಂಗಳೊಡೆಯರೊಳ್ ॥ ೯೩ ॥

ಬಳಿಕಂ ಶಶಿಧರನಮರರ ।
ನುಳಿದಗಪತಿಕನ್ಯೆಯುಂ ಕರದೆ ಪಿಡಿಯುತೆ ತಾಂ ॥
ಸಲೆ ಪೊಕ್ಕಂ ಪೊಂಗಳಸದೆ ।
ತೊಳಪ ಕ್ಷಿತಿರಚಿತಶಯನಯುತಮಂದಿರಮಂ || ೯೪ ||

|| ವೃ ||

ಪವಡಿಸ ಗೇಹದೊಳ್ ನವವಿವಾಹದಲಜ್ಜೆಯೊಳೊಪ್ಪುತಂ ನಿಜಾ ।
ಸ್ಯವ ಪಿಡಿದೆತ್ತೆ ತಾಂ ತಿರುಗಿಸುತ್ತೆಯುಮಾತ್ಮಸಖೀಜನರ್ಗಮೊಂ ||
ದುವ ಕಡುಕಷ್ಟದಿಂ ಪ್ರತಿವಚಂಗುಡುತಿರ್ಪ ಗಿರೀಂದ್ರಜಾತೆಯುಂ |
ಶಿವನುರೆಗೂಢದೊಳ್ ನಗಿಸುಗುಂ ಪ್ರಮಥಾನನಚೇಷ್ಟೆಯಿಂದೆ ತಾಂ||

ಪಾರ್ವತೀತಪಃಫಲೋದಯನಾಮಕ ಸಪ್ತಮಸರ್ಗಂ

— ಸಂಪೂರ್ಣಂ —

ಅಷ್ಟಮ ಸರ್ಗಂ.

ಕಂ॥ ಪರಿಣಯದನಂತರಂ ತ।
ದ್ಗಿರಿಸುತೆಗೊದಗಿರ್ದ ರತಿಭಯದೊಳಂ ಚೇತೋ।
ಹರಮೆನಿಸಿದ ಪಂಕೇರುಹ।
ಶರವರ್ಧಕ ಸೌಖ್ಯಮೊಗೆದುದಾ ಶಂಕರನೊಳ್ ॥ ೧ ॥

ನುಡಿಯಿಸೆ ತಾಂ ಮಾರ್ನುಡಿಯಳ್।
ಪಿಡಿದುಟ್ಟುದ ಸೆಳೆಯ ಪೋಗಲೆಳಸುತ್ತಿರ್ದಳ್ ॥
ಪಡುವಳ್ ತಿರುಗಿಸಿ ಮೊಗಮಂ।
ಮೃಡಂಗೆ ಸುಖಮಾದುದಗಜೆಯಿಂತೆಸಗಿದೊಡಂ ॥ ೨ ॥

ಹರನಳ್ತಿಯಿಂದೆ ನಿದ್ರಿಪ।
ತೆರದಿಂ ದಿರಲತ್ತಲದ್ರಿಸುತೆ ಮೊಗವಿಡೆ ಕ।
ಣ್ದೆರೆಯೆ ನಗುತಂ ಪ್ರಿಯಂ ಮಿಂ।
ಚುರೆ ಸೋಂಕಲದೆಂತಿರಂತೆ ಕಣ್ಮುಚ್ಚಿರ್ದಳ್ ॥ ೩ ॥

ನಡುಕಂಗೊಂಡುಮೆ ಪೊರ್ಕುಳ।
ದೆಡೆಗಿಟ್ಟೀಶ್ವರನ ಕರವ ತಾಂ ನೂಂಕಿದೊಡಂ ॥
ಬಿಡದಂತಿರಾಗಳೇ ಮಿಗೆ।
ಸಡಿಲ್ದುದವಳುಟ್ಟ ದುಗುಲದುಡೆಗಂಟದು ತಾಂ ॥ ೪ ॥

ಹರನಂ ರಹದೊಳ್ ನೀನೀ।
ತೆರದಿಂ ಸಖಿ ಸೇವಿಸಂಜದೆಂದು ಕೆಳದಿಯಂ ॥
ಒರೆಮದನಿದಿರೊಳ್ ಕಾಂತಂ।
ಬರಲಾಕುಲೆಯಾಗಿ ಗೌರಿಯುದ ಮರೆದಿರ್ದಳ್ ॥ ೫ ॥

ನುಡಿಯಲ್ ತೊಡಗಿಸಲೆಂದಾ।
ನ್ಮೃಡನಾವುದೊ ವಿಷಯಮನೆತ್ತಿ ಕೇಳ್ವಿನಮುದ ತಾಂ॥
ಕಡೆನೋಟದೊಳೊಪ್ಪುತೆ ನೂ।
ರ್ನ್ನುಡಿಯುಂ ಮಸ್ತಕದ ಕಂಪನಮನಾಗಿಸಿದಳ್ ॥ ೬ ॥

ಹರನೇಕಾಂತದೆ ಸೆಳೆಯಲ್।
ಗಿರಿಸುತೆಯಂಬರವನವನ ಕಣ್ಣೆರಡನವಳ್॥
ಕರಯುಗದೆ ಮುಚ್ಚೆ ಫಣೆಗಣ್॥
ಪರಿಕಿಸುತಿರೆ ಮೂಢಳಾದಳಫಲೋದ್ಯಮದಿಂ ॥ ೭ ॥

ಕುಡದೆಯೆ ಚುಂಬನಕಧರವ।
ಕುಡದೆಯೆ ತಳ್ಕೈಸಲೊಡಲ ನೋಣ್ ಪ್ರತಿಕೃತಿಯಂ॥
ಪಡೆಯದೆ ಮದನನ ತಡೆದುಂ।
ನ್ಮೃಡಂಗೆ ಸುಖಮಿತ್ತುದಾರತಂ ನವವಧುವಾ ॥ ೮ ॥

ರದನಚ್ಛದ ವಿಕ್ಷತಿಯಾ।
ಗದ ಮುಖಚುಂಬನದೊಳವ್ರಣಾಂಕಿತ ನಖಕ॥
ರ್ಮದೊಳಂ ತಳ್ತ ನಿಜಪ್ರಿಯ।
ಸದಯಸುರತಿಯಲ್ಲದನ್ಯಮಂ ಸಹಿಸಳವಳ್ ॥ ೯ ॥

ಇನನುದಯದೆ ರಾತ್ರಿಯ ವ।
ರ್ತನಮಂ ಕೇಳಲ್ಕೆ ತೊಡಗೆ ಸಖಿಯರ್ಕಳದಂ॥
ಮನಮುಸಿರಲೆಳಸಿದೊಡಮಗ।
ತನುಭವೆ ಪರಿಹರಿಸಳವರ ಬಯಕೆಯ ನಾಣಿಂ ॥ ೧೦ ॥

ವರಮುಕುರದೆ ರತಿಚಿಹ್ನವ।
ಪರಿಕಿಸುವಾ ಗೌರಿ ಬೆಂಗೆವಂದ ಪ್ರಿಯನಾ॥
ಪರಿಜವ ನಿಜಬಿಂಬದ ಪಿಂ।
ದುರೆ ನೋಡಲ್ ನಾಣ್ಚುತಾವ ಚೇಷ್ಟೆಯನೆಸಗಳ್ ॥ ೧೧ ॥

ಪರಮಾತ್ಮಂ ತನುಜಾತೆಯು ।
ಹರೆಯುವ ಭೋಗಿಪುದ ನೋಡಿ ತಾಯ್ನುಲವಾಂತಳ್ ‖
ಪರಿಹರಿಪರಲ್ತೆ ಪೆಣ್ಗಳ್ ।
ವರಪತಿಯುತರಾಗಿ ಮಾತೃಜನಮನದಳಲಂ ‖ ೧೨ ‖

ಹರನೆಂತೊ ಗೈದು ಕೆಲವಾ ।
ಸರದೊಳ್ ರತಿಯಲ್ಲಿ ಮುಂದುವರಿಸೆ ಪ್ರಿಯೆಯುಂ ‖
ತೊರೆದಳ್ ಮೆಲ್ಲನವಳ್ ತಾಂ ।
ಸ್ಮರಸುಖದನುಭವದೆ ಸುರತದುಃಖಸ್ಥಿತಿಯುಂ ‖ ೧೩ ‖

ಉರವ ಬಿಗಿದಪ್ಪೆ ತಾನುಂ ।
ಪರಿರಂಭವಗೆಯ್ವಳೆರೆದ ಮೊಗವ ತಿರುಗಿಸಳ್ ‖
ಸರಿಸುವಳದ್ರಿಜೆ ಮೆಲ್ಲನೆ ।
ಹರಕರಮಂ ಮೇಖಲಾಪರಿಚಯೋತ್ಸುಕಮಂ ‖ ೧೪ ‖

ಸರಸಕ್ರಿಯೆಯೊಳಮುಪ್ರಿಯ ।
ಪರಮಲ್ಲದ ನುಡಿಯೊಳಂ ಕ್ಷಣದ ವಿರಹದೆ ಕಾ ‖
ತರಿಪ ಪ್ರೇಮಮುದು ಪರ ।
ಸ್ಪರಾಶ್ರಯಂ ಕೆಲದಿನದೊಳೆ ವರ್ಧಿಸಿತವರೊಳ್ ‖ ೧೫ ‖

ವರನಂ ತಕ್ಕವನನದೆಂ ।
ತಿರೆ ವಧುವವನವಳನಂತೆ ತಾಂ ಪ್ರೇಮಿಸುಗುಂ ‖
ಸುರನದಿ ತಳ್ತಿರೆ ತಾಂ ಸಾ ।
ಗರನಂ ತನ್ಮುಖರಸೈಕಸುಖಿಯುವನಲ್ತೇಂ ‖ ೧೬ ‖

ರತಮಂ ರಹದೊಳ್ ಬೋಧಿಪ ।
ಶಿತಿಕಂಠನ ಶಿಷ್ಯೆಳಾಗಿ ಕಲ್ತು ಯುವತಿ ಸಂ ‖
ಮತಚತುರತೆಯುಂ ತತ್ಪ್ರಾ ।
ರ್ಥಿತಿಯುದನೇ ಗೆಯ್ದುಳೊಲ್ದು ಗುರುದಕ್ಷಿಣೆಯುಂ ‖ ೧೭ ‖

ಕಡಿದುಳಿಯೆ ಕೆಂದುಟಿಗಳಂ।
ಪಡೆದಳಲಿಂ ಕೊಡಪಿ ಕೈಗಳಂ ನಗಸುತೆ ತಾಂ॥
ನೃಡನ ಶಿರದೆಡೆಯ ಶೀತಲ।
ದುಡುಪತಿಕಳೆಯಿಂ ಕ್ಷಣಂ ನಿವಾರಿಸಿದಳದಂ ॥ ೧೮ ॥

ಚುಂಬನದಿಂದಲಕಸುಚೂ।
ರ್ಣಂ ಬೀಳೆ ಲಲಾಟನೇತ್ರದೊಳ್ ಶಂಕರನುಂ ॥
ಅಂಬಿಕೆಯ ವದನ ಮರುತಂ।
ಗಂಬುಜಗಂಧಾನ್ವಿತಂಗೆ ಕೊಟ್ಟನದಂ ತಾಂ ॥ ೧೯ ॥

ಇಂತಿಂದ್ರಿಯಸುಖಭೋಗದೆ।
ಕಂತುಗನುಗ್ರಹಿಸಿ ಗೌರಿಯಿಂ ತಳ್ತು ಕಾ॥
ಲಾಂತಕನೈಸಲೆ ವಾಸಿಸಿ।
ದಂ ತನ್ನಗರಾಜಭವನದೊಳ್ ಮಾಸಾಂತಂ ॥ ೨೦ ॥

ವ॥ ಆ ಬಳಿಕ್ಕಂ:—

ಸುತೆಯಗಲಿಕೆಯುಳಲಿಂ ಪೀ।
ಡಿತನಿಂ ಹಿಮವಂತನಿಂ ಪಡೆದು ಸಮ್ಮತಿಯಂ॥
ಅತುಲಿತಗತಿಯುತ ವೃಷಭ।
ಸ್ಥಿತನಾಗಿ ಶಿವಂ ವಿಹರಿಸಿದಂ ಪಲವೆಡೆಯೊಳ್ ॥ ೨೧ ॥

ಗಿರಿಸುತೆ ಬೆನ್ನಪ್ಪಿರೆ ತ।
ತ್ಪುರಮಥನಂ ವಾಯುವೇಗವಾಹನದೊಳ್ ತಾಂ ॥
ಸುರನಗಮನೊಂದಿ ಸುರತದೊ।
ಳಿರುಳಂ ಪೊಂದಳಿರ ಪಾಸುವೊಳ್ ತಾಂ ಕಳೆದಂ ॥ ೨೨ ॥

ವ|| ಇಂತುಮಲ್ಲದೆ:—

ಜಲರುಹನಾಭಪದಾಂಕಿತ ।
ಶಿಲೆಗಳೊಳಂ ನೂತನಾಮೃತಸುಬಿಂದುಗಳೊಳ್ ||
ತೊಳಗುವ ಮಂದರಕಟಕಂ ।
ಗಳೊಳಗಜಾಸ್ಯಾಬ್ಜಭೃಂಗನುರೆ ವಾಸಿಸಿದಂ || ೨೩ ||

ವ|| ಮಂದರದೊಳಿಂತು ವಾಸಿಸಿದುದಲ್ಲದೆಃ—

ದಶಗಲಕೃತರವಭೀತೆಯು ।
ರಸಾಧರಾತ್ಮಜೆಯು ತೋಳ್ಗಳಪ್ಪಿರೆ ಕೊರಳಂ ||
ವಿಶದೇಂದುಜೋತ್ಸ್ನವುಂ ಭೋ ।
ಗಿಸಿದಂ ಕೈಲಾಸಶೈಲದೊಳ್ ಜಗದೀಶಂ || ೨೪ ||

ವ|| ಮತ್ತಮೊಂದುದಿನಂಃ—

ಮಲಯುದೆ ರಮಿಸುವ ಶಿವನಾ ।
ಲಲನೆಯು ಬಳಲಿಕೆಯನ್ನೈದೆ ಪ್ರಿಯಭಾಷಿಯವೋಲ್ ||
ಕಳೆದಂ ಲವಂಗಕೇಸರ ।
ಕಲಿತಂ ಸಂಚಲಿತಚಂದನದ್ರುಮಮರುತಂ || ೨೫ ||

ವ|| ತದನಂತರದೊಳ್:—

ಕನಕಾಂಬುಜತಾಡಿತಕಾಂ ।
ತನ ಕರಮುಕ್ತಾಂಬುಗಕ್ಷಿಮುಚ್ಚಿ ಗಿರಿಜೆ ಬಾ ||
ನಿನ ತೊರೆಯೊಳ್ ಕ್ರೀಡಿಸಿದಳ್ ।
ಜನಿಯಿಸೆ ಮೀನಾಳಿಯೆರಡನೆಯ ಮೇಖಲೆಯಂ || ೨೬ ||

ಸುರಪಪ್ರಿಯಾಲಕೋಚಿತ ।
ಸುರತರುಸುಮದಿಂದಲಂಕರಿಸುತುಮೆಯುಂ ಶಂ ॥
ಕರನಿರ್ದಂ ನಂದನದೊಳ್ ।
ಚಿರಮುಮರಿಯುರಳ್ತಿಯಿಂದನಿರೀಕ್ಷಿಸೆ ತನ್ನಂ ॥ ೨೭ ॥

ದಿವಭುವಿಗಳ ಸೌಖ್ಯವನನು ।
ಭವಿಸಿ ಪ್ರಿಯೆಯೊಡನೆ ಶಂಭುವಿಂತೊಂದು ದಿನಂ ॥
ರವಿ ರಕ್ತವರ್ಣನಾಗಿರೆ ।
ತವೆ ಸಾರ್ದಂ ಗಂಧಮಾದನೋರ್ವೀಧರಮಂ ॥ ೨೮ ॥

ಮೃಡನಾಗಿರಿಯೊಳ್ ಪೊನ್ನರೆ ।
ಯೊಡೆಯೊಳ್ ಕುಳ್ಳಿರ್ದು ಕಣ್ಗೆಡಿಸದಾ ರವಿಯುಂ ॥
ನಡೆ ನೋಡುತಿಂತು ವಚಿಸಿದ ।
ನೆಡದೋಳಂ ಸೋಂಕಿ ಶೋಭಿಪಿನಿಯುಳ್ಗಾಗಳ್ ॥ ೨೯ ॥

ಸರಸಿಜದ ಶೋಭೆಯುಂ ಭವ ।
ದರುಣೋಪಾಂತಾಕ್ಷಿಗಿತ್ತು ದಿನಪನಿವಂ ಸಂ ॥
ಹರಿಪಂ ಪಗಲಂ ಪದ್ಮೋ ।
ದರನೀ ಜಗವಂತ್ಯದಲ್ಲಿ ಸಂಹರಿಸುವವೋಲ್ ॥ ೩೦ ॥

ಸರಸೀರುಹಮಿತ್ರಂ ಪರಿ ।
ಹರಿಸೆ ನಿಜಾಂಶುಗಳ ವಾರಿಕಣಸಂಗವ ತಾಂ ॥
ಸುರಚಾಪದ ಪರಿವೇಷಂ ।
ಮರೆಯಾದುದು ನಿನ್ನ ಪಿತನ ನಿರ್ಝರಜಲದೊಳ್ ॥ ೩೧ ॥

ತೊರೆದರೆದಿಂದಂಬುಜಕೇ ।
ಸರಮಂ ಕೊಂಕಿಸುತೆ ಕೊರಳ ಕೂಗುತೆ ಕೊಳದೊಳ್ ॥
ಮರುಗುವ ಕೋಕಮಿಥುನದಂ ।
ತರಮುಲ್ಪಮನಲ್ಪಮಾಯ್ತು ವಿಧಿಬಲದಿಂದಂ ॥ ೩೨ ॥

ಕರಿಗಳ್ ಪಗಲಿನ ತಾಣವ ।
ತೊರೆಯುತೆ ಸಲ್ಲಕಿಯ ತಳಿರಗಂಧದ ಜಲಮಂ ॥
ಸರಸಿಜಬದ್ಧಮಧುಪಮಂ ।
ನೆರೆಕುಡಿಗುಂ ದಿನದ ಭಕ್ಷಣಕೆ ಸಾಲ್ವನ್ನಂ ॥ ೩೩ ॥

ಮಿತಭಾಷಿಣಿ ಪರಿಕಿಸು ದಿನ ।
ಪತಿಯುಪರದಿಗಂತಲಂಬಿಯಾಗುತೆ ದೀರ್ಘ ॥
ಪ್ರತಿಬಿಂಬದೆ ಕೊಳದುದಕ ।
ಕ್ಕತುಲಸುವರ್ಣಮಯಸೇತುಗಟ್ಟದನೆನಿಕುಂ ॥ ೩೪ ॥

ಕೆಸರಿನ ಬೆಂಚೆಯೊಳಾಡುತೆ ।
ಬಿಸಿಲಂ ಕಳೆದೆಳ್ದು ಬರ್ಕುಮಿದೊ ತಾಂ ತಿಂದಾ ॥
ಬಿಸದ ಮೊಳಕೆಗಳ ಮಾಳ್ಕೆಯೊ ।
ಳೆಸೆವ ಸುದಂಷ್ಟ್ರಗಳ ವನಕಿಟವ್ರಜಪತಿಗಳ್ ॥ ೩೫ ॥

ಕನಕರಸಗೌರಬರ್ಹದೆ ।
ಮಿಸುಗುತೆ ತರುಶಿಖರಗತಮಯೂರಮಿಡೆಸೆಗುಂ ॥
ತನುತೆಯನೊಂದುತಮಿಪ್ಪೀ ।
ದಿನಾತ್ಯಯಾತಪವ ಕುಡಿವವೋಲ್ ಪರಿಕಿಸು ನೀಂ ॥ ೩೬ ॥

ಬಿಸುಗದಿರಂ ಪರಿಹರಿಸಿರೆ ।
ಬಿಸಿಲುದಕವ ಪೂರ್ವದಿಕ್ತಿಮಿರಮೊರ್ಕಡೆಯಾ ॥
ಕೆಸರಂತೆ ತೋರುತಿರೆ ಯಾ ।
ಗಸಮುಣಮೊಣಗಿರ್ದ ಕೊಳದ ಮಾಳ್ಕೆಯೊಳೆಸೆಗುಂ ॥ ೩೭ ॥

ವ॥ ವೃತ್ತಸ್ತನಿಯೆ ಮತ್ತ ಮಿತ್ತಲೀಕ್ಷಿಸು:—
ಎಲೆವನೆಮುಂದಿರ್ಪ ಮೃಗಂ ।
ಗಳೊಳಂ ಬೇರ್ಗೆರೆದ ಜಲದೆ ತೋಯ್ದ ಗಿಡುಗಳೊಳ್ ॥
ಒಳವುಗುವ ಹೋಮಧೇನುಗ ।
ಳೊಳಮುಜ್ವಲವಹ್ನಿಯಾಶ್ರಮಂಗಳಿವೆಸೆಗುಂ ॥ ೩೮ ॥

ವಸತಿಯು ಬಯಸಿದ ಭೃಂಗ ।
ಕ್ಕೊಸೆದವಕಾಶಮನೆ ಕುಡುವುದಕ್ಕೆಂಬವೊಲೀ ॥
ಬಿಸಜಂ ಕ್ಷಣಕಾಲಂ ತಾಂ ।
ನಸು ಬಿರ್ಚಿರ್ದಪುದು ಮುಕುಳಿತಾವಸ್ಥೆಯೊಳಂ ॥ ೩೯ ॥

ಮಿಗೆ ಮುಳುಗಿ ನಸುವೆ ಮಿಕ್ಕಂ ।
ಶುಗಳಿಂ ತಳ್ತರುಣರವಿಯಿನಪರಾಶೆ ಮನಂ ॥
ಬುಗುವುದು ಕಿಂಜಲ್ಕದ ಬಂ ।
ದುಗೆವೂವಿನ ತಿಲಕವಿಟ್ಟ ಕನ್ಯೆಯ ತೆರದಿಂ ॥ ೪೦ ॥

ವ॥ ಮತ್ತಮಿತ್ತ ನೋಡು:—

ಕಿರಣೋಷ್ಣಾಹಾರದ ಸಹ ।
ಚರಮುನಿಗಳ್ ವಹ್ನಿಗರ್ಪಿಸಿದ ತೇಜದ ಭಾ ।
ಸ್ಕರನಂ ಮಿಗೆ ನುತಿಪರ್ ತ
ದ್ವರರಥಹಯಹೃದ್ಯರವದ ಸಾಮುಶ್ರುತಿಯಿಂ ॥ ॥ ೪೧ ॥

॥ ವೃ ॥

ತುರಗಂಗಳ್ ಯುಗಭುಗ್ನಕೇಸರಯುತಂಗಳ್ ನಾಡೆ ತಾಂ ತಮ್ಮ ಪೆ।
ರ್ಗೊರಳಂ ಬಾಗಿಸಿ ಕರ್ಣಚಾಮರದ ಪೊಯ್ಲಿಂ ಕಣ್ಗಳಂ ಮುಚ್ಚಿಕೊಂ।
ಡಿರೆ ತದ್ವಾಜಿಗಳಿಂದೆ ತಳ್ತು ಗಮಿಪಂ ನೋಡೀ ದಿನಾಧೀಶ್ವರಂ ।
ಚರಮಕ್ಷ್ಮಾಧರಕೀಗಳಿಂತು ದಿನಮುಂ ನೂಂಕುತ್ತೆ ವಾರಾಶಿಯೊಳ್ ॥

ಇನನಸ್ತಮಿಸಿರೆ ನಿದ್ರಿಪು ।
ದೆನಿಕುಂ ನಭಮುಚ್ಚ ತೇಜಕಿಂತುಟೆ ಗತಿಕೇಳ್ ॥
ಘನತೇಜಂ ಪುಟ್ಟಿದ ನೆಲೆ ।
ಮಿನುಗುವುದದು ಪೋಗೆ ತಮದ ತಾಣಮೆನಿಸುಗುಂ ॥ ೪೨ ॥

ಇದೊ ಸಂಧ್ಯೆಯಸ್ತಗಿರಿಯೊಂ।
ದಿದ ಭಾಸ್ಕರವಂದ್ಯವಪುವಿನೊಡನೆಯೆ ಪೋಕುಂ॥
ಉದಯುದೆ ಮೊದಲೆ ಪುರಸ್ಕೃತ।
ಮುದು ತಾನನುಗಮಿಸದೇಂ ವಿಪತ್ತಿನೊಳವನಂ ॥ ೪೪ ॥

ಎಲೆ ಕುಟಿಲಾಳಕೆ ನೀನೈ।
ಸಲೆ ಪರಿಕಿಸಲೆಂದು ಸಂಜೆನೆಣ್ ತೂಲಿಕೆಯಿಂ॥
ದೊಲವಿಂ ಬರೆದವೊಲೆಸೆಗುಂ।
ಜಲಧರಕೋಟಿಗಳಿವಖಿಲವಿಧವರ್ಣಂಗಳ್ ॥ ೪೫ ॥

ಪರಿಕಿಸು ಸಂಜೆಯ ಬಿಸಿಲಿದು।
ಹರಿಕೇಸರಚಯದೊಳಚಲಧಾತುಶಿಖರದೊಳ್॥
ವರಪಲ್ಲವಿತತರುಗಳೊಳ।
ಮುರೆ ತಾನಸ್ತಾದ್ರಿ ಭಾಗಿಸಿಟ್ಟವೊಲೆಸೆಗುಂ ॥ ೪೬ ॥

ಚರಣಾಗ್ರಸ್ಥಿತರಾದರ।
ಪರರವುಳೋದಕಕೃತಾರ್ಘ್ಯರೀ ಮುನಿಗಳ್ ತಾಂ॥
ಪರಿಶುದ್ಧಿಗೆ ಗಾಯತ್ರಿಯ।
ನುರೆ ಜಪಿಸುಗುಮೊಳಗೆ ಸಂಜೆಯಿದಿರೊಳ್ ವಿಧಿಯಿಂ ॥೪೭॥

ಅದರಿಂ ಕ್ಷಣಮೆನಗಂ ಪ್ರಕೃ।
ತದ ವಿಧಿಯುಂ ಗೈಯಲನುಮತಿಸಲರುಹಳ್ ನೀಂ॥
ಒದಗಿಸುಗುಂ ನಿನಗೆ ವಿನೋ।
ದದೆ ಚತುರರ್ ಸಖಿಯರೊಲವನೆಲೆ ಮೃದುವಾಣೀ ॥ ೪೮ ॥

ನುಡಿಯೆ ಪತಿಯಿಂತದಕೆ ಕಿವಿ।
ಗೊಡದೆಯೆ ಗಿರಿಜಾತೆ ತುಟಿಗಡಿದು ತಾಂ ನುಡಿಯಲ್॥
ತೊಗಿದಳನಿಮಿತ್ಯದೆ ತ।
ನ್ನೆಡೆಯಿರ್ಪಾ ವಿಜಯೆಯೆಂಬ ಸಖಿಯೊಡನಾಗಳ್ ॥ ೪೯ ॥

ಮೃಡನುಂ ಮಂತ್ರಕ್ರಮಮಂ ।
ಬಿಡದೆಸಗಿ ದಿನಾಂತವಿಧಿಯ ಮುಗುಳ್ದಂ ನಗೆಯಿಂ ॥
ನುಡಿದನಸೂಯೆಯೊಳೇನಂ ।
ನುಡಿಯದ ಗಿರಿತನುಜೆಯೆಡೆಯನೊಂದೀ ತೆರದಿಂ ॥ ೫೦ ॥

ಕನಿಸನುಳಿ ಸಂಧ್ಯೆಗಾಗಿಯೆ ।
ಮಣಿದೇಂ ಪೆರತಿಲ್ಲ ನಿರ್ನಿಮಿತ್ತಕುಪಿತೆ ಕೇಳ್ ।
ನಿನಗೆ ಸಹಧರ್ಮಚರನೆಂ ।
ದೆನಿಸಿದ ನಾಂ ಕೋಕಸದೃಶವರ್ತನನಲ್ತೇ ॥ ೫೧ ॥

ಬಿದಿ ಪುಟ್ಟಿಸಿ ಪಿತೃಗಳನಾ ।
ವುದನುಳಿದನೊ ತನುವ ಸಂಧ್ಯೆಯೆನಿಸಿತ್ತದೆ ತಾಂ ।
ಉದಯಾಸ್ತಂಗಳೊಳರ್ಚಿತ ।
ಮದರಿಂ ಮಾನಿನಿಯೆ ಗೌರವಮಿದೆನಗಿದರೊಳ್ ॥ ೫೨ ॥

ವ॥ ಕಂತುರಿಪುವಿಂತು ಕಾಂತೆಯ ಸಂತೈಸಿ ಮತ್ತಂ ಸಂಧ್ಯಾದಿವರ್ಣನದೊಳ್ ತೊಡಗಿದನದೆಂತೆನೆ:—

ನಡೆ ನೋಡು ತಮುಮಡರೆ ನೆಲ ।
ವಿಡಿದಂತೆವೊಲಿರ್ಪ ಸಂಜೆಯೊಗಳ್ ತಾನೊ ।
ರ್ಕಡೆಯೊಳ್ ತಮಾಲವೃಂದ ।
ಕ್ಕೆಡೆಯಿತ್ತ ಸುಧಾತುರಸದ ನದಿಯಂತಿರ್ಕ್ಕುಂ ॥ ೫೩ ॥

ಮುಳುಗುತ್ತುಳಿದರುಣಾಕೃತಿ ।
ಯೊಳಕೊಂಡೀ ಸಂಜೆನಿಸಿಲನಪರಾಶೆಯಿದೋ ॥
ತಳೆದರುಣಲಿಪ್ತಖಡ್ಗವ ।
ಕೊಳುಗುಳದಿಳೆಯಡ್ಡಮೆತ್ತಿ ಪಿಡಿದವೊಲೆಸೆಗುಂ ॥ ೫೪ ॥

ಪಗಲಿರುಳ್ಗಳ ಮಧ್ಯದೆ ತಾ ।
ನೊಗೆದೀ ಸಂಧ್ಯಾತಪಂ ಸುಮೇರುವ ಬೆನ್ನೊಳ್ ॥
ಪುಗೆ ಕಗ್ಗತ್ತಲೆ ಸರ್ವಾ ।
ಶೆಗಳೊಳ್ ತಡೆಯಿಲ್ಲದಂತೆ ಜೃಂಭಿಸುತಿರ್ಕುಂ ॥ ೫೫ ॥

ಕೆಳಗಂ ಮೇಲಿರ್ಕಡೆಯೊಳ್ ।
ಸಲೆ ಬೆನ್ನೊಳ್ ಮುಂದೆ ದಿಟ್ಟ ಪರಿಯದು ನಿಶೆಯೊಳ್ ॥
ಬಳಸಿರೆ ತಿಮಿರಜರಾಯುವಿ ।
ದಿಳೆಯ ಜನಂ ಗರ್ಭವರ್ತಿಯಾದವೊಲೆಸೆಗುಂ ॥ ೫೬ ॥

ಸಮಲಂ ನಿರ್ಮಲಮುಂ ವ ।
ಕ್ರಮುಮಾರ್ಜವಮುಂ ಸ್ಥಿರಂ ಚರಮುಮಿನಿತೆಲ್ಲಂ ॥
ತಮದಿಂ ಸಮಮಾದುದು ತರ ।
ತಮತೆಯ ಕಳೆವಲ್ಪರಾ ವಿವೃದ್ಧಿಯೆ ಗರ್ಹ್ಯಂ ॥ ೫೭ ॥

ಇರುಳ ತಿಮಿರವಿಂದ ಕಳೆಯ ।
ಲ್ಕಿರುಳಾಣ್ಮಂ ನಿಸದನುದಯಿಸುಗುಮಬ್ಜಾಸ್ಯೇ ॥
ಪರಿಕಿಸು ಪೂರ್ವದಿಶಾಮುಖ ।
ಮುರೆ ಕೇದಗೆದೂಳಿಯಾವರಿಸಿದವೊಲಿರ್ಕುಂ ॥ ೫೮ ॥

ಮಂದರದ ಮರೆಯೊಳಿರೆ ತಾಂ ।
ಚಂದಿರನಿದು ತಾರಕಾನ್ವಿತದ ನಿಶೆಯೆಸೆಗುಂ ॥
ಪಿಂದೆ ನುಡಿಗೇಳುತಂ ನಾಂ ।
ನಿಂದಿರೆ ನೀಂ ಸಖಿಯರಿಂದೆ ತಳ್ತಿಸೆಯುವವೊಲ್ ॥ ೫೯ ॥

ನೆರೆಸಂಜೆಯು ವರೆಗಂ ಬಿ ।
ರ್ಚಿರದ ರಹಸ್ಯವನೆ ಪೊರಗೆಡೆಪುವಂತಿರುಳಿಂ ॥
ಹುರಿದುಂಬಿಸಿದೀ ಪ್ರಾಗ್ದಿಶೆ ।
ಪೊರಗೆಡೆಪುಗುಮಿಂದುರುಚಿಯ ನಗೆಯಿಂ ಶಶಿಯುಂ ॥ ೬೦ ॥

ಸಲೆ ನೋಡು ಪಕ್ವಫಲಿನೀ ।
ಫಲಕಾಂತಿಯು ಚಂದ್ರನಾಗಸದೊಳೆಸೆಯುತೆ ನೋಣ್ ॥
ಕೊಳದೊಳ್ ಪಡಿನೆಳಲಿಂದಂ ।
ಪೊಳೆಯುತಮುಗಲಿರ್ದ ಕೋಕಮಿಥುನವ ಪೋಲ್ಗುಂ ॥೬೦॥

ಕುವಲಯಬಂಧುಕರಂಗಳ್ ।
ನವೋದಿತಂಗಳ್ ಯವಾಂಕುರಸುಮೃದುಗಳ್ ತಾಂ ॥
ತವೆ ನಿನ್ನ ಕಿವಿದೊಡವನೆಸ ।
ಗುವ ಕೃತಿಗೆ ನಖಾಗ್ರದಿಂದೆ ಭೇದಿಸಲಕ್ಕುಂ ॥ ೬೧ ॥

ಕುರುಳಂ ಬೆರಳಿಂದೆಂತಂ ।
ತಿರೆ ಕರದಿಂ ಪಿಡಿದು ಕಳ್ತಲೆಯ ರಜನೀಶಂ ॥
ನೆರೆ ಚುಂಬಿಪನೋ ಮುಕುಳಿತ ।
ಸರೋಜನೇತ್ರದ ನಿಶಾಮುಖಮನೆನೆ ತೋರ್ಕುಂ ॥ ೬೨ ॥

ಗಿರಿತನುಜೆ ನೋಡು ಶಶಿನವ ।
ಕರಂಗಳಿಂದರ್ಧತಿಮಿರಮಳಿಯೆ ನಭಂ ತಾಂ ॥
ಕರಿಯಾಟದೆ ಕದಡಾಗುತೆ ।
ಮರಳ್ದುಂ ತಿಳಿಗೊಳ್ವ ಮಾನಸದ ವೋಲ್ ತೋರ್ಕುಂ ॥ ೬೪ ॥

ತೊರೆದರುಣತೆಯಂ ನಿರ್ಮಲ ।
ತರಮಂಡಲನಾದ ನೀ ಸುಧಾಕರನೀಗಳ್ ॥
ಪರಿಶುದ್ಧ ಪ್ರಕೃತಿಗಳೊಳ್ ।
ಚಿರಮಿರ್ಪುದೆ ಕಾಲದೋಷಜನಿತವಿಕಾರಂ ॥ ೬೫ ॥

ತೊಳಗುವುದುನ್ನತಮಪ್ಪೀ ।
ಸ್ಥಲದೊಳ್ ಶಶಿಕಾಂತಿ ನಿಶೆಯ ತಮಮಿಳಿದುದು ಕೇಳ್ ॥
ನಳಿನಭವಂ ಗುಣದೋಷಂ ।
ಗಳ ಗತಿಯಂ ತತ್ಸಮಾನಮಾಗಿಯೆ ಗೆಯ್ದಂ ॥ ೬೬ ॥

ಗಿರಿ ತಾಂ ಸಾನುಮಹೀಜನಿ ।
ಸರದೊಳ್ ಸಲೆ ಮಲಗಿದೀ ಮಯೂರಂಗಳ ನೆ ॥
ಳ್ಚರಿಸುವನಕಾಲದೊಳ್ ಶಶಿ ।
ಕರದಿಂ ಸಸಿಗಲ್ಗಳೊಳ್ ಜನಿಪನೀರ್ವನಿಯಿಂ ॥ ೬೭ ॥

ಸುರತರುಗಳಗ್ರದೊಳ್ ವಿ ।
ಸ್ಫುರಿಪಂಶುಗಳಿಂದೆ ಚಂದ್ರನೀಗಳ್ ತದ್ಭಾ ॥
ಸುರಹಾರಯಷ್ಟಿಗಣನೆಯ ।
ನುರೆ ಮಾಡಲ್ಕೆಳಸನೆನಿಸುಗುಂ ಸುಂದರಿಯೇ ॥ ೬೮ ॥

ಇರೆ ನಿಮ್ನೋನ್ನತಭಾಗಂ ।
ಗಿರಿಗಿವರೊಳ್ ತಿಮಿರಮಿಶ್ರದೀ ಚಂದ್ರಿಕೆ ತಾಂ ॥
ಸ್ಫುರಿಸುವುದು ಮತ್ತದಂತಿಯ ।
ವಿರಚಿತಬಹುವಿಧಸುಚಿತ್ರಯುತ ಭೂತಿಯವೋಲ್ ॥ ೬೯ ॥

ಉಳಿದುಳಿದುಸಿರಂ ಕುಡಿದೀ ।
ತಿಳಿಜೊನ್ನವ ಸೈಸಲಾರದಂತಿರೆ ಕುಮುದಂ ॥
ಅಳಿರವದಿಂ ಮೊರೆಯಿಡುತಂ ।
ವಲಮಿದು ತಾಂ ಬಿರಿದುಪೋಯ್ತು ವೃಂತದವರೆಗಂ ॥ ೭೦ ॥

ಪರಿಶುಭ್ರಚಂದ್ರಿಕೆಯೊಳೊದ ।
ಗಿರೆ ರೂಪದ ಸಂಶಯಂ ಸುರದ್ರುಮದೊಳ್ ಜೋ ॥
ಲ್ದುರುವಸನಕ್ಕೆಲೆ ಮಾನಿನಿ ।
ಪರಿಕಿಸು ಸಂದೆಗಮದನಿಲಚಲನದೆ ಪೋಕುಂ ॥ ೭೧ ॥

ತರುತಳಗತ ಸುಮಮೃದುಲಮ ।
ನುರುಪತ್ರನಿಶಕಲಿತೇಂದುಕಾಂತಿವಲಯಮಂ ॥
ಬೆರಳಿಂದಂ ಪಿಡಿದೆತ್ತುತೆ ।
ನೆರೆ ನಿನ್ನಯ ಕುರುಳಕಟ್ಟಲಿದರಿಂ ಶಕ್ಯಂ ॥ ೭೨ ॥

ಸುವಿಮಲಮುಖಿ ಕೂಡಿದನೀ ।
ಕುವಲಯಪತಿ ತರಲಮಂಡಲದ ತಾರೆಯ ತಾಂ ॥
ನವಪರಿಣಯಭಯದಿಂ ಕಂ ।
ಪವನೊಂದಿದ ವಧುವ ಕೂಡಿದಂತಿರೆ ಕಾಂತಂ ॥ ೭೩ ॥

ಶಶಿಬಿಂಬನಿಹಿತನೇತ್ರೆಯೆ ।
ಶಶಿಕಾಂತಿಯಿದಿದಿರ ಪಡಿನೆಳಲನೊಂದುತ್ತಂ ॥
ವಿಸುಪ ಶರಕಾಂಡಗೌರೋ ।
ಲ್ಲಸಿತದ ತಾವಕಕಪೋಲದೊಳ್ ವರ್ಧಿಪುದೇಂ ॥ ೭೪ ॥

ವ॥ ಇಂತಿರ್ಪ ಸಮಯದೊಳ್ ತಮ್ಮೆಡೆಗೆ ಬರ್ಪೋರ್ವ ವನ ದೇವತೆಯಂ ಕಂಡು ಶಂಕರಂ:—

ವನಸಂಸ್ಥಿತೆ ಸುರತರುಸಂ ।
ಜನಿತಾಸವವುಳ್ಳ ಶೋಣಿತಾರ್ಕಮಣಿಸುಭಾ ॥
ಜನವಾಂತು ಗಂಧಮಾದನ ।
ವನಾಧಿದೇವತೆಯೆ ನಿನ್ನ ಬಳಿಗಿದೊ ಬಂದಳ್ ॥ ೭೫ ॥

ಇದು ನಿನ್ನಯ ವದನಂ ಸಾ ।
ಜದೊಳುನ್ಮದನಯನಮಾದ್ರ್ರಕೇಸರಗಂಧಾ ॥
ಸ್ಪದಮುಂ ಮಧುವಿದರೊಳವೊ ।
ಕ್ಕಿದಕಿನ್ನೇಂ ಗುಣವಿಶೇಷಮಂ ಮಾಳ್ಪುದು ಪೇಳ್ ॥ ೭೬ ॥

ವ॥ ಇಂತುಸುರುತ್ತಮಿರದೆ ಮತ್ತಂ:—

ಕೆಳದಿಯರ ಭಕ್ತಿಯಂ ಕೈ ।
ಕೊಳಲುಚಿತಂ ಕಾಮದೀಪಕಮನೀ ಮಧುವಂ ॥
ಸಲೆ ಸೇವಿಸೆಂದು ಜಾಣ್ನುಡಿ ।
ಯೊಳೆ ಕುಡಿಸಿದನದ್ರಿತನುಜೆಗದನಾ ಗಿರಿಶಂ ॥ ೭೭ ॥

ಅಗಜೆಗೆ ತನ್ಮಧುಪಾನದಿ ।
ನೊಗೆದ ವಿಕಾರವುದೆ ರಮ್ಯಮಾದುದು ಚೂತಂ ॥
ಬಗೆಯಲ್ಕಾಗದ ವಿಧಿಯಿಂ ।
ಜ್ಜಗದಿಂ ಸಹಕಾರಮಾಗಿ ಪರಿಣಮಿಸಿದವೋಲ್ ॥ ೭೮ ॥

ತೊರೆಯುತೆ ನಾಣಂ ಶಯನಕೆ ।
ಕರೆದೊಯ್ವ ವಿವೃದ್ಧರಾಗದಾ ಮದಕಂ ತ ॥
ತ್ಪುರವೈರಿಗಮಾಕ್ಷಣದೊಳ್ ।
ಸುರುಚಿರಮುಖದದ್ರಿರಾಜಸುತೆ ವಶೆಯಾದಳ್ ॥ ೭೯ ॥

ತಿರುಗುವ ಕಣ್ ಜಾರುವ ನುಡಿ ।
ಸುರಿವ ಬೆಮರ್ ಬರಿದೆ ನಗೆಯುಮೊಪ್ಪಿರೆ ಗಿರಿಜಾ ॥
ವರಮುಖದೊಳದಂ ಚಿರಮಿ ।
ಶ್ವರಸುರೆ ಬಾಯ್ವಿಟ್ಟು ದಿಟ್ಟಿಯೊಳೆ ಚುಂಬಿಸಿದಂ ॥ ೮೦ ॥

ಸಡಿಲ್ದಿರೆ ಪೊನ್ನುಡೆನೂಲದು ।
ಪಿಡಿಯುತೆ ಗುರುಜಘನಭಾರದುರ್ವಹದುಮೆಯಂ ॥
ಮೃಡನೈದೆ ಪುಗಿಸಿದಂ ನೆನೆ ।
ದೊಡನೊಗೆದ ವಿಭೂತಿಯಾಂತ ಮಣಿಮಯಗೃಹದೊಳ್ ॥

ವರಹಂಸಧವಲವಸ್ತ್ರದ ।
ಸುರಗಂಗಾಪುಲಿನಚಾರುಶಯನದೊಳೀಶಂ ॥
ಗಿರಿಸುತೆಯೊಡನೆ ಮಲಗಿದಂ ।
ಶರದಭ್ರದೆ ಮಲಗುವಂತೆ ರೋಹಿಣಿಯುರಸಂ ॥ ೮೨ ॥

ಶಿರದ ಶಶಾಂಕನ ಪೀಡಿಪ ।
ಕುರುಳಾಕರ್ಷಣದೊಳಮಿತನಖವಿಕ್ಷತಿಯೊಳ್ ॥
ಪರಿದುಡೆನೂಲೊಳ್ ಮತ್ಸರ ।
ಪರದೊಳಮುರೆ ತಳ್ತುತದ್ರತದೆ ತಣಿಯನವಂ ॥ ೮೩ ॥

ಕೆಳಗಿಳಿಯೆ ತಾರೆಗಳ್ ಕೇ ।
ವಳಮಿನೆಯುಳಿಕೊಳಿಟ್ಟ ಕೃಪೆಯೊಳಾಗಿರಿಶಂ ಕ ॥
ಣ್ಗಳ ಮುಚ್ಚಲೆಳಸಿದಂ ತ ।
ಲ್ಲಲನಾಲಿಂಗನದೊಳೊಪ್ಪುತಿರೆ ನಿಜವಕ್ಷಂ ॥ ೮೪ ॥

ವ॥ ಇಂತು ಕಿಂಚಿನ್ನಿದ್ರಾಸಕ್ತನಾಗಿ:—

ವರಮೂರ್ಛನದಿಂದಂ ಕಿ ।
ನ್ನರಮಂಗಳಗೀತರಾಗಮುಣ್ಮಿರೆ ತಾನೆ ॥
ಳ್ಚರಗೊಂಡಂ ಕನಕಾಬ್ಜಾ ।
ಕರಂಗಳೊಡನುದಯದಲ್ಲಿ ತದ್ಭುಧನುತ್ಯಂ ॥ ೮೫ ॥

ವ॥ ಆ ಸಮಯದೊಳ್:—

ತೆರೆಯೊದಗಿಸಿ ಮಾನಸದೋ ।
ಳರಲ್ಚಿ ತಾವರೆಯ ಗಂಧಮಾದನವನದೊಳ್ ॥
ಚರಿಪನಿಲನ ಸೇವಿಸಿದರ್ ।
ತೊರೆದಾಲಿಂಗನವ ತಾಂ ಕ್ಷಣಂ ದಂಪತಿಗಳ್ ॥ ೮೬ ॥

ವ॥ ಮತ್ತಮಾಗಳ್:—

ತೊಡೆಯುಗುರ್ಗಾಯಂಗಳ್ ತ ।
ನ್ಮೃಡನಕ್ಷಿಯ ಸೆಳೆಯೆ ತತ್‌ಕ್ಷಣಂ ಪ್ರಿಯತಮೆ ತಾಂ ॥
ಸಡಿಲ್ದುಡೆಗಂಟಂ ಬಂಧಿಸ ।
ತೊಡಗಿರೆ ತಡೆಗೈದನಾಗಳದನಾಕಾಂತಂ ॥ ೮೭ ॥

ಮುಲಗದೆ ಕೆಂಪಾದಕ್ಷಿಯ ।
ಸುಲಿಪಲ್ಗಾಯಗಳ ತುಟಿಯ ಕೆದರ್ದಲಕದ ಮೇಣ್ ॥
ತಿಲಕಂ ಪೋದುಮೊಯಾಸ್ಯಮ ।
ನೊಲಿದೀಕ್ಷಿಸಿ ರಾಗಿ ಶಂಕರಂ ಬಿನದಿಸಿದಂ ॥ ೮೮ ॥

ಗೆರೆಗೊಂಡು ಸರಿಯೆನಿಸದಂ |
ಬರಮುಂ ದಾರಮುದು ಪರಿಯೆ ಜಗುಳ್ದುಡೆನೂಲಂ ॥
ಚರಣಾಲಕಾಂಕಮುಮನಾಂ |
ತಿರೆ ತಲ್ಪಂ ಬಿಡನದಂ ಶಿವಂ ಬೆಳಗಿನೊಳಂ ॥ ೮೯ ॥

ಮುದಮುಂ ವರ್ಧಿಪ ದಯಿತೆಯ ।
ವದನದ ರಸಮೀಂಟಿಲೆಳಸಿ ತಾಂ ಪಗಲಿರುಳುಂ ॥
ವಿದುಮಮೌಳಿ ವಿಜಯೆ ಬಿನ್ನೈ ।
ಸಿದೊಡಂ ದರ್ಶನಕೆ ಬಂದ ಜನರಂ ನೋಡಂ ॥ ೯೦ ॥

ಪಗಲಿರುಳುಂ ಸಮಾನದೆ ನಗಾತ್ಮಜೆಯೋಳನುರಕ್ತನಾದ ಶಂ ।
ಭುಗೆ ಗತಮಾಯ್ತು ಪಂಚಯುತವಿಂಶತಿವತ್ಸರಮೇಕರಾತ್ರಿವೋಲ್
ಬಗೆವಿನಮಿನ್ನುಮಬ್ಧಿಯ ಕೃಶಾನುಗೆ ತಜ್ಜಲದೋಳದೆಂತೊ ತ ।
ನ್ಮೃಗಧರಮೌಳಿಗಂತೆ ತಣಿವಾಗದು ತದ್ರತಿಜನ್ಯ ಸೌಖ್ಯದೊಳ್ ।೯೧

ಉಮಾರತವರ್ಣನನಾಮಕಾಷ್ಟಮಸರ್ಗಂ

— ಸಂಪೂರ್ಣಂ —

ಕುಮಾರಸಂಭವ ಪ್ರಥಮಭಾಗಂ ಸಂಪೂರ್ಣಂ.

— ಶ್ರೀ —

ಶೋಧನಪತ್ರ.

ಮುನ್ನುಡಿ.

ಪುಟ.	ಪಂಕ್ತಿ	ಅಶುದ್ಧ	ಶುದ್ಧ
III	೭	भारवेः	भारवि

ಕವಿಕುಲಲಲಾಮ ಕಾಳಿದಾಸ.

ಪುಟ.	ಪಂಕ್ತಿ	ಅಶುದ್ಧ	ಶುದ್ಧ
IX	೨೩	ದಿಲ್ಲಂದುವೆ	ದಿಲ್ಲವೆಂದು
X	೨೩	ಸಂಯಮೀ	ಸಂಯಮಿ
XII	೧೯	ಸ್ಯಕ	ತಸ್ಯ
XIV	೧೬	ವಿವಿತನಾಗು	ವಾಗು
XV	೧೧	ಹಿಂಸ್ರಬೆ	ಹಿಂಸ್ಯಸ್ತವ
XVI	೯	ದತೀ	ದ್ಯತೀ

ಕುಮಾರಸಂಭವ.

ಪುಟ.	ಪಂಕ್ತಿ	ಅಶುದ್ಧ	ಶುದ್ಧ
೩	೧೬	ಮಿಟ್ಟೆರ್ದ	ಮಿಟ್ಟೆರ್ದ
೫	೫	ಛೇಧಿಪ	ಛೇದಿಪ
೧೦	೨೦	ನ್ನಂದಿಯಂ	ನ್ನಂದಿನಿಯಂ
೧೪	೧೩	ವಚನಂಗಳಿಂ	ವಚಂಗಳಿಂ
೧೬	೮	ನೇಮಿನ್ನಣಿ	ನೇನಿನ್ನಣಿ
೧೯	೩	ಹೃಂಕೃತಿ	ಹುಂಕೃತಿ
೨೩	೫	ದಿದಿರ್ಪುದರಿಂ	ದಿರ್ಪುದರಿಂ
೨೪	೮	ಪಲ್ಲತ್ಕವನ	ಪಲ್ಲಕ್ಕವನ
೪೨	೭	ಅನಿಮಿತ್ರ್ಯ	ಅನಿಮಿತ್ರ
೪೫	೧	ಇನೆಯ	ಇನಿಯ
೪೯	೨೨	ಕಾಯ್ದಿರು	ಕಾದಿರು
೫೦	೪	ಜರೆದಳ್	ಜರಿದಳ್

,,	,,	ಲಾವಣ್ಯ	ಲಾವಣ್ಯ
೫೧	೪	ಪರಿಪ	ಪರಿವ
,,	೧೨	ಭಾಸ್ಪನ್ಮ	ಭಾಸ್ವನ್ಮ
೬೦	೧೨	ಹ್ಯಂಕೃತಿ	ಹುಂಕೃತಿ
೬೧	೧೨	ಜರೆಗು	ಜರಿಗು
೬೪	೧೫	ಮನೂಹ್ಯಮನಿ	ಮನೂಹ್ಯಮುಮನಿ
೬೫	೧೨	ಶಿರೆದೊಳ	ಶಿರದೊಳ
೭೦	೨	ತಜ್ಗಗ	ತಜ್ಞಗ
೭೨	೪	ನಿಮಿತ್ರ್ಯ	ನಿಮಿತ್ರ
೭೫	೧೭	ರಿನೆಯುರ್	ರಿನಿಯರ್
೮೮	೧೦	ವಿಲೇಷ	ವಿಲೇಪ
೯೪	೧೪	ಗ್ವರರಾಗಳ್	ಗ್ವರರಾಗಲ್
೯೭	೨೩	ಪೆಣ್ಗಳಪರ	ಪೆಣ್ಗಳವರ
೯೮	೬	ಕನೋನ್ಯ	ಕನ್ಯೋನ್ಯ
೧೦೦	೧೬	ಪತಿಗವರ್	ಪತಿಗಳವರ್
೧೦೧	೧೫	ವಚಮನದು	ವಚಮನದಂ
೧೦೪	೬	ಸೆಳೆಯು	ಸೆಳೆಯೆ
೧೦೮	೯	ಜೊೀತ್ಸ್ನಮಂ	ಜ್ಯೋತ್ಸ್ನವ
೧೧೨	೨೩	ತೊಗಿದಳನಿಮಿತ್ಯದೆ	ತೊಡಗಿದಳನಿಮಿತ್ತದೆ
೧೧೪	೧೮	ಚಂದಿರನಿದು	ಚಂದಿರನಿದೊ

ಪೋಷಕರು.

ಶ್ರೀಮಂತ ವೈ. ಮಹಾಬಲೇಶ್ವರಪ್ಪನವರು, ಡಿ. ಬೋ. ಅಧ್ಯಕ್ಷರು ಬಳ್ಳಾರಿ.

,, ಮೋಟೆ, ದೊಡ್ಡಪ್ಪನವರು ಆನರರಿ ಮೇಜಿಸ್ಟ್ರೇಟ್, ಬಳ್ಳಾರಿ.

,, ಜಡೆ, ಸಿದ್ಧಲಿಂಗಪ್ಪನವರು ಬಳ್ಳಾರಿ.

,, ದೇಶನೂರು ರಾಮರೆಡ್ಡಿಯವರು, ಡಿ. ಬೋ. ಮೆಂಬರ ಬಳ್ಳಾರಿ.

,, ಕೀರ್ತಿಶೇಷ ರಾಚೋಟಿ ರಾಮಯ್ಯನವರು,

ಮುನಸಿಪಲ್ ಚೇರಮನ್ನ ಆದವಾನಿ.

ಈ ಪೋಷಕಮಹಾಶಯರಿಗೆಲ್ಲಾ ನನ್ನ ಅಭಿನಂದನಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುವೆನು.

ವೈ. ನಾಗೇಶಶಾಸ್ತ್ರಿ.

ಬೆಳಗಾವಿಯೊಳಗೆ ಸಾತಪ್ಪಾ ಫಡೆಪ್ಪಾ ಚೌಗುಲೆ ಇವರು ತಮ್ಮ ಶ್ರೀಮಹಾವೀರ
ಮುದ್ರಣಾಲಯದಲ್ಲಿ ಮುದ್ರಿಸಿದರು.

ಶ್ರೀ. ವೈ. ನಾಗೇಶಶಾಸ್ತ್ರಿಗಳವರು ಬೆಳಗಾವಿಯಲ್ಲಿ ಪ್ರಕಟಿಸಿದರು.